(b) under Part–AAA, under column 4, for the figures "1000, 940, 880, 820, 760, 700 640, 580, 520. 460, 400, 340, 280, 220, 160 and 160". the figures "500, 470, 440, 410, 380, 350, 320, 290, 260, 230, 200, 170, 140, 110, 80 and 50" shall respectively be substituted ;

(2) in sub-clause (4),-

(a) under Part–C, under column 4, for the figures and the words, "1440, 1380 1320, 1260, 1200, 1140, 1080, 1020, 960, 900, 840, 780, 720, 660, 600 540, 480, 420, 360, 300. 240, nil, nil, nil and nil" the figures and words "1150, 1100, 1050, 1000, 950, 900, 850, 800, 750, 700, 650, 600, 550, 500, 450, 400, 350, 300, 250, 200, 150 100, 50, nil and nil,", shall respectively be substituted ;

(b) under Part–CC, under column 4, for the figures and words "940, 880, 820, 760, 700, 640, 580 520, 460, 400, 340, 280, 220, 160, nil and nil" the figures and words "470. 440. 410, 380, 350, 320. 290, 260, 230, 200, 170, 140, 110, 80, 50 and nil", shall respectively be substituted."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮೇಲ್ಕಂಡ ತಿದ್ದುಪಡಿಯು

ಖಂಡ ೨ರ ಭಾಗವಾಯಿತು

ಖಂಡ ೧ ಇತ್ಯಾದಿ

ಛೇರ್ಮನ್.—ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, "೧೯೮೦ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ."

ಛೇರ್ಮನ್.—ಪ್ರಸ್ತಾವ ಏನೆಂದರೆ "೧೯೮೦ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

(ಮುಂದುವರೆದುದು)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಚರ್ಚೆ ಮಾಡುತ್ತಾ ಕೃಷಿ ವಲಯದಲ್ಲಿ ಕರ್ನಾಟಕ ರಾಜ್ಯ ಹಿಂದೆ ಬಿದ್ದಿದೆ ಮುಂದೆ ನಡೆಯತಕ್ಕಂಥ ಕೆಲಸ ಮಾಡಿಲ್ಲ ಮೋರ್ ಆರ್ ಲೆಸ್ ಸ್ಟ್ಯಾಗ್ನೇಷನ್ ಎಂದು ಏನು ಹೇಳುತ್ತಾರೆ ಆ ಮಟ್ಟವನ್ನು ಮುಟ್ಟಿದ್ದೇವೆ ಎಂದು

ಹೇಳಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಕೃಷಿಗೆ, ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಎರಡು ತಂಹ ಗಳಲ್ಲಿ ರೇಷ್ಮೆ ಅಭಿವೃದ್ಧಿ ಬಗ್ಗೆ ನೀರಾವರಿ ಕ್ಷೇತ್ರದ ಬಗ್ಗೆ ಹಾಗೂ ಭೂ ದಾಖಲೆಗಳನ್ನು ಉತ್ತಮ ಪಡಿಸುವ ಬಗ್ಗೆ ಹಾಗೂ ರೈತರಿಗೆ ಲಾಭದಾಯಕವಾದ ಬೆಲೆ ದೊರೆಯುವಂತೆ ಮಾಡುವುದು ಇವು ಸರ್ಕಾರದ ನೀತಿ ಎಂಬುದರ ಬಗ್ಗೆ ಅವರು ಸೂಕ್ಷ್ಮವಾಗಿ ಸ್ಪಷ್ಟಪಡಿಸಿದ್ದಾರೆ. ಕಳೆದ ಎರಡು ದಶಕಗಳಲ್ಲಿ ಕೃಷಿ ಕ್ಷೇತ್ರ ನಡೆದು ಬಂದ ದಾರಿಯನ್ನು ನಾವು ವಿಶ್ಲೇಷಣೆ ಮಾಡಿದರೆ ಆ ದಾರಿಯನ್ನು ಬದಲಾಯಿಸಿ ಕೊಳ್ಳತಕ್ಕಂಥ ಮತ್ತು ಪ್ರಗತಿದಾಯಕವಾಗಿ ನಡೆಯುವ ಬಗ್ಗೆ ವಿಚಾರ ಮಾಡುವಂತಹ ಸನ್ನಿವೇಶ ಮತ್ತು ಸಂದರ್ಭ ಇವತ್ತು ಬಂದಿದೆ. ಕೃಷಿನೀತಿ ತೀರಾ ಅಗತ್ಯವಾಗಿದೆ. ನಮಗೆ ಇರುವ ಭೂಮಿ ವಿಸ್ತಾರ ವಾಗುವುದಿಲ್ಲ. ಜನ ಸಂಖ್ಯೆ ಮಾತ್ರ ಜಾಸ್ತಿಯಾಗುತ್ತದೆ. ನಮ್ಮ ಹಿಡುವಳಿ ಜಾಸ್ತಿಯಾಗುತ್ತದೆ. ಇರುವ ಭೂಮಿಯಲ್ಲಿ ಉದ್ಯೋಗ ಸೃಷ್ಟಿ ಮಾಡಿಕೊಂಡು ಕೃಷಿ ಕ್ಷೇತ್ರವನ್ನು ಲಾಭದಾಯಕವಾದ ರೀತಿ ಯಲ್ಲಿ ಮಾಡಬೇಕಾಗುತ್ತದೆ. ಅದು ಬಿಟ್ಟರೆ ನಮಗೆ ಬೇರೆ ಪರ್ಯಾಯ ವ್ಯವಸ್ಥೆ ಇಲ್ಲ. ಎರಡು ದಶಕ ಗಳಲ್ಲಿ ಏನಾದರೂ ಬದಲಾವಣೆ ಆಗಿದೆಯೋ ಎಂದು ನಾವು ವಿಶ್ಲೇಷಣೆ ಮಾಡಿದರೆ ಏನೂ ಬದಲಾವಣೆ ಆಗಿಲ್ಲ ದರ ಬಗ್ಗೆ ನಮ್ಮ ಆರ್ಥಿಕ ಸಮೀಕ್ಷೆಯಲ್ಲಿ ಕೊಟ್ಟಿರುವಂತಹ ಅಂಕಿಅಂಶಗಳನ್ನು ಅವಲೋಕನ ಮಾಡಿದರೆ ತಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ೧೯೭೦-೭೧ರಲ್ಲಿ ಸೋಯಿಂಗ್ ಏರಿಯಾ ಎಂದು ಇದ್ದಿದು ಸುಮಾರು ೧೮೩.೮೪ ಲಕ್ಷ ಹೆಕ್ಟೇರ್ ಜಮೀನು. ಅದೇ ೧೯೮೮-೮೯ರಲ್ಲಿ ೧೦೫ ಲಕ್ಷ ಹೆಕ್ಟೇರ್ ಇದೆ. ೧೯೭೦-೭೧ರಲ್ಲಿ ಏನು ಬೆಳೆ ಬೆಳೆಯತಕ್ಕಂಥ ಸಾಗುವಳಿ ಕ್ಷೇತ್ರ, ವಿಸ್ತೀರ್ಣ ಇತ್ತು ೧೯೮೮-೮೯ ರಲ್ಲಿಯೂ ಅದೇ ವಿಸ್ತೀರ್ಣ ಇದೆ. ಅದೇ ರೀತಿ ಮುಂದೆ ನಾವು ನಮ್ಮ ಪ್ರಮುಖವಾದ ಬೆಳೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಅಪೆಂಡಿಕ್ಸ್ ೨(೨)ರಲ್ಲಿ ಕೊಟ್ಟಿದ್ದಾರೆ ೧೯೭೦-೭೧ನೇ ಸಾಲಿನಲ್ಲಿ ಭತ್ತ ಬೆಳೆಯತಕ್ಕಂಥ ಕ್ಷೇತ್ರ ೧೧.೭೧ ಲಕ್ಷ ಹೆಕ್ಟೇರ್ ಭೂಮಿ ಇದ್ದರೆ ಅದು ೧೯೮೯-೯೦ರಲ್ಲಿ ೧೧.೮೭ ಲಕ್ಷ ಹೆಕ್ಟೇರ್ ಭೂಮಿ ಇದೆ. ದೊಡ್ಡ ಪ್ರಮಾಣದಲ್ಲಿ ಹೇಳಿಕೊಳ್ಳುವಂತಹ ಯಾವ ಪ್ರಮಾಣದಲ್ಲಿಯೂ ಕೂಡ ಭತ್ತ ಬೆಳೆಯತಕ್ಕಂಥದ್ದು ಜಾಸ್ತಿಯಾಗಲಿಲ್ಲ. ಅದೇ ರೀತಿ ರಾಗಿ ೧೯೭೦-೭೧ನೇ ಸಾಲಿನಲ್ಲಿ ೧೦.೬೪ ಲಕ್ಷ ಹೆಕ್ಟೇರ್‌ನಲ್ಲಿ ಇದ್ದರೆ ಅದು ೧೯೮೯-೯೦ನೇ ಸಾಲಿನಲ್ಲಿ ೧೧.೯೪ ಲಕ್ಷ ಹೆಕ್ಟೇರ್ ಭೂಮಿ ಯಲ್ಲಿದೆ. ಅದೇ ರೀತಿ ಜೋಳ ಬೆಳೆಯುವ ಭೂಮಿ ೧೯೭೦-೭೧ರಲ್ಲಿ ೨೨.೨೫ ಲಕ್ಷ ಹೆಕ್ಟೇರ್ ಇದ್ದರೆ ಅದು ೧೯೮೯-೯೦ನೇ ಸಾಲಿನಲ್ಲಿ ೨೨.೫೬ ಲಕ್ಷ ಹೆಕ್ಟೇರ್ ಜಮೀನು ಇದೆ. ಹಿಂದೆ ಯಾವ ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಇವತ್ತು ಇದೆ. ೧೯೭೦-೭೧ರಲ್ಲಿ ಎಷ್ಟು ಕ್ಷೇತ್ರದಲ್ಲಿ ಭತ್ತ ಬೆಳೆಯುತ್ತಿದ್ದರೋ, ಎಷ್ಟು ಕ್ಷೇತ್ರದಲ್ಲಿ ಜೋಳ ಬೆಳೆಯುತ್ತಿದ್ದರೋ, ಎಷ್ಟು ಕ್ಷೇತ್ರದಲ್ಲಿ ರಾಗಿ ಬೆಳೆಯುತ್ತಿದ್ದರೋ ಅಷ್ಟೇ ಕ್ಷೇತ್ರ ಇವತ್ತು ಇದೆ. ಹೆಚ್ಚಿಗೆ ಆಗಲಿಲ್ಲ. ಇದೇ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯತಕ್ಕಂಥ ಒಟ್ಟು ಭೂಮಿ ೧೯೭೦-೭೧ರಲ್ಲಿ ೬೪.೧೬ ಲಕ್ಷ ಹೆಕ್ಟೇರ್ ಭೂಮಿ ಇದೆ, ಅದೇ ೧೯೮೯-೯೦ನೇ ಸಾಲಿ ನಲ್ಲಿ ಕೂಡ ೬೪.೬೫ ಹೆಕ್ಟೇರ್ ಭೂಮಿ ಇದೆ ಕೇವಲ ಪಾಯಿಂಟ್ ೪೯ ಲಕ್ಷ ಹೆಕ್ಟೇರ್ ಭೂಮಿ ಮಾತ್ರ ಜಾಸ್ತಿ ಆಗಿದೆ. ಇದರಲ್ಲಿ ಎಲ್ಲಾ ವಿವರಗಳು ಇದೆ, ತಾವು ನೋಡಿ. ನಮ್ಮಲ್ಲಿರತಕ್ಕಂಥ ಕೃಷಿಯಲ್ಲಿ ಎರಡು ದಶಕಗಳಲ್ಲಿ ಎಷ್ಟು ಪ್ರಮಾಣದಲ್ಲಿ ಆಗಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಗೋಧಿ ಬೆಳೆಯುವ ಕ್ಷೇತ್ರ ದಲ್ಲಿ ಆಗಲಿ, ಭತ್ತ ಬೆಳೆಯುವ ಕ್ಷೇತ್ರದಲ್ಲಿ ಆಗಲಿ, ಮೆಣಸು ಬೆಳೆಯುವ ಕ್ಷೇತ್ರದಲ್ಲಿ ಆಗಲಿ, ರಾಗಿ ಬೆಳೆಯುವ ಕ್ಷೇತ್ರದಲ್ಲಿ ಆಗಲಿ, ಜೋಳ ಬೆಳೆಯುವ ಕ್ಷೇತ್ರದಲ್ಲಿ ಆಗಲಿ ಹೆಚ್ಚುವರಿ ಆಗಲಿಲ್ಲ ಬೆಳೆ ಬೆಳೆಯುವ ಕ್ಷೇತ್ರ ಸಹ ವಿಸ್ತರಣೆ ಆಗಲಿಲ್ಲ. ಅದೇ ರೀತಿ ಮುಂದೆ ಹೋಗಿ ನೋಡಿದರೆ, ಬೆಳೆಯತಕ್ಕಂಥ ಪ್ರಮಾಣದಲ್ಲೂ ಕೂಡ ಯಾವ ಬದಲಾವಣೆಯೂ ಆಗಲಿಲ್ಲ. ಬಹಳ ವಿಚಿತ್ರವಾದ ಪ್ರಸಂಗವೆಂದರೆ ಇವತ್ತು ೧೯೭೦-೭೧ನೇ ಸಾಲಿನಲ್ಲಿ ೨೦ ಲಕ್ಷ ಟನ್ ಅಕ್ಕಿಯನ್ನು ನಾವು ಬೆಳೆಯುತ್ತಿದ್ದರೆ ಅದೇ ೧೯೮೯-೯೦ನೇ ಸಾಲಿನಲ್ಲಿ ೨೨.೨೦ ಲಕ್ಷ ಟನ್ ಅಕ್ಕಿಯನ್ನು ಬೆಳೆಯುತ್ತಿದ್ದೇವೆ ಇವತ್ತು ರಾಗಿಯನ್ನು ತೆಗೆದುಕೊಂಡರೆ. ೧೯೭೦-೭೧ನೇ ಸಾಲಿನಲ್ಲಿ ೮.೯೨ ಲಕ್ಷ ಟನ್ ಬೆಳೆಯುತ್ತಿದ್ದರೆ ಅದೇ ೧೯೮೯-೯೦ನೇ ಸಾಲಿನಲ್ಲಿ ೧೪.೩೪ ಲಕ್ಷ ಟನ್ ರಾಗಿಯನ್ನು ಬೆಳೆಯುತ್ತಿದ್ದೇವೆ. ಅದೇ ಜೋಳವನ್ನು ತೆಗೆದುಕೊಂಡರೆ ೧೯೭೦-೭೧ನೇ ಸಾಲಿನಲ್ಲಿ ೧೬.೬೫ ಲಕ್ಷ ಟನ್ ಬೆಳೆಯುತ್ತಿದ್ದರೆ ಅದೇ ೧೯೮೯-೯೦ನೇ ಸಾಲಿನಲ್ಲಿ ೧೬.೧೮ ಲಕ್ಷ ಟನ್ ಜೋಳವನ್ನು ಬೆಳೆಯುತ್ತಿದ್ದೇವೆ. ಅಂದರೆ ಒಟ್ಟು ಆಹಾರ ಪದಾರ್ಥಗಳನ್ನು ೧೯೭೦-೭೧ನೇ ಸಾಲಿನಲ್ಲಿ ೫೭.೪೬ ಲಕ್ಷ ಟನ್ ಬೆಳೆಯುತ್ತಿದ್ದರೆ ಅದೇ ೧೯೮೯-೯೦ನೇ ಸಾಲಿನಲ್ಲಿ ೬೬.೯೦ ಲಕ್ಷ ಟನ್ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದೇವೆ. ಇದನ್ನು ವಿಶ್ಲೇಷಣೆ ಮಾಡಿದರೆ ನಾವು ಗಣನೀಯವಾಗಿ ಹೆಚ್ಚಳವನ್ನು ಸಾಧಿಸಿಲ್ಲ. ದವಸಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ನಾವು ಬೆಳೆಯಲಿಲ್ಲ. ಅದೇ ರೀತಿಯಲ್ಲಿ ನಾವು ರಾಸಾಯನಿಕ ಗೊಬ್ಬರವನ್ನು ಹಾಕುವಂತಹ ವಿಚಾರಕ್ಕೆ ಬಂದರೆ ೧೯೭೦-೭೧ನೇ ಸಾಲಿನಲ್ಲಿ ೫.೩೦ ಲಕ್ಷ ಟನ್‌ಗಳನ್ನು ಉಪಯೋಗ ಮಾಡಿದ್ದರೆ ಅದೇ ೧೯೮೯-೯೦ನೇ ಸಾಲಿನಲ್ಲಿ ೭.೫೦ ಲಕ್ಷ ಟನ್‌ನಷ್ಟು ರಾಸಾಯನಿಕ ಗೊಬ್ಬರವನ್ನು ಉಪಯೋಗ ಮಾಡಲಾಗಿದೆ. ಅಂದರೆ ಶೇಕಡಾ ೪ರಷ್ಟು

ಮಾತ್ರ ಹೆಚ್ಚಾಗಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ನಮ್ಮ ಕೃಷಿ ಕ್ಷೇತ್ರದಲ್ಲಿ. ಬೆಳೆಯನ್ನು ಬೆಳೆಯತಕ್ಕ ಕ್ಷೇತ್ರವನ್ನು ವಿಸ್ತಾರ ಮಾಡುವುದರಲ್ಲಾಗಲೀ ಅಥವಾ ಹೆಚ್ಚು ಉತ್ಪಾದನೆ ಮಾಡತಕ್ಕಂಥಾದ್ದರಲ್ಲಿಯಾಗಲಿ ನಾವು ಯಾವುದೇ ದೊಡ್ಡ ಪ್ರಮಾಣದಲ್ಲಿ ಸಾಧನೆಯನ್ನು ಮಾಡಲಿಲ್ಲ. ಒಟ್ಟಿನಲ್ಲಿ ಯಥಾಸ್ಥಿತಿ ಇದೆ. ಯಥಾಸ್ಥಿತಿ ಹಾಗೇ ಇದ್ದಮೇಲೆ ಹೆಚ್ಚು ಜನರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯವಿಲ್ಲ, ನಮ್ಮ ರೈತರ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಸಾಧ್ಯವಿಲ್ಲ, ನಮ್ಮ ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಮ್ಮ ಸ್ಥಿತಿ ಯಥಾಸ್ಥಿತಿ ಇದೆ ಎನ್ನುವ ವಾದಕ್ಕೋಸ್ಕರವಾಗಿ ಈ ಅಂಕಿ ಅಂಶಗಳನ್ನು ಕೊಟ್ಟು ನಾನು ಸಮರ್ಥನೆ ಮಾಡುತ್ತಿದ್ದೇನೆ ಆದ್ದರಿಂದ ಇವತ್ತು ರೈತನಿಗೆ ಇರತಕ್ಕಂಥ ಸಮಸ್ಯೆ ಏನೆಂದರೆ, ಮತ್ತು ಮೂಲಭೂತವಾಗಿ ಅವನಿಗೆ ಬೇಕಾಗಿರತಕ್ಕಂಥಾದ್ದು ಏನೆಂದರೆ, ರೈತನ ಭೂಮಿಗೆ ನೀರು ಬೇಕು, ಅವನಿಗೆ ಒಳ್ಳೆಯ ಬೀಜ ಬೇಕು, ಸಕಾಲದಲ್ಲಿ ಗೊಬ್ಬರ ಸಿಗಬೇಕು, ಸಕಾಲದಲ್ಲಿ ಅವನಿಗೆ ಹಣಕಾಸಿನ ನೆರವು ಸಿಗಬೇಕು. ಜೊತೆಗೆ ಅವನು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಸಿಗಬೇಕು ಹಾಗೂ ಎಲ್ಲಾ ರೀತಿಯಿಂದಲೂ ರಕ್ಷಣೆ ಸಿಗಬೇಕು, ಶೋಷಣೆಯಾಗಬಾರದು. ಇವತ್ತು ಪ್ರಮುಖವಾಗಿ ಆಗಬೇಕಾಗಿರುವ ಕೆಲಸ ಎಂದರೆ ಮೇಲೆ ತಿಳಿಸಿರುವ ಎಲ್ಲಾ ವಸ್ತುಗಳು ರೈತರುಗಳಿಗೆ ಸಕಾಲದಲ್ಲಿ ಸಿಗಬೇಕು. ಇವತ್ತು ನಾವು ವಿಶೇಷವಾಗಿ ಹೆಚ್ಚು ಹಣವನ್ನು ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ತಜ್ಞರು ಲೆಕ್ಕ ಹಾಕಿರುವ ಪ್ರಕಾರ ನೀರಾವರಿಗೆ ಬಳಸಿಕೊಳ್ಳುವುದಕ್ಕೆ ಸಿಗುವಂಥ ಒಟ್ಟು ನೀರಿನ ಪ್ರಮಾಣ ೧೬೦೦ ಟಿ ಎಂ ಸಿ ಎಫ್. ಟಿ. ಯಷ್ಟು ಇವತ್ತು ಸಿಗತಕ್ಕಂಥ ನೀರಿನಲ್ಲಿ ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿಗೆ ಬಳಸಿಕೊಳ್ಳುವುದಕ್ಕೆ ಇವತ್ತಿನವರೆಗೆ ನಮಗೆ ಸಾಧ್ಯವಾಗಿದ್ದರೆ ನಾವು ಇವತ್ತು ಸುಮಾರು ೧೩ ಲಕ್ಷ ಹೆಕ್ಟೇರ್‌ನಷ್ಟು ಭೂಮಿಗೆ ಶಾಶ್ವತವಾದಂಥ ಅಥವಾ ಅಶೂರ್ ಇರಿಗೇಷನ್ ಕೊಡುವುದಕ್ಕೆ ಸಾಧ್ಯವೆ ? ಈ ದೊಡ್ಡ ಪ್ರಮಾಣದ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಗೆ ಇನ್ನೂ ಸುಮಾರು ೪ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅವುಗಳನ್ನು ಪೂರ್ಣ ಮಾಡಿದರೂ ಕೂಡ ಅದರ ವಿಸ್ತೀರ್ಣ ೧೯ ಲಕ್ಷ ಹೆಕ್ಟೇರ್‌ಗಿಂತ ಜಾಸ್ತಿ ಹೋಗುವುದಕ್ಕೆ ಸಾಧ್ಯವಿಲ್ಲ. ಅಷ್ಟು ಸೀಮಿತವಾದಂಥ ಪ್ರದೇಶ ಇದೆ, ಸೀಮಿತವಾದಂಥ ತಾಲ್ಲೂಕು ಸೀಮಿತವಾದಂಥ ಜಿಲ್ಲೆ ಇದೆ. ಆದ್ದರಿಂದ ದೊಡ್ಡ ಪ್ರಮಾಣದಲ್ಲಿ ನೀರಾವರಿ ಕ್ಷೇತ್ರವನ್ನು ನಾವು ಮಾಡುವುದಕ್ಕೆ ಸಾಧ್ಯವಾಗಿಲ್ಲ, ಇದರ ಇತಿಮಿತಿಯೊಳಗೇ ಮಾಡಬೇಕು. ಆದುದರಿಂದ ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಕ್ಷೇತ್ರಗಳನ್ನು ಮಾಡುವುದರಿಂದ ನಮ್ಮ ಎಲ್ಲಾ ಕೃಷಿಕರಿಗೆ ಅಂದರೆ ೧ ಕೋಟಿ ೩ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ೪೪ ಲಕ್ಷ ಹಿಡುವಳಿದಾರರು ಏನಿದ್ದಾರೆ ಅವರಿಗೆಲ್ಲಾ ನೀರು ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಬೇರೆ ಮೂಲಗಳಿಂದ ಅವರಿಗೆ ನೀರಾವರಿ ವ್ಯವಸ್ಥೆಯನ್ನು ಮಾಡಿ ಅವರು ತಮ್ಮ ಉತ್ಪಾದನೆಯನ್ನು ಹೆಚ್ಚಿಗೆ ಮಾಡುವಂಥ ಒಂದು ಪರಿಸ್ಥಿತಿಯನ್ನು, ಸನ್ನಿವೇಶವನ್ನು ನಾವು ಸೃಷ್ಟಿಸಬೇಕಾಗಿದೆ.

ಇವೊತ್ತು ಸಣ್ಣ ನೀರಾವರಿ ಕ್ಷೇತ್ರದಲ್ಲಿ ನಮ್ಮ ರಾಜ್ಯದಲ್ಲಿ ಸರಕಾರದ ಲೆಕ್ಕಾಚಾರದ ಪ್ರಕಾರ ರಿಜಿಸ್ಟರ್ ಆಗಿರತಕ್ಕಂಥ ಕೆರೆಗಳ ಸಂಖ್ಯೆ ೩೫ ಸಾವಿರ. ಹಾಗೆಯೇ ರಿಜಿಸ್ಟರ್ ಆಗದೇ ಇರತಕ್ಕಂಥವುಗಳು ಸುಮಾರು ೫ ಸಾವಿರಕ್ಕೂ ಹೆಚ್ಚಿಗೆ ಇರಬಹುದು. ಅಂದರೆ ನಮ್ಮಲ್ಲಿ ಸುಮಾರು ೪೦ ಸಾವಿರಕ್ಕಿಂತಲೂ ಹೆಚ್ಚಿಗೆ ಕೆರೆಗಳು ಇವೆ. ಈ ಕೆರೆಗಳು ಇಂದು ಅಥವ ನಿನ್ನೆ ನಿರ್ಮಾಣ ಮಾಡಿದಂಥವುಗಳಲ್ಲ. ಅರಸರ ಕಾಲದಲ್ಲಿ ಮಾಡಿದಂಥವುಗಳಾಗಿವೆ. ಶಿವಪ್ಪ ನಾಯಕರ ಕಾಲದಲ್ಲಿ, ಕೆಂಪೇಗೌಡರ ಕಾಲದಲ್ಲಿ, ಹೀಗೆ ಬೇರೆ ಬೇರೆ ರಾಜ ಮಹಾರಾಜರುಗಳ ಕಾಲದಲ್ಲಿ ಇವುಗಳನ್ನು ನಿರ್ಮಾಣ ಮಾಡಿದ್ದರು. ಇವುಗಳಲ್ಲಿ ಅಷ್ಟೊಂದು ತಾಂತ್ರಿಕತೆಯು ಇಲ್ಲದಿದ್ದರೂ ಕೂಡ ಆ ಕಾಲದಲ್ಲಿ ಅವುಗಳನ್ನು ಕಟ್ಟುವಾಗ ಅವರು ಅಳವಡಿಸಿದಂಥ ತಾಂತ್ರಿಕತೆ ಇಂದಿಗೂ ಮೆಚ್ಚುವಂಥಾದ್ದು. ಎಲ್ಲಿ ಕೆರೆಯನ್ನು ತೋಡಿಸಬೇಕ , ಅದರ ಗಾತ್ರ ಹೇಗಿರಬೇಕು, ಊರಿನ ನೀರು ಅಲ್ಲಿಗೆ ಬಂದು ಹೇಗೆ ತುಂಬಿಕೊಳ್ಳಬೇಕು ಎಂಬುದನ್ನು ಗಮನಿಸಿದರೆ ಅವರು ಬಳಸಿದ ತಾಂತ್ರಿಕತೆ ಅರ್ಥವಾಗುತ್ತದೆ. ಆ ತಾಂತ್ರಿಕತೆಯನ್ನು ನಾವುಗಳು ಇಂದು ಬಳಸಿಕೊಳ್ಳುತ್ತಾ ಇಲ್ಲ ಇವತ್ತಿಗೂ ಅವರು ಕಟ್ಟಿದಂಥ ಕೆರೆಗಳ ಏರಿ ಒಡೆದಿಲ್ಲ. ಅಥವಾ ಬೇರೆ ಯಾವುದೇ ರೀತಿಯಲ್ಲಿ ಹಾಳಾಗಿಲ್ಲ. ಅಂತಹ ಒಂದು ಪ್ರಾಮಾಣಿಕತೆಯನ್ನು ಇವೊತ್ತು ನಾವು ಬಳಸಿಕೊಳ್ಳುತ್ತಿಲ್ಲ. ಸರಕಾರದ ಲೆಕ್ಕದ ಪ್ರಕಾರ ಸಣ್ಣ ಕೆರೆಗಳಿಂದ ೯ ಲಕ್ಷ ಹೆಕ್ಟೇರ್ ಭೂಮಿಗೆ ನೀರು ಸಿಗುತ್ತದೆ. ಆದರೆ ವಾಸ್ತವಿಕವಾಗಿ ಅಷ್ಟು ಇಲ್ಲ. ೧೦೦-೨೦೦-೩೦೦ ವರ್ಷಗಳ ಹಿಂದೆ ಕಟ್ಟಿದಂಥ ಕೆರೆಗಳು ಎಷ್ಟು ಉತ್ತಮವಾಗಿದ್ದರೂ ಹೂಳು ಬೇಕಾದಷ್ಟು ತುಂಬಿಕೊಂಡಿರುವುದರಿಂದ ನೀರು ಕಡಿಮೆ ಪ್ರಮಾಣದಲ್ಲಿ ತುಂಬಿಕೊಳ್ಳುತ್ತದೆ. ಆ ಕೆರೆಗಳಲ್ಲಿ ವಾಸ್ತವವಾಗಿ ಎಷ್ಟು ನೀರು ಸಂಗ್ರಹವಾಗಬೇಕೋ ಅಷ್ಟು ಸಂಗ್ರಹವಾಗುತ್ತಾ ಇಲ್ಲ. ಈ ೯ ಲಕ್ಷ ಹೆಕ್ಟೇರ್ ಭೂಮಿಗೆ ನೀರು ಕೊಡುವ ಸಾಮರ್ಥ್ಯ ಆ ೪೦ ಸಾವಿರ ಕೆರೆ

ಗಳಿಗೆ ಇದ್ದರೂ ಕೂಡ ಇವೊತ್ತು ಹೂಳು ತುಂಬಿಕೊಂಡಿರುವುದರಿಂದಾಗಿ ಅದರ ಅರ್ಧ ಸಾಮರ್ಥ್ಯವನ್ನು ಕೂಡ ಅವುಗಳು ಹೊಂದಿಲ್ಲ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ತರಹದ ಕೆರೆಗಳಲ್ಲಿನ ಹೂಳು ತೆಗೆಯುವ ಬಗ್ಗೆ ಸೂಕ್ಷ್ಮವಾಗಿ ಆಲೋಚಿಸಿದ್ದಾರೆ. ಮಾನ್ಯ ಸದಸ್ಯರಿಂದ ಶ್ರೀ ನಂಜುಂಡ ಸ್ವಾಮಿಯವರು ದೇಶಿಯ ನೀರಾವರಿ ಪದ್ಧತಿಯನ್ನು ನಾವು ಹೆಚ್ಚು ಹೆಚ್ಚಾಗಿ ಅನುಸರಿಸಬೇಕಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ವಿದೇಶಿ ನೀರಾವರಿ ಪದ್ಧತಿಯಿಂದ ನಮ್ಮ ಎಲ್ಲಾ ಭೂಮಿಗೆ ನೀರಾವರಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ನಾವು ಸಾಕಷ್ಟು ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ ಕೃಷ್ಣಾ ಕಾವೇರಿ ನೀರಾವರಿ ಯೋಜನೆಗಳಿಗಾಗಿ ನಾವು ೨,೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದು ಇನ್ನೂ ಪೂರ್ಣವಾಗ ಬೇಕಾದರೆ ಇನ್ನೂ ೪ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್, ಹಾರಂಗಿ, ಕಬಿನಿ ಇವುಗಳಲ್ಲಿ ನೀರು ನಿಂತಿದೆ. ಹೇಮಾವತಿ ನೀರನ್ನು ಇಂದಿಗೂ ನಮಗೆ ಬಳಸಿಕೊಳ್ಳುವುದಕ್ಕಾಗುತ್ತಿಲ್ಲ, ಅದು ಅರ್ಧಕ್ಕೆ ನಿಂತಿದೆ. ಹಾಗೆಯೇ ವಾರಾಹಿ ಪ್ರಾಜೆಕ್ಟ್ ಮಾಡಿ ಸಮುದ್ರಕ್ಕೆ ಹೋಗುತ್ತಿದ್ದ ನೀರನ್ನು ತಡೆಹಿಡಿದಿದ್ದೇವೆ. ಆದರೆ ಅದರ ಬಳಕೆಗೆ ಪ್ರಾಜೆಕ್ಟ್ ಅಪೂರ್ಣವಾದ ಕಾರಣ ಸಾಧ್ಯವಾಗುತ್ತಾ ಇಲ್ಲ. ಸುಮಾರು ೧೯ ಸಣ್ಣ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಇವೆ. ಅದಕ್ಕೆಲ್ಲಾ ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಆದರೆ ಅವುಗಳನ್ನು ಪೂರ್ಣಗೊಳಿಸಲಾರದ ಕಾರಣದಿಂದಾಗಿ ಅವುಗಳ ಬಳಕೆ ಮಾಡುವುದಕ್ಕಾಗುತ್ತಿಲ್ಲ. ಅವುಗಳು ಹಾಗೆಯೇ ನಿಂತು ಹೋಗಿವೆ ಆದುದರಿಂದ ಈ ಅಪೂರ್ಣ ವ್ಯವಸ್ಥೆಗಳನ್ನು ಏನು ಮಾಡಿಕೊಂಡಿದ್ದೇವೆ ಅವುಗಳನ್ನು ಪೂರ್ಣಗೊಳಿಸಿಕೊಳ್ಳಬೇಕು. ದೇಶೀಯ ನೀರಾವರಿ ಪದ್ಧತಿಗೆ ಅನುಗುಣವಾಗಿ ಕಟ್ಟಿರತಕ್ಕಂಥ ಕೆರೆಗಳನ್ನು ನಾವು ಹೂಳು ತೆಗೆಸಿ ಉಪಯೋಗಿಸಿಕೊಳ್ಳುವ ಅಗತ್ಯ ಇದೆ. ಇವೊತ್ತಿನ ದಿವಸಗಳಲ್ಲಿ ನಾವು ಹೊಸದಾಗಿ ದೊಡ್ಡ ಯೋಜನೆಗಳನ್ನು ಮಾಡತಕ್ಕಂಥ ಸನ್ನಿವೇಶಗಳು ಕಡಿಮೆ. ಆದುದರಿಂದ ಇದ್ದ ವ್ಯವಸ್ಥೆಯನ್ನು ರೂಢಿಸಿಕೊಂಡು ಉಳಿಸಿಕೊಳ್ಳಬೇಕಾದ ಅಗತ್ಯತೆಯೂ ಇದೆ

೨-೪೦ ಪಿ. ಎಂ.

ಒಂದೂವರೆ ಸಾವಿರ ವರ್ಷದ ಹಿಂದಿನ ಕುಣಿಗಲ್ ಕೆರೆ ಇವೆ. ಅದರ ಮೇಲೆ ಒಂದು ಪದಾನೇ ಇದೆ.

ಒಬ್ಬ ಮಾನ್ಯ ಸದಸ್ಯರು.—ಆ ಪದವನ್ನು ಹಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಕುಣಿಗಲ್ ಕೆರೇ ಮೇಲೆ ನೋಡೋರಿಗೊಂದ್ ಐಭೋಗ ಅಂತ. ಹೀಗೆ ದೇಶೀಯ ನೀರಾವರಿ ಪದ್ಧತಿ ಶಾಶ್ವತ ಅವನ್ನು ಉಳಿಸಿಕೊಳ್ಳಬೇಕಾದರೆ ನಮ್ಮ ಕೆರೆಗಳ ಸಾಮರ್ಥ್ಯ ಹೆಚ್ಚಿಸಬೇಕು. ಅದಕ್ಕಾಗಿ ತಾಂತ್ರಿಕತೆಯನ್ನು ಬೆಳೆಸಿಕೊಳ್ಳಬೇಕು. ಏಕೆಂದರೆ ನಾನು ಲೋಕೋಪಯೋಗಿ ಸಚಿವನಿದ್ದಾಗ ಅಂದಾಜು ಮಾಡಿಸಿದೀನಿ. ಹೂಳು ಎತ್ತಿಸೋ ಬದಲು ಹೊಸದಾಗಿ ಕೆರೇನೆ ಕಟ್ಟಬಹುದು ಎಂದು ಅಧಿಕಾರಿಗಳು ಹೇಳುತ್ತಾರೆ. ಹೂಳು ತೆಗೆಸುವುದು ಬಹಳ ಕಷ್ಟ ಇದೆ. ಮಲೆನಾಡು ಪ್ರದೇಶದಲ್ಲಂತೂ ಕೆರೆಗಳಲ್ಲಿ ಪೂರ್ಣವಾಗಿ ನೀರು ಖಾಲಿ ಮಾಡಬೇಕು, ಆಮೇಲೆ ಒಣಗಬೇಕು. ಮ್ಯಾನುಯಲ್ ಲೇಬರ್‌ನಿಂದ ಹೂಳನ್ನು ತೆಗೆಸಬೇಕು. ನಾನು ಇತ್ತೀಚೆಗೆ ಸಚಿವರಾದ ಶ್ರೀ ಕೆ.ಜೆ. ಜಾರ್ಜ್‌ರವರ ಕಚೇರಿಗೆ ಹೋಗಿದ್ದಾಗ ಒಬ್ಬ ಡ್ರೆಜಿಂಗ್ ಎಕ್ಸ್‌ಪರ್ಟ್ ಬಂದಿದ್ದರು ಅವರು ಹೇಳಿದರು, ಅದನ್ನೆಲ್ಲ ಮಾಡುವುದಕ್ಕೆ ಯಂತ್ರಗಳಿವೆ. ಬಿ.ಇ.ಎಂ.ಎಲ್‌ಗೆ ಹೇಳಿದರೆ ಅವರು ಕೊಡುವ ಯಂತ್ರದಿಂದ ೫೦ ಅಡಿ ದೂರದಿಂದಲೇ ಹೂಳನ್ನು ಬಾಚಿ ತೆಗೆಯುವ ಯಂತ್ರ ಕೊಡುವರಂತೆ ಈ ರೀತಿ ಹೊಸ ಟೆಕ್ನಾಲಜಿ ಬಳಸಿಕೊಂಡು ಎಷ್ಟು ಕೆರೆಗಳ ಹೂಳು ತೆಗೆದರೆ ಕೃಷಿ ಅಭಿವೃದ್ಧಿಯಾಗುತ್ತದೆ ಮತ್ತು ನಾವು ೯ ಲಕ್ಷ ಹೆಕ್ಟೇರಿಗೆ ನೀರು ಕೊಡಬೇಕೂಂತ ಏನು ಅಂದಾಜು ಮಾಡಿಕೊಂಡಿದ್ದೇವೆ. ಅದನ್ನು ಸಾಧಿಸಬಹುದು. ಆದ್ದರಿಂದ ಸರ್ಕಾರ ಈ ದಿಸೆಯಲ್ಲಿ ಸ್ವಲ್ಪ ಆಲೋಚನೆ ಮಾಡಬೇಕು. ಇದಕ್ಕೆ ಹೆಚ್ಚಿನ ಹಣ ಕೊಡಬೇಕು. ಮಾನ್ಯ ನಂಜುಂಡಸ್ವಾಮಿಯವರು ಪ್ರಸ್ತಾಪ ಮಾಡುತ್ತಾ ಅಂತರ್ಜಲವನ್ನು ಬಳಸಿಕೊಳ್ಳಬೇಕು ಎಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಏಕೆಂದರೆ, ರೈತರಿಗೆ ಮುಕ್ತಿ ದೊರಕಬೇಕೆಂದರೆ ಅದು ಸಣ್ಣ ನೀರಾವರಿ ಮೂಲಕ, ಅದನ್ನು ಕೈಬಿಟ್ಟರೆ ಮುಕ್ತಿ ಇಲ್ಲ. ಇಲಾಖೆಗಳಿಗೆ ದುಡ್ಡನ್ನೂ ಕೂಡ ಜಾಸ್ತಿ ಇಡಬೇಕು. ಹಿಂದೆ ಕೃಷಿ ಇಲಾಖೆಯವರು ಸೀಡ್ಸ್ ಕಿಟ್ ಅಂತ ಕೊಡುತ್ತಿದ್ದರು, ನಮ್ಮಲ್ಲಿ ಕೃಷಿಗೆ ಸಂಬಂಧಿಸಿದಂತೆ ಎರಡು ಇಲಾಖೆಗಳು ಇವೆ. ಒಂದು ಕೃಷಿ ಇಲಾಖೆ, ಇನ್ನೊಂದು ಕಂದಾಯ ಇಲಾಖೆ. ಕೃಷಿಗೆ ಒಂದೇ ಇಲಾಖೆ ಇರಬೇಕಾಗಿತ್ತು. ಇವತ್ತು ಏನು ವಿಚಾರ ಮಾಡಬೇಕೆಂದರೆ, ದೇಶೀಯ ನೀರಾವರಿ ಬಗ್ಗೆ ಹೆಚ್ಚು ಆಲೋಚನೆ ಮಾಡಬೇಕು. ದೇಶಿಯ ನೀರಾವರಿ ಬಗ್ಗೆ ಹೆಚ್ಚು ವಿಚಾರ ಮಾಡಬೇಕು. ಸಣ್ಣ ನೀರಾವರಿ ಬಗ್ಗೆ ನಾವು ಹೆಚ್ಚು ಲಕ್ಷ್ಯ ಕೊಟ್ಟಿಲ್ಲ. ವರ್ಷಕ್ಕೆ ೧೦-೧೫ ಕೋಟಿ ಕೊಡುತ್ತೇವೆ, ಆದರೆ ವಿಷ್ಟು ವಿಸ್ತೀರ್ಣಕ್ಕೆ

ನೀರು ಕೊಡಬೇಕೆಂದು ಸರ್ಕಾರದಲ್ಲಿ ಗೈಡ್ ಲೈನ್ಸ್ ಇದೆ. ಅದರಲ್ಲೂ ಸಣ್ಣ ನೀರಾವರಿಗಾಗಿ ಏನೂ ಕೊಡುವುದಿಲ್ಲ. ಸಣ್ಣ ಹಳ್ಳ ಕೆರೆಗಳಿಗೆ ೫ ಲಕ್ಷ ಖರ್ಚು ಮಾಡಿದರೆ ೧೦೦ ಎಕರೆಗೆ ೫೦ ಎಕರೆಗೆ ನೀರು ಕೊಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ, ಬಿಜಾಪುರ ಜಿಲ್ಲೆಗಳಿಗೆ ಹೋದರೆ ಬಾವಿಗಳಿಂದ ನೀರಾವರಿ ಮಾಡಿ ಸಾವಿರಾರು ಎಕರೆಯಲ್ಲಿ ಬೆಳೆಯುತ್ತಿದ್ದಾರೆ. ಆದ್ದರಿಂದ ಅಂತರ್ಜಲ ಉಪಯೋಗಿಸಿಕೊಳ್ಳಬೇಕು. ಬೋರ್‌ವೆಲ್‌ಗಳನ್ನು ಚೆನ್ನಾಗಿ ಬಳಸಿಕೊಳ್ಳಬೇಕು. ಕೋಲಾರ ಜಿಲ್ಲೆಯಲ್ಲಿ ವಾಟರ್ ಲೆವೆಲ್ ಕೆಳಗೆ ಹೋಗುತ್ತಿದೆ ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ನಂಜುಂಡಸ್ವಾಮಿಯವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ ನಾವು ನೀರು ಬಳಸಿಕೊಳ್ಳುತ್ತಿದ್ದಂತೆ ಅಂತರ್ಜಲ ಕೆಳಕ್ಕೆ ಹೋಗುತ್ತಿದೆ. ಆದ್ದರಿಂದ ಅಂತರ್ಜಲ ಎಲ್ಲೆಲ್ಲಿ ಜಾಸ್ತಿ ಇದೆ ಎಂಬುದನ್ನು ಸರ್ವೆ ಮಾಡಿಸಿ. ಇದರ ಸರ್ವೇಕ್ಷೆ ಮಾಡಿ ರಿಗ್ ಉಪಯೋಗಿಸಿಕೊಂಡು ನೀರನ್ನು ಪಡೆದುಕೊಳ್ಳಬೇಕು ಕೆರೆ ಮುಂತಾದ ನೀರಿನ ಯೋಜನೆಗಳನ್ನು ಕೇಳುವುದಿಲ್ಲ. ಒಂದು ಜನರ ಬೇಡಿಕೆ ಮೇಲೆ ಕೆರೆಯನ್ನು ಮಾಡುತ್ತೇವೆ, ಅಣೆಕಟ್ಟನ್ನು ಜನರ ಬೇಡಿಕೆ ಮೇಲೆ ಮಾಡುತ್ತೇವೆ. ಅದೇ ರೀತಿಯಲ್ಲಿ ಬೋರ್‌ವೆಲ್‌ಗಳಲ್ಲಿ ಎಲ್ಲಿ ಅಂತರ್‌ಜಲ ಚೆನ್ನಾಗಿ ಇದೆ. ನೀರಿನ ಅನುಕೂಲತೆ ದೊರೆಯುತಕ್ಕಂಥ ಸನ್ನಿವೇಶ ಸಂದರ್ಭಗಳು ಸಿಗುತ್ತದೆ ಎನ್ನತಕ್ಕಂಥ ಕಡೆಗಳಲ್ಲಿ ನಾವು ನೇರವಾಗಿ ಮೈನರ್ ಇರಿಗೇಷನ್ ಇಲಾಖೆಯ ಮುಖಾಂತರ ಅದಕ್ಕೆ ವಿಶೇಷವಾದಂಥ ಘಟಕವನ್ನು ತೆರೆದು ನಾವು ನೇರವಾಗಿ ರೈತರ ಭೂಮಿಯಲ್ಲಿ ನೀರನ್ನು ತೆಗೆಯಬೇಕು. ಆಗ ಅದರ ಪ್ರಯೋಜನ ಒಬ್ಬರಿಗೆ ಸಿಗಬಹುದು ಅಥವಾ ಹೆಚ್ಚು ಜನರಿಗೆ ಸಿಗಬಹುದು. ಅಣೆಕಟ್ಟು ಕಟ್ಟಿ ನೀರನ್ನು ಕೊಟ್ಟಾಗ, ಕೆರೆಯನ್ನು ಕಟ್ಟಿ ನೀರನ್ನು ಕೊಟ್ಟಾಗ ಅಥವಾ ಏತ ನೀರಾವರಿ ಮಾಡಿ ನೀರನ್ನು ಕೊಟ್ಟಾಗ ಹೇಗೆ ಅವರಿಂದ ನೀರಿನ ತೆರಿಗೆಯ ರೂಪದಲ್ಲಿ ನಾವು ಆದಾಯವನ್ನು ಬರಮಾಡಿಕೊಳ್ಳುತ್ತೇವೆಯೋ ಅದೇ ರೀತಿಯಲ್ಲಿ ಒಬ್ಬ ರೈತನಿಗೆ ೫೦ ಸಾವಿರ ರೂಪಾಯಿಯನ್ನು ಖರ್ಚು ಮಾಡಿ ಒಂದು ಬೋರ್‌ವೆಲ್ಲನ್ನು ತೆಗೆಸಿ ಅವನಿಗೆ ಕೊಟ್ಟು ಐದು ಎಕರೆ ಹತ್ತು ಎಕರೆಗೆ ನೀರಾವರಿ ಆದರೆ ಅವನಿಂದ ನೀರಿನ ತೆರಿಗೆಯ ರೂಪದಲ್ಲಿ ಹಣವನ್ನು ತೆಗೆದುಕೊಳ್ಳತಕ್ಕಂಥ ಕೆಲಸವನ್ನು ಇವತ್ತು ಮಾಡಬೇಕಾಗಿದೆ ಆದ್ದರಿಂದ ನಮ್ಮ ರೈತರಿಗೆ ಮುಕ್ತಿ ದೊರೆತೀತು ಮತ್ತು ಹೆಚ್ಚು ನೀರನ್ನು ನಾವು ಒದಗಿಸಿ ಕೊಡುತ್ತೇವೆ ಎನ್ನತಕ್ಕಂಥದ್ದರ ಬಗ್ಗೆ ಆಲೋಚಿಸತಕ್ಕಂಥ ಅವಶ್ಯಕತೆ ಇದೆ. ಇದನ್ನು ಮಾಡಬೇಕೆಂದು ನಮ್ಮ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ನಾನು ಒತ್ತಾಯಪಡಿಸುತ್ತೇನೆ. ವಿಶೇಷವಾಗಿ ಅಂತರ್‌ಜಲವನ್ನು ಬಳಸಿಕೊಳ್ಳುವ ದೃಷ್ಟಿಯಿಂದ ಮತ್ತು ನಮ್ಮ ಕೆರೆಗಳಲ್ಲಿರುವ ಹೂಳನ್ನು ತೆಗೆಯುವ ದೃಷ್ಟಿಯಿಂದ ಸಣ್ಣ ನೀರಾವರಿಯನ್ನು ಅತ್ಯಂತ ವ್ಯಾಪಕವಾಗಿ ಮತ್ತು ಅತ್ಯಂತ ಸಮಗ್ರವಾಗಿ ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ಇವತ್ತು ಸಣ್ಣ ನೀರಾವರಿ ಕ್ಷೇತ್ರಕ್ಕೆ ಕನಿಷ್ಠ ೫೦ ಕೋಟಿ ರೂಪಾಯಿ, ೬೦ ಕೋಟಿ ರೂಪಾಯಿಯಾದರೂ ಪ್ರತಿವರ್ಷ ಕೊಟ್ಟರೆ ಐದು ವರ್ಷದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚು ಜನರಿಗೆ ನೀರನ್ನು ಕೊಡುವುದಕ್ಕೆ ಇವತ್ತು ಸಾಧ್ಯವಾಗುತ್ತದೆ. ಸುಮಾರು ೭೦ ಲಕ್ಷ ಹೆಕ್ಟೇರ್‌ನಷ್ಟು ಒಣ ಬೇಸಾಯ ಮಾಡತಕ್ಕಂಥ ಭೂಮಿ ಇವತ್ತು ಮಲೆನಾಡಿನಲ್ಲಿ ಇದೆ. ಅದು ಮಳೆಯ ಆಶ್ರಯದಿಂದ ಇರತಕ್ಕಂಥ ಭೂಮಿ ಕೂಡ ಆಗಿದೆ. ಆ ಮಲೆನಾಡು ಪ್ರದೇಶ ಎಂಥದ್ದು? ಮಳೆ ಬಂದಾಗ ಮಾತ್ರ ಊರುಕೇರಿಗಳಲ್ಲಿ ನೀರು ಇರುತ್ತದೆ. ಮಳೆ ಮೂರು ದಿವಸ ಇಲ್ಲ ಎಂದರೆ, ಒಂದು ಹನಿ ನೀರು ಕೂಡ ಇರುವುದಿಲ್ಲ ಅಂಥ ಭೂಮಿ ಅದು. ಮಳೆಗಾಲದಲ್ಲಿ ಯಾರಾದರೂ ಬಯಲು ಸೀಮೆಯವರು ಬಂದು ನೋಡಿಬಿಟ್ಟರೆ ಗುಂಡ್ಡದಲ್ಲಿ, ಬೆಟ್ಟದಲ್ಲೆಲ್ಲಾ ನೀರು ಇದೆ ಎಂದು ಹೇಳುತ್ತಾರೆ. ಆದರೆ ಈಗ ಹೋಗಿ ನೋಡಿದರೆ ಒಂದು ಹನಿ ನೀರು ಕೂಡಾ ಕುಡಿಯಲಿಕ್ಕೆ ಸಿಗುವುದಿಲ್ಲ. ಅಂಥ ಮಲೆನಾಡು ಪ್ರದೇಶವದು. ಸ್ವಾಭಾವಿಕವಾಗಿ ಬಯಲುನಾಡು ನೀರು ಇಲ್ಲದೇ ಇರತಕ್ಕಂಥ ಪ್ರದೇಶ. ಇವತ್ತು ನಮ್ಮ ಕೃಷಿಕರು ಸುಮಾರು ೭೦ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಮಳೆಯನ್ನೇ ಆಧರಿಸಿ ಬೆಳೆಯನ್ನು ತೆಗೆಯುತ್ತಾರೆ. ಅಂಥ ಭೂಮಿಗೆ ನೀರನ್ನು ಕೊಡುವಂಥ ವ್ಯವಸ್ಥೆಯನ್ನು ಇವತ್ತಿನವರೆಗೂ ನಾವು ಮಾಡುವುದಕ್ಕಾಗಿಲ್ಲ ಇವತ್ತು ಒಂದು ಹೆಕ್ಟೇರ್ ಭೂಮಿಯಲ್ಲಿ ಸರಾಸರಿ ಎಷ್ಟು ಬೆಳೆಯನ್ನು ತೆಗೆಯುತ್ತಾರೆ? ಒಂದು ಹೆಕ್ಟೇರ್ ಭೂಮಿಯಲ್ಲಿ ಒಂದು ಟನ್ ಆಹಾರವನ್ನು ಬೆಳೆಯತಕ್ಕಂಥ ಸಾಮರ್ಥ್ಯತೆ ನಮಗೆ ಬಂದರೆ ೭೦ ಲಕ್ಷ ಹೆಕ್ಟೇರ್‌ನಲ್ಲಿ ಇವತ್ತು ೭೦ ಲಕ್ಷ ಟನ್ ಆಹಾರವನ್ನು ಬೆಳೆಯುವುದಕ್ಕಾಗುತ್ತದೆ. ಇನ್ನು ೧೫ ವರ್ಷಗಳಲ್ಲಿ ನಮ್ಮ ಜನಸಂಖ್ಯೆ ಸುಮಾರು ಐದು ಕೋಟಿಗೂ ಮೇಲೆ ಹೋಗಬಹುದು. ಇರತಕ್ಕಂಥ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಉತ್ಪಾದನೆ ಮಾಡಬೇಕಾದರೆ ಸುಮಾರು ೧೫ ಮಿಲಿಯನ್ ಟನ್ ಆಹಾರವನ್ನು ಬೆಳೆಯಬೇಕಾಗುತ್ತದೆ. ಇವತ್ತು ನಮ್ಮ ಒಣ ಬೇಸಾಯದಲ್ಲಿ ಒಂದು ಹೆಕ್ಟೇರ್ ಭೂಮಿಯಲ್ಲಿ ಒಂದು ಟನ್ ಆಹಾರವನ್ನು ಬೆಳೆಯತಕ್ಕಂಥ ಸಾಮರ್ಥ್ಯ ಶಕ್ತಿ ನಮ್ಮ ರೈತರಿಗೆ ಬಂದಿದ್ದಾದರೆ, ಮುಂದೆ ಹೆಚ್ಚಾಗತಕ್ಕಂಥ ಪ್ರಜಾಸಂಖ್ಯೆಗೆ ಅಗತ್ಯ ಧಾನ್ಯವನ್ನು ಕೊಡುವುದಕ್ಕಾಗುತ್ತದೆ. ತನ್ಮೂಲಕ ಇವತ್ತು ನಮ್ಮ ಕೃಷಿಕರನ್ನು

ಆರ್ಥಿಕವಾಗಿ ಬಲಿಷ್ಠರನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು ಏನಾದರೂ ಬೆಳೆಯನ್ನು ಹೆಚ್ಚು ಬೆಳೆದಿದ್ದೇವೆಯೇ ? ಅದನ್ನು ಮಾಡಲಿಕ್ಕಾಗಿಲ್ಲ. ಕೊಟ್ಟಿರುವ ಅಂಕಿ ಸಂಖ್ಯೆಯನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ೧೯೭೦-೭೧ರಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಹೆಕ್ಟೇರ್ ಭೂಮಿಯಲ್ಲಿ ೧೭೨೮ ಕೆ.ಜಿ.ಯನ್ನು ನಾವು ಬೆಳೆಯುತ್ತಿದ್ದರೆ ಇವತ್ತು ೧೯೮೯-೯೦ರಲ್ಲಿ ಒಂದು ಹೆಕ್ಟೇರ್ ಭೂಮಿಯಲ್ಲಿ ೨೦೨೭ ಕೆ.ಜಿ. ಅಕ್ಕಿಯನ್ನು ಬೆಳೆಯುತ್ತಿದ್ದೇವೆ. ಏನು ಜಾಸ್ತಿಯಾಯಿತು ? ಕರ್ನಾಟಕ ರಾಜ್ಯದಲ್ಲಿ ೧೯೭೦-೭೧ರಲ್ಲಿ ೮೯೧ ಕೆ.ಜಿ. ಜೋಳವನ್ನು ಬೆಳೆಯುತ್ತಿದ್ದರು, ಇವತ್ತು ನಾವು ೯೧೩ ಕೆ.ಜಿ. ಜೋಳವನ್ನು ಒಂದು ಹೆಕ್ಟೇರ್‌ನಲ್ಲಿ ಬೆಳೆಯುತ್ತಿದ್ದೇವೆ. ಪ್ರಮುಖವಾಗಿ ರಾಗಿ ೧೯೭೦-೭೧ರಲ್ಲಿ ೮೯೧ ಕೆ.ಜಿ. ಬೆಳೆಯುತ್ತಿದ್ದರೆ, ನಾವು ೧೯೮೯-೯೦ರಲ್ಲಿ ೧೦೩೫ ಕೆ.ಜಿ. ಬೆಳೆಯುತ್ತಿದ್ದೇವೆ. ಅಂದಾಗ ಹಿಂದೆ ನಾವು ಒಂದು ಎಕರೆಯಲ್ಲಿ ಯಾವ ಪ್ರಮಾಣದಲ್ಲಿ ಬೆಳೆಯುತ್ತಿದ್ದೆವು, ಅದೇ ಪ್ರಮಾಣದಲ್ಲಿ ಇದ್ದೇವೆ, ಜಾಸ್ತಿ ಆಗಲಿಲ್ಲ. ಯಾಕೆಂದರೆ ಸಾಕಷ್ಟು ಪ್ರಮಾಣದಲ್ಲಿ ನಾವು ಮಳೆಯನ್ನೇ ಆಧರಿಸಿದ್ದೇವೆ. ನಮಗೆ ಸಾಕಷ್ಟು ನೀರು ಸಿಕ್ಕುವುದಿಲ್ಲ. ನೀರಾವರಿ ಜಾಸ್ತಿ ಆಗಲಿಲ್ಲ. ಆದ್ದರಿಂದ ಬೆಳೆಯ ಪ್ರಮಾಣ ಜಾಸ್ತಿ ಆಗಲಿಲ್ಲ. ಹೋಗಲಿ ಇಷ್ಟೆಲ್ಲಾ ಇದ್ದರೂ ಸಕಾಲದಲ್ಲಿ ಗೊಬ್ಬರ ಕೊಡುವುದಕ್ಕೆ ಆಗಿದೆಯೇ, ಇವೊತ್ತು ಸೊಸೈಟಿಗಳ ಮುಖಾಂತರ ಸಕಾಲದಲ್ಲಿ ಸಾಲ ಕೊಡುವುದಕ್ಕೆ ಆಗಿದೆಯೇ ಅದು ಆಗಿಲ್ಲ. ಯಾಕೆ ಆಗಲಿಲ್ಲ ? ಇವೊತ್ತು ಸಹಕಾರ ಸಂಘಗಳ ಮುಖಾಂತರ ಸಾಲವನ್ನು ಕೊಡಬೇಕಾಗಿದೆ. ಏಪ್ರಿಲ್ ಮೇ ತಿಂಗಳಿನಲ್ಲಿ ಬೆಳೆ ಸಾಲ ಹಂಚಬೇಕು, ಬೆಳೆ ಸಾಲ ತೆಗೆದುಕೊಂಡಿದ್ದೆಲ್ಲಾ ಏನು ಆಗಿದೆ ? ಸುಮಾರು ನಾಲ್ಕು ಸಾವಿರ ಸೊಸೈಟಿಗಳ ಮುಖೇನ ಸಾಲವನ್ನು ಇವೊತ್ತು ನಾವು ಕೊಡಬೇಕಾಗಿದೆ. ಈ ಸೊಸೈಟಿಗಳ ಸ್ಥಿತಿ ಏನು ಆಗಿದೆ. ಅವು ಜೀವದಿಂದ ಇದ್ದಾವೆಯೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸೊಸೈಟಿಗಳ ಸ್ಥಿತಿ ಏನು ಆಗಿದೆ ? ಅಂದರೆ, ಸಾಗರದಲ್ಲಿ ೪೦-೫೦ ಲಕ್ಷ ರೂಪಾಯಿ ಅಡಿಕೆಯನ್ನು ಹಿಂಬಾಗಿಲಿನಿಂದ ಮಾಡಿಕೊಂಡು ಆಗಿದೆ. ಅದು ನಮಗೆ ನಿಮಗೆ ಗೊತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಸೊಸೈಟಿಗಳಿಗೆ ೩೦-೪೦ ವರ್ಷ ಪ್ರಾಯ ಆಗಿದೆ. ಸಹಕಾರ ಸಂಘಗಳು ಗ್ರಾಮಾಂತರ ಮಟ್ಟದಲ್ಲಿ ಹಿಂದೆ ಯಾವ ಸ್ಥಿತಿಯಲ್ಲಿ ಹುಟ್ಟಿತು. ಇವೊತ್ತು ೪೦ ವರ್ಷಗಳಿಂದ ಮೇಲೂ ಅದೇ ಸ್ಥಿತಿಯಲ್ಲಿ ಇದ್ದಾವೆ. ಕೆಲವು ಮಕ್ಕಳು ಹುಟ್ಟಿಬಿಡುತ್ತವೆ. ಕೈಕಾಲು ಸೊಟ್ಟ ಬಾಯಿ, ಮೂತಿ ಒಂದು ಕಡೆ ಆಗಿರುತ್ತದ. ಹುಟ್ಟುವಾಗಲೇ ಈ ರೀತಿ ಸೃಷ್ಟಿ ಆಗುತ್ತದೆ. ಇದು ಯಾಕೆ ಎಂದು ಕೇಳುವುದು ಬೇಡ. ಯಾವ ಸ್ಥಿತಿಯಲ್ಲಿ ಸೊಸೈಟಿಗಳು ಹುಟ್ಟಿದ್ದವೋ ಅದೇ ಸ್ಥಿತಿಯಲ್ಲಿ ಇವೊತ್ತು ಸಹಕಾರ ಸಂಘಗಳು ಇದ್ದಾವೆ. ಮೊನ್ನೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ೪೪ ಲಕ್ಷ ಜನ ಹಿಡುವಳಿದಾರರು ಕರ್ನಾಟಕದಲ್ಲಿ ಇದ್ದಾರೆ. ಸಹಕಾರ ಸಂಘಗಳ ಮುಖಾಂತರ ಬೆಳೆ ಸಾಲವನ್ನು ಎಷ್ಟು ಜನರಿಗೆ ಕೊಡಲಾಗಿದೆ ಅಂದರೆ ೬-೭ ಲಕ್ಷ ಹಿಡುವಳಿದಾರರಿಗೆ ಮಾತ್ರ ಕೊಡುವುದಕ್ಕೆ ಸಾಧ್ಯ ಆಗಿದೆ. ಕಾರಣ ಏನು ಅಂದರೆ ೭೦-೮೦ ಪರ್ಸೆಂಟ್ ರಿಕವರಿ ಜಾಸ್ತಿ ಆದರೆ ಹೊಸಬರಿಗೆ ಸಾಲ ಕೊಡುತ್ತಾರೆ. ೬೦ ಪರ್ಸೆಂಟ್‌ನಿಂದ ಕೆಳಗಡೆ ರೆಕವರಿ ಆದರೆ ಹಿಂದೆ ಯಾರು ಸಾಲವನ್ನು ತೆಗೆದುಕೊಂಡಿರುತ್ತಾರೆ ಮತ್ತು ಅದನ್ನು ವಾಪಸ್ ಕೊಡುತ್ತಾರೆ ಅವರಿಗೆ ಮಾತ್ರ ಸಾಲ ಕೊಡುತ್ತಾರೆ. ಹೊಸಬರಿಗೆ ಸಾಲ ಕೊಡುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—೯೦ ಲಕ್ಷ ಹಿಡುವಳಿದಾರರು ಏನು ಇದ್ದಾರೆ ಅವರಲ್ಲಿ ಬಹಳ ಕಡಿಮೆ ಹಿಡುವಳಿದಾರರಿಗೆ ಮಾತ್ರ ಸಹಕಾರ ಸಂಘಗಳು ಸಾಲ ಕೊಟ್ಟಿವೆ. ಅದು ಸಹಕಾರ ಸಂಘದ ದೋಷ ಅಲ್ಲ. ಒಟ್ಟಾರೆ ರಿಸರ್ವ್ ಬ್ಯಾಂಕ್ ಕ್ರೆಡಿಟ್ ಪಾಲಿಸಿಯಲ್ಲಿ ದೋಷ ಇದೆ. The quantum of loans that are disbursed to agriculture is very meagre when compared to Industries and Commerce. ಅದಕ್ಕೆ ಸಹಕಾರ ಸಂಘಗಳನ್ನು ದೂರಿ ಪ್ರಯೋಜನ ಇಲ್ಲ, ಇದಕ್ಕೆ ರಿಸರ್ವ್ ಬ್ಯಾಂಕ್ ಕಾರಣ.

ಶ್ರೀ ಕಾಗೋಡು ತಿಮ್ಮಪ್ಪ.—ಇವೊತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೃಷಿಕರಿಗೆ ಸಾಮಾನ್ಯವಾಗಿ ಹಣಕಾಸಿನ ಅನುಕೂಲತೆಗಳನ್ನು ಒದಗಿಸಿಕೊಡಬೇಕು ಎಂದು ಯೋಜನೆ ಹಾಕಿ ಹೊರಟರೆ ಪ್ರತಿ ವರ್ಷ ಕನಿಷ್ಟ ಪಕ್ಷ ೧೬೦೦ ಕೋಟಿ ರೂಪಾಯಿಗಳನ್ನಾದರೂ ಅಥವಾ ಕಡೆಯಪಕ್ಷ ೧೫೦೦ ಕೋಟಿ ರೂಪಾಯಿಗಳನ್ನಾದರೂ ಇವೊತ್ತು ಕೊಡುವ ಅವಶ್ಯಕತೆ ಇದೆ. ಆದರೆ ನಾವು ಕೊಡುತ್ತಾ ಇರುವುದು ಮುನ್ನೂರು ಕೋಟಿ, ೨೮೦ ಕೋಟಿ ರೂಪಾಯಿ. ಎಲ್ಲರಿಗೂ ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಸಹಕಾರ ಸಂಘಗಳು ಏನು ಆಗಿವೆ ಎನ್ನುವುದು ಮಾನ್ಯ ಏಕಾಂತಯ್ಯನವರು ಇಲ್ಲೇ ಇದ್ದಾರೆ, ಅವರಿಗೆ ಗೊತ್ತಿದೆ, ಅವರು ಆ ಕ್ಷೇತ್ರದಲ್ಲಿ ಬಹಳ ಅನುಭವವನ್ನು ಪಡೆದವರು. ಇವುಗಳಿಗೆ ಅಗತ್ಯವಾದ ಶೇರು

ಬಂಡವಾಳವನ್ನು ಕೊಡಬೇಕು. ಇವೊತ್ತು ಸರ್ಕಾರ ಸ್ವಲ್ಪ ಯೋಚನೆ ಮಾಡಿ ಒಂದು ಬ್ಯಾಂಕನ್ನು ಕಟ್ಟುವ ರೀತಿಯಲ್ಲಿ ಸಹಕಾರ ಸಂಘಗಳನ್ನು ಗ್ರಾಮಾಂತರ ಮಟ್ಟದಲ್ಲಿ ಕಟ್ಟಿ ನಿಲ್ಲಿಸಬೇಕು. ಅದನ್ನು ಯಾರದೋ ಕೈಗೆ ಕೊಡುವುದರ ಬದಲು ಅದರ ಸಂಪೂರ್ಣ ಆಡಳಿತವನ್ನು ಇವೊತ್ತು ಜನರ ಕೈಗೆ ಕೊಟ್ಟು ಆದರ ಒಂದು ಹಿಡಿತವನ್ನು ಸರ್ಕಾರ ಇಟ್ಟುಕೊಂಡು ನಡೆಸಬೇಕಾಗುತ್ತದೆ. ರಿಕವರಿ ಆಗಿಲ್ಲ, ನಾನು ಹೊಸ ಸಾಲ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಹೋದ ವರ್ಷ ನನಗೆ ಸಾಲ ಸಿಗಲಿಲ್ಲ, ಈ ವರ್ಷ ಸರ್ಕಾರದಲ್ಲಿ ಹೈ ಈಲ್ಡಿಂಗ್ ವೆರೈಟಿ ಹಾಕುತ್ತೇನೆ. ಹತ್ತಿ ಬೆಳೆ ಬೆಳೆಯುತ್ತೇನೆ, ಸಾಲ ಬೇಕು ಎಂದರೆ ಎಲ್ಲಿ ಹೋಗಬೇಕು. ಸಾಲ ಕೊಡುವ ಸ್ಥಿತಿಯಲ್ಲಿ ಸಹಕಾರ ಸಂಘ ಇಲ್ಲ. ಆದ್ದರಿಂದ ಸಹಕಾರ ಸಂಘಗಳ ಮುಖೇನ ನಾವು ಬೆಳೆಗಾರರಿಗೆ ಸಾಲ ಕೊಡುವಂತಹ ವ್ಯವಸ್ಥೆ ಇಟ್ಟುಕೊಂಡಿದ್ದೇವೆ ನಿಜವಾಗಿ ತಮಗೆ ಗೌರವ ಬರಬೇಕಾದರೆ ಈ ವ್ಯವಸ್ಥೆ ಮಾಡಿಸಿ. ಈ ಒಂದು ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡಲು ಇಷ್ಟಪಡುತ್ತೇನೆ. ಸಹಕಾರ ಸಂಘಗಳನ್ನು ಬಲಿಷ್ಟಪಡಿಸಿ ಬಾರೋಯಿಂಗ್ ಕೆಪಾಸಿಟಿಯನ್ನು ಜಾಸ್ತಿ ಮಾಡಬೇಕು, ಹೆಚ್ಚು ಜನರಿಗೆ ಹೆಚ್ಚು ಸಾಲವನ್ನು ಕೊಡುವಂತಹ ರೀತಿಯಲ್ಲಿ ಒಂದು ವ್ಯವಸ್ಥೆ ಆಗಬೇಕು. ಇವತ್ತು ಗೊಬ್ಬರದ ಸ್ಥಿತಿ ಏನು ಆಗಿದೆ ಎನ್ನುವುದು ಮಾನ್ಯ ಏಕಾಂತಯ್ಯನವರಿಗೆ ಗೊತ್ತಿದೆ. ನಾಳೆ ಮಾರ್ಚ್ ಮತ್ತು ಮೇ ತಿಂಗಳಿನಿಂದ ಬೆಳೆ ಸಾಲ ಕೊಡುತ್ತಾರೆ. ಬೆಳೆ ಸಾಲದಲ್ಲಿ ಒಂದು ಕಾಂಪೊನೆಂಟ್—ಎನ್.ಪಿ.ಕೆ. ಕೊಡುತ್ತಾರೆ, ಸಾಲ ಕೊಡುವಂತಹ ದಿವಸ ಎನ್.ಪಿ.ಕೆ. ಅವರ ಕೈಯಲ್ಲಿರುವುದಿಲ್ಲ. ಯಾರಾದರೂ ಒಬ್ಬರ ಕೈಯಲ್ಲಿ ಒಟ್ಟಿಗೆ ಇರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷಿಣಿಯವರೆ, ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಮುಂದೆ ಯಾವುದಾದರೂ ಒಂದು ಸರ್ಕಾರ ಬಂದಾಗ ಇದೆಲ್ಲಾ ಆಗಬೇಕು, ಏನಾದರೂ ಹೊಸ ಸರ್ಕಾರ ಬಂದಾಗ ಇದೆಲ್ಲಾ ಆಗಬೇಕು ಎಂದು ಏನಾದರೂ ಸಲಹೆಗಳನ್ನು ಕೊಡುತ್ತಿದ್ದಾರೊ ಹೇಗೆ ಏಕೆಂದರೆ ಮನೆ ಬಾಗಿಲಿಗೆ ಗೊಬ್ಬರ ಕೊಡುವಂಥ ಒಂದು ಹೊಸ ಯೋಜನೆಯನ್ನು ಹಿಂದಿನ ಸರ್ಕಾರ ತಂದಾಗ ಅದನ್ನು ಅವರು ಇದ್ದಾಗಲೇ ತಡೆ ಹಿಡಿದರು. ಈ ರೀತಿ ಗೊಬ್ಬರವನ್ನು ಮನೆಗೆ ತಲುಪಿಸುವಂಥಾದ್ದು ಮತ್ತು ಉತ್ತಮವಾದ ಬಿತ್ತನೆ ಬೀಜಗಳನ್ನು ಕೊಡುವಂಥಾದ್ದು ಏನಿದೆ ಅದರ ಬಗ್ಗೆ ನನ್ನ ಸರ್ಕಾರ ಇಂತಿಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನುವುದಕ್ಕೆ ಅವರು ಹೇಳುತ್ತಿದ್ದಾರೊ ಅಥವಾ ಮುಂಚೆ ಆಗಬೇಕು ಎಂದು ಹೇಳುತ್ತಿದ್ದಾರೋ ಯಾವುದು ಎಂದು ಗೊತ್ತಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ನಾನು ವ್ಯವಸಾಯಗಾರರ ಪರವಾಗಿ ಇರತಕ್ಕವನು. ನಾವು ಅಧಿಕಾರಕ್ಕೆ ಬರಬೇಕಾದರೆ ನಮ್ಮ ಪಕ್ಷವನ್ನು ರೈತರೇ ಆರಿಸಿ ಕಳಿಸಿದ್ದಾರೆ ಅದಕ್ಕಾಗಿ ಇವತ್ತಿನ ದಿವಸ ಈ ಸದನದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ನಮ್ಮ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದರ ಮುಖೇನ ವ್ಯಾಖ್ಯಾನ ಮಾಡಿ ನಾನು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಒತ್ತಾಯ ಪಡಿಸುತ್ತೇನೆ ಏಕೆಂದರೆ ನಮ್ಮ ಸರ್ಕಾರವು ಬಂತು, ನಾವು ಬಂದೆವು, ಎಲ್ಲರೂ ಬಂದರು. ನಾನು ಮೊದಲು ಹೇಳಿದ ರೀತಿಯಲ್ಲಿ ನಮ್ಮ ಸಂಪೂರ್ಣ ಆರ್ಥಿಕ ವ್ಯವಸ್ಥೆ ವ್ಯವಸಾಯವನ್ನು ಅವಲಂಬಿಸಿದೆ. ಆದುದರಿಂದ ಈ ಕ್ಷೇತ್ರವನ್ನು ಸದೃಢಪಡಿಸತಕ್ಕಂಥ ವ್ಯವಸಾಯಗಾರರಿಗೆ ಶಕ್ತಿ ಕೊಡುವಂಥ ಕೆಲಸದ ಬಗ್ಗೆ ನಾವೆಲ್ಲರೂ ಒಟ್ಟಿನಿಂದ ಆಲೋಚನೆ ಮಾಡಬೇಕು. ನಾವು ಪಕ್ಷಾತೀತವಾಗಿ ಆಲೋಚನೆ ಮಾಡುವಂಥ ಕಾಲ ಬಂದಿದೆ. We have to change our attitude ನಮ್ಮ ಸ್ಟ್ರಾಟಜಿಯನ್ನು ನಾವು ಚೇಂಜ್ ಮಾಡಬೇಕಾದಂಥ ಅಗತ್ಯ ಬಂದಿದೆ. ಹೊಸ ಆಲೋಚನೆ ವಿಚಾರ ಮಾಡಬೇಕು. ಎಲ್ಲರೂ ಕುಳಿತು ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಇದೇ ಇವತ್ತು ನನ್ನ ಒತ್ತಾಯ. ಆದುದರಿಂದ ೪೦ ವರ್ಷಗಳ ಹಿಂದೆ ಸೊಸೈಟಿಯನ್ನು ಮಾಡಿ ೧೦ ಸಾವಿರ, ೫೦ ಸಾವಿರ, ಒಂದು ಲಕ್ಷ ರೂಪಾಯಿ ಸಾಲ ತರುವುದಕ್ಕೆ ಆಗುವುದಿಲ್ಲ, ಹಂಚುವುದಕ್ಕೆ ಆಗುವುದಿಲ್ಲ. ಆದುದರಿಂದ ಇದೇ ಸ್ಥಿತಿ ಇಟ್ಟುಕೊಂಡರೆ, ಹುಟ್ಟಿನಿಂದಲೇ ಫಿಸಿಕಲ್ ಹ್ಯಾಂಡಿಕ್ಯಾಪ್ ಆಗಿರತಕ್ಕ ಈ ಕೂಸಿಗೆ ಎಷ್ಟು ದಿವಸ ಹಾಲು ಕುಡಿಸುವುದು, ಎಷ್ಟು ದಿವಸ ಗಂಜಿ ಕುಡಿಸುವುದು ಇದನ್ನು ಹೇಗೆ ಇಟ್ಟುಕೊಳ್ಳುವುದಕ್ಕೆ ಆಗುತ್ತದೆ. ಅದಕ್ಕೆ ಒಂದು ಚಿಕಿತ್ಸೆ ಮಾಡಿಸಬೇಕು, ಮುಂದೆ ಹೋಗಬೇಕು, ಹೊಸ ರೂಪವನ್ನು ಕೊಡಿಸಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಇದು ಬಹಳ ಮುಖ್ಯ. ಏಕೆಂದರೆ ಇತ್ತೀಚಿನ ಒಂದು ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಇವತ್ತು ವ್ಯವಸಾಯ ಕ್ಷೇತ್ರದಲ್ಲಿ ಅಗ್ರಿಕಲ್ಚರಲ್ ಫೈನಾನ್ಶಿಯಲ್ ಇನ್‌ಸ್ಟಿಟ್ಯೂಷನ್ಸ್ ಎಂದು ಏನು ಹೇಳುತ್ತೇವೆ ಅವು ಎರಡು ಇವೆ. ಒಂದು ಭೂ ಅಭಿವೃದ್ಧಿ ಬ್ಯಾಂಕ್, ಇನ್ನೊಂದು ಅಪೆಕ್ಸ್ ಬ್ಯಾಂಕ್. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಪ್ರಸ್ತಾಪ ಮಾಡಿ ಹೇಳಿದರು. ಅದು ಒಳ್ಳೆಯದು, ನನಗೆ ಪ್ರಿಯವಾಗಿ ಕಾಣಿಸಿತು. ವ್ಯವಸಾಯಗಾರನಿಗೆ ಹಣಕಾಸನ್ನು ಒದಗಿಸತಕ್ಕಂಥ ಸಂಸ್ಥೆ ಒಂದೇ ಆಗಿರಬೇಕು. ಈ ಪಿಎಲ್‌ಡಿ ಬ್ಯಾಂಕ್, ಈ ಅಪೆಕ್ಸ್ ಬ್ಯಾಂಕನ್ನು ರದ್ದುಪಡಿಸಿ,

ಒಂದನ್ನು ಮರ್ಜ್‌ಮಾಡಿ ಒಂದು ಸಂಸ್ಥೆಯನ್ನು ರಾಜ್ಯಮಟ್ಟದಲ್ಲಿ ಮಾಡಬೇಕು. ಆ ಒಂದು ಸಂಸ್ಥೆಯ ಮುಖಾಂತರ ರೈತ ಸಾಲ ತೆಗೆದುಕೊಳ್ಳಬೇಕು. ಅಲ್ಲಿ ಮದುವೆ ಮಾಡುವುದಕ್ಕೆ ಸಾಲ ಬೇಕಾದರೂ ಸಿಗಬೇಕು. ಅದಕ್ಕೆ ಕ್ರೆಡಿಟ್ ಕಾರ್ಡ್ ಕೊಡಿ. ಅವನಿಗೆ ಮದುವೆ ಮಾಡುವುದಕ್ಕೆ ಸಕಾಲದಲ್ಲಿ ಸಾಲ ಸಿಗಬೇಕು, ಬೆಳೆ ಸಾಲ ಬೇಕಾದರೂ ಸಿಗಬೇಕು, ಪಂಪ್‌ಸೆಟ್‌ಗೆ ಸಾಲ ಬೇಕಾದರೂ ಸಿಗಬೇಕು. ಅವನು ಬೋರ್‌ವೆಲ್ ಹಾಕಬೇಕಾದರೆ ಸಾಲ ಸಿಗಬೇಕು. ಅವನ ಸರ್ವ ಸಕಲ ಉದ್ದೇಶಕ್ಕೆ ಒಂದು ಸಹಕಾರ ಕ್ಷೇತ್ರದಲ್ಲಿ ಸಾಲ ಸಿಗುವಂಥ ವ್ಯವಸ್ಥೆಯನ್ನು ನಾವು ಮಾಡದೇ ಹೋದರೆ ನಾವು ವ್ಯವಸಾಯಗಾರರನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಪಂಪ್‌ಸೆಟ್‌ಗೆ ಸಾಲಬೇಕು ಅಂದರೆ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಹೋಗಬೇಕು ಬೆಳೆ ಸಾಲ ಬೇಕು ಅಂದರೆ ಡಿ.ಸಿ.ಸಿ. ಬ್ಯಾಂಕ್‌ಗೆ ಹೋಗಬೇಕು. ಇಲ್ಲಿ ಎಲ್ಲೂ ಸಾಲ ಸಿಗುವುದಿಲ್ಲ ಅಂದರೆ ಬೇರೆ ಬ್ಯಾಂಕಿಗೆ ಹೋಗಬೇಕು. ಹೀಗಾಗಿ ಏನಿದ್ದರೂ ಏನೂ ಇಲ್ಲ, ಹೀಗಾಗುತ್ತದೆ, ಏಕೆಂದರೆ, ನಮ್ಮ ಸಮಾಜದಲ್ಲಿ ಮದುವೆ ಮಾಡಬೇಕಾದರೆ ಬಡವನಾಗಲಿ, ಬಲ್ಲಿದನಾಗಲಿ ಮದುವೆ ಮಾಡಬೇಕು ಮದುವೆ ಎಂದರೆ ಹಣವನ್ನು ಖರ್ಚುಮಾಡಲೇಬೇಕು, ೧೦ ಜನರನ್ನು ಕರೆಸಲೇಬೇಕು. ಊಟ ಹಾಕಲೇಬೇಕು. ಏಕೆಂದರೆ ಯಾರನ್ನೂ ಕರೆಯದೆ ತಂದೆ ತಾಯಿಗಳು, ಮನೆಯವರೇ ಸೇರಿಕೊಂಡು ಮದುವೆ ಮಾಡುವುದಕ್ಕೆ ಆಗುವುದಿಲ್ಲ, ಜನರು ಆಡಿಕೊಳ್ಳುತ್ತಾರೆ. ಏನಪ್ಪ ಒಂದು ಮದುವೆ ಮಾಡಿದ ನಾಲ್ಕು ಜನರನ್ನು ಕರೆದು ಊಟ ಹಾಕುವುದಕ್ಕೆ ಆಗಲಿಲ್ಲ, ಅವನಿಗೆ ಯೋಗ್ಯತೆ ಇಲ್ಲ ಎಂದು ಊರಿನ ಜನರೇ ಹೇಳುತ್ತಾರೆ. ಈ ರೀತಿ ಯಾರು ಹೇಳುತ್ತಾರೆ ಅಂದರೆ, ಮದುವೆ ಮಾಡುವುದಕ್ಕೆ ಶಕ್ತಿ ಇಲ್ಲದೆ ಇರತಕ್ಕ ಮನುಷ್ಯನೇ ಮೊದಲು ಟೀಕೆ ಮಾಡಿ ಹೇಳುವುದು. ಇವತ್ತಿನ ದಿವಸ ಸಮಾಜದ ವ್ಯವಸ್ಥೆ ಹೀಗೆ ಇದೆ. ನೆರೆಹೊರೆಯ ಟೀಕೆಯಿಂದ ನಾನು ದೂರ ಇರಬೇಕು ಎನ್ನುವ ಕಾರಣಕ್ಕಾಗಿ, ತನಗೆ ಶಕ್ತಿ ಇಲ್ಲದೇ ಇದ್ದರೂ ಕೂಡ, ಅನ್ನ ಹಾಕುವುದಕ್ಕೆ ೧೦ ಸೀರೆ ತಂದುಕೊಡುವುದಕ್ಕೆ ೧೦ ಜನರನ್ನು ಕರೆದು ಉಡುಗೊರೆ ಕೊಡುವುದಕ್ಕೆ ಶಕ್ತಿ ಇಲ್ಲದೆ ಇದ್ದರೂ ಕೂಡ ಅವನು ಸಾಲವನ್ನಾದರೂ ಮಾಡಿ ಮದುವೆ ಮಾಡುವಂಥ ಪರಿಸ್ಥಿತಿ ಬಂದಿದೆ. ಇವತ್ತು ಸಣ್ಣ ಒಂದು ರೇಷ್ಮೆ ಸೀರೆಯನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ೫೦೦ ರೂಪಾಯಿಗಿಂತ ಕಡಿಮೆಗೆ ಸಿಗುವುದಿಲ್ಲ. ಇವತ್ತು ಅರ್ಧ ತೊಲದಲ್ಲಿ ಒಂದು ಮಾಂಗಲ್ಯ ಮಾಡಿಸಬೇಕಾದರೆ ಸುಮಾರು ೧೫೦೦-೨೦೦೦ ರೂಪಾಯಿಗಿಂತ ಕಡಿಮೆಯಾಗುವುದಿಲ್ಲ. ಸಾಲ ಇಲ್ಲದೆ ಮದುವೆ ಮಾಡತಕ್ಕ ವ್ಯಕ್ತಿಗಳು ೧೦೦ ಕ್ಕೆ ೧೦ ಜನ ಹಳ್ಳಿಗಾಡಿನಲ್ಲಿ ಸಿಗುವುದಿಲ್ಲ. ಆ ಸ್ಥಿತಿ ಇದೆ. ಇವತ್ತು ಅದಕ್ಕೆ ಅವನು ಯಾರನ್ನು ಮೊರೆ ಹೋಗಬೇಕು. ಪೇಟೆಗೆ ಹೋಗಿ. ಮಾರ್ವಾಡಿ ಅಂಗಡಿಗೆ ಹೋಗಿ ಬಟ್ಟೆ ತರಬೇಕಾದರೆ ಸಾಲ ಹೇಳಿ ಬಟ್ಟೆ ಸಾಲ ತರಬೇಕು. ಊರಿನಲ್ಲಿ ಯಾರಾದರೂ ಸಾಹುಕಾರನಿದ್ದರೆ ಅವನು ಕೇಳುವಷ್ಟು ಬಡ್ಡಿಯನ್ನು ಕೊಟ್ಟು ಸಾಲದ ಹಣ ತರಬೇಕು. ಏಕೆಂದರೆ, ಸಹಕಾರ ಸಂಘದಲ್ಲೂ ಸಾಲ ಸಿಗುವುದಿಲ್ಲ, ಬ್ಯಾಂಕಿನಲ್ಲಿಯೂ ಸಾಲ ಸಿಗುವುದಿಲ್ಲ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಬದುಕುವಂತಹ ಒಬ್ಬ ಕೃಷಿಕನಿಗೆ ತನ್ನ ಉದ್ದೇಶಕ್ಕೋಸ್ಕರವಾಗಿ ಎಲ್ಲ ಮೂಲಗಳಿಂದ ಸಾಲ ಸಿಗಬೇಕೆಂದರೆ ಅಲ್ಲಿ ಒಂದು ಕ್ಷೇತ್ರ ನಿರ್ಮಾಣವಾಗಬೇಕು. ಹಾಗಿದ್ದರೆ ಮಾತ್ರ ಅವನನ್ನು ಶೋಷಣೆ ಮುಕ್ತರನ್ನಾಗಿ ನಾವು ಮಾಡಲು ಸಾಧ್ಯವಾಗುತ್ತದೆ. ಇಂತಹ ಒಂದು ಕಲ್ಪನೆ ಇವತ್ತು ಬರಬೇಕೆಂದರೆ, ಪಿ.ಎಲ್.ಡಿ. ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕನ್ನು ಮರ್ಜ್ ಮಾಡಿ ಒಂದೇ ಒಂದು ಬ್ಯಾಂಕ್ ಎಂದು ಮಾಡಬೇಕು. ಅದನ್ನು ಮಾಡುವುದರಿಂದ ಒಂದು ದೊಡ್ಡ ಉಪಯೋಗ ಕೂಡ ಇದೆ. ಏಕೆಂದರೆ. ರಿಜರ್ವ್ ಬ್ಯಾಂಕಿನಿಂದ ಯಾವ ಪ್ರಮಾಣದಲ್ಲಿ ನಮಗೆ ಬಡ್ಡಿದರ ಹಾಕಿ ಸಾಲ ಕೊಡುತ್ತಾರಲ್ಲಾ, ಅದು ಬೆಳೆ ಸಾಲವಾಗಬಹುದು; ಮಧ್ಯಮಾವಧಿ ಸಾಲ ಆಗಬಹುದು, ಅಥವಾ ದೀರ್ಘಾವಧಿ ಸಾಲ ಆಗಬಹುದು, ಶೇಕಡ ೬-೭ ರಂತೆ ನಮಗೆ ಬೆಳೆ ಸಾಲ ಕೊಡುತ್ತಾರೆ, ಬೆಳೆ ಸಾಲಕ್ಕೆ ಇನ್ನು ಕಡಿಮೆ ಇದೆ. ಆ ಬೆಳೆ ಸಾಲ ರೈತನಿಗೆ ಕೊಡಬೇಕಾದರೆ ನಾವು ಶೇಕಡ ೧೧ ರಲ್ಲಿ ಇವತ್ತು ಕೊಡುತ್ತಿದ್ದೇವೆ. ಅದೇ ದರದಲ್ಲಿ ಅಂದರೆ ಶೇಕಡ ೫ ರಂತೆ ರಿಸರ್ವ್ ಬ್ಯಾಂಕಿಗೆ ಕೊಟ್ಟರೆ ನಾವು ಶೇಕಡ ೬ ರಂತೆ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ ಶೇಕಡ ೧ ರಷ್ಟು ವ್ಯತ್ಯಾಸದಲ್ಲಿ ಅಪೆಕ್ಸ್ ಬ್ಯಾಂಕಿನವರಾದರೂ ಇಟ್ಟುಕೊಳ್ಳಲಿ, ಡಿ.ಸಿ.ಸಿ. ಬ್ಯಾಂಕಿನವರಾದರೂ ಇಟ್ಟುಕೊಳ್ಳಲಿ, ಇಲ್ಲದಿದ್ದರೆ ಅವರು ಸೊಸೈಟಿಗಾದರೂ ಕೊಡಲಿ, ಒಟ್ಟು ರಿಜರ್ವ್ ಬ್ಯಾಂಕ್‌ನವರು ಕೊಡುವ ಬಡ್ಡಿ ದರಕ್ಕೂ, ನಮ್ಮ ಕೃಷಿಕನಿಗೆ ಸಿಗುವ ಬಡ್ಡಿ ದರಕ್ಕೂ ಶೇಕಡ ಒಂದೇ ಒಂದು ಪರ್ಸೆಂಟ್ ವ್ಯತ್ಯಾಸವಿರಬೇಕು ಅದಕ್ಕಿಂತ ಜಾಸ್ತಿಯಾಗಬಾರದು. ಅದಕ್ಕಿಂತ ಜಾಸ್ತಿಯಾವುದಾದರೆ ಇವತ್ತು ಮಾರ್ವಾಡಿಗಳಿಗಿಂತ ಏನು ಹೆಚ್ಚಾಗಿದ್ದೇವೆ, ಇದನ್ನು ಶ್ರೀಮಾನ್ ದೇಶಪಾಂಡೆ ಅವರು ಆಗಲೇ ಹೇಳುತ್ತಿದ್ದರು.

ಶ್ರೀ ಕೆ. ಶಿವಮೂರ್ತಿ.—ಸಾಲ ಸಾಲ ಅಂತ ಹೇಳುತ್ತಿರಲ್ಲಾ. ಇವತ್ತು ಜಮೀನುದಾರರಿಗೆ, ಗ್ಯಾರಂಟಿ ಇರುವವರಿಗೆ ಸಾಲ ಕೊಡುವ ವ್ಯವಸ್ಥೆ ಇದೆ ಲ್ಯಾಂಡ್‌ಲೆಸ್, ಸಾಲ ಪಡೆಯದ ಇತರತಕ್ಕವರ ಬಗ್ಗೆ ಯೋಜನೆ ಮಾಡಿದ್ದೀರಾ ಎಂದು, ಮಾನ್ಯ ಕಾಗೋಡು ಶಿವಪ್ಪನವರೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಶಿವಮೂರ್ತಿಯವರು ಕೇಳುವುದು ಸಹಜ. ಇದು ತನ್ನ ವರ್ಗವನ್ನು ತಾನು ರಕ್ಷಣೆ ಮಾಡಿಕೊಳ್ಳುವುದು. ಕೋಳಿ ತನ್ನ ಮರಿಯನ್ನು ಹೊಟ್ಟೆಯೊಳಗಡೆ ಇಟ್ಟುಕೊಂಡು ಸಾಕುತ್ತದೆ ಮಾನ್ಯ ಶಿವಮೂರ್ತಿಯವರು ಬಂದಂಥ ವರ್ಗ ಏನಿದೆ ಅದನ್ನು ಅವರು ಹಿಂದೆ ತಿರುಗಿ ನೋಡಿ ಆ ವರ್ಗದ ದೃಷ್ಟಿಯಿಂದ ಆ ಮಾತನ್ನು ಕೇಳಬಹುದು. ಅದು ಉತ್ಪ್ರೇಕ್ಷೆ ಆಗಲಾರದು. ವ್ಯವಸಾಯಗಾರನೆಂದರೆ, ಕೇವಲ ಭೂಮಿ ಇದ್ದವನು ಅಲ್ಲ. ಭೂಮಿ ಇದ್ದವನೂ ಬಂತು, ಭೂಮಿ ಇಲ್ಲದೆ ಅತ್ಯಂತ ದುಡಿಮೆ ಮಾಡುವವನೂ ಬಂತು ಅವನ ಇಡೀ ಕ್ಷೇತ್ರವನ್ನು ತೆಗೆದುಕೊಂಡರೆ ಭೂಮಿ ಇದವನು, ಭೂಮಿಯ ಮೇಲೆ ದುಡಿಯತಕ್ಕವನು. ಕೃಷಿಕರನ್ನು ಅವಲಂಬಿಸಿ ಕೊಂಡಿರತಕ್ಕ ಒಬ್ಬ ಬಡಗಿಯಾಗಬಹುದು, ಒಬ್ಬ ಕುಂಬಾರನಾಗಬಹುದು, ಒಬ್ಬ ಚಮ್ಮಾರನಾಗಬಹುದು, ಭೂಮಿಯನ್ನು ಅವಲಂಬಿಸಿಕೊಂಡಿರತಕ್ಕ ಎಲ್ಲ ವರ್ಗದ ಜನ ಇದ್ದಾರೆ. ಇವತ್ತು ಕೃಷಿಕ ಕೃಷಿ ಕಾರ್ಮಿಕನಾಗಿ ಕೆಲಸ ಮಾಡುತ್ತಾನೆ ಇವತ್ತು ಏನಾಗಿದೆ ಎಂದರೆ, ನಮ್ಮ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಪ್ರಕಾರ ಇವತ್ತು ಕೃಷಿ ಕಾರ್ಮಿಕರಿಗೆ ಮತ್ತು ಸಣ್ಣ ಹಿಡುವಳಿ ದಾರರಿಗೆ, ಅತಿಸಣ್ಣ ಹಿಡುವಳಿ ದಾರರಿಗೆ ಡಿಆರ್‌ಡಿಎಸ್. ಸಾಲವನ್ನು ಕೊಡುತ್ತಿದ್ದೇವೆ, ಐ.ಆರ್.ಡಿ.ಪಿ. ಸಾಲವನ್ನು ಕೊಡುತ್ತಿದ್ದೇವೆ ಸಬ್ಸಿಡಿ ಕೊಡುತ್ತಿದ್ದೇವೆ, ಇವತ್ತು ಏನಾಗಿದೆ ಎಂದರೆ, ಎಷ್ಟೋ ಜನ ಸಾಲದಲ್ಲಿ ಮುಳುಗಿದ್ದಾರೆ. ಏಕೆಂದರೆ ಅವರಿಗೆ ಕೊಟ್ಟಂಥ ಎಮ್ಮೆಗಳು ಬಹಳಷ್ಟು ಉಳಿಯುತ್ತಿಲ್ಲ, ಕುರಿಗಳು ಉಳಿಯುತ್ತಿಲ್ಲ, ಎತ್ತುಗಳು ಉಳಿಯುತ್ತಿಲ್ಲ, ಸಬ್ಸಿಡಿ ಕೊಡುತ್ತೇವೆಂದು ಹೇಳಿ ಕೊಡಿಸಿದ್ದೇವೆ. ಆದರೆ ಅವನ್ನು ರಕ್ಷಣೆ ಮಾಡತಕ್ಕ ವ್ಯವಸ್ಥೆ ಆಗಲಿಲ್ಲ.

ಶ್ರೀ ಕೆ. ಶಿವಮೂರ್ತಿ. — ಐ.ಆರ್.ಡಿ.ಪಿ. ಸಾಲ ಏನು ಕೊಡುತ್ತಾರೆ. ಎತ್ತು ಗಾಡಿ ಕೊಡಬೇಕೆಂದು ಗೈಡ್‌ಲೈನ್‌ನಲ್ಲಿರುತ್ತದೆ. ಅದರ ಪ್ರಕಾರ ಎತ್ತು ಗಾಡಿ ತೆಗೆದುಕೊಂಡು ಮಾರಿಕೊಳ್ಳುತ್ತಾರೆ. ಅವರಿಗೆ ಉಳುಮೆ ಮಾಡುವುದಕ್ಕೆ ಭೂಮಿ ಇರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಅದನ್ನೇ ಸರಿಪಡಿಸಬೇಕು. ಒಂದು ಯೋಜನೆ ಪ್ರಾರಂಭ ಮಾಡಿದರೆ ಅನೇಕ ಲೋಪದೋಷಗಳಾಗುತ್ತವೆ. ನಮ್ಮ ಕಷ್ಟಕ್ಕೆ ಏನಾಗಿದೆ ಅಂದರೆ, ಯೋಜನೆ ವಿಭಾಗದಲ್ಲಿ ಇವುಗಳನ್ನು ಸ್ಥಳದಲ್ಲಿಯೇ ವಿಚಾರ ಮಾಡಿ, ಆಲೋಚನೆ ಮಾಡಿ ಕಾರ್ಯಗತ ಮಾಡತಕ್ಕ ಸಂದರ್ಭದಲ್ಲಿ ಏನೇನು ಲೋಪದೋಷಗಳು ಇವೆ. ಅವುಗಳನ್ನು ಸರಿಪಡಿಸತಕ್ಕ ವ್ಯವಸ್ಥೆ ಇಲ್ಲ. ಯೋಜನೆಗಳನ್ನು ರೂಪಿಸುವಾಗ ಒಂದು ಸ್ಥಿತಿ ಇದ್ದರೆ. ಅದನ್ನು ಕಾರ್ಯಗತ ಮಾಡುವಾಗ ಒಂದು ಸ್ಥಿತಿ ಬರುತ್ತದೆ. ಇದನ್ನು ಸರಿಪಡಿಸಿಕೊಂಡು ಯೋಜನೆಗಳನ್ನು ಕಾರ್ಯಗತ ಮಾಡುವಂಥ ವ್ಯವಸ್ಥೆ ನಮ್ಮಲ್ಲಿ ಬರಬೇಕು. ಇವತ್ತು ಹಳ್ಳಿಯಲ್ಲಿ ಕೃಷಿ ಕಾರ್ಮಿಕರು ಇರಬಹುದು, ಒಬ್ಬ ಕುಶಲಕರ್ಮಿ ಇರಬಹುದು. ಅವರು ಮಾಡತಕ್ಕ ಕಸುಬಿನ ಮೇಲೆ ಸಾಲ ಪಡೆಯುವುದಕ್ಕೆ ಅವಕಾಶ ಇರಬೇಕು. ಹಳ್ಳಿಯಲ್ಲಿ ಸಣ್ಣಪುಟ್ಟ ಉಪ ಕಸಬುಗಳನ್ನು ಮಾಡುವವರಿದ್ದಾರೆ. ಜೇನು ಸಾಕಾಣಿಕೆ ಇರಬಹುದು, ಹೈನು ಸಾಕಾಣಿಕೆ ಇರಬಹುದು, ಗಾಡಿ ಎತ್ತುಗಳನ್ನು ಇಟ್ಟುಕೊಂಡು ಬಾಡಿಗೆ ದುಡಿಯಬಹುದು. ಆಯಾಯ ಕ್ಷೇತ್ರದಲ್ಲಿ ಇರತಕ್ಕವರಿಗೆ ಸಾಲ ಸಿಗತಕ್ಕ ವ್ಯವಸ್ಥೆ ಮಾಡಬೇಕು. ಭೂಮಿ ಇಲ್ಲದವರಿಗೆ ಏನು ಮಾಡಬೇಕೆಂಬ ಪ್ರಶ್ನೆ ಇದೆ ಇವತ್ತು ದೇಶದಲ್ಲಿ ೧೦೦ಕ್ಕೆ ೮೦ರಷ್ಟು ಕೃಷಿ ಕಾರ್ಮಿಕರೇ ದೊಡ್ಡ ಪ್ರಮಾಣದಲ್ಲಿದ್ದಾರೆ. ಈ ದೇಶದಲ್ಲಿ ಸಂಘಟಿತ ಕಾರ್ಮಿಕರ ಸಾಮಾಜಿಕ ರಕ್ಷಣೆಗೆ ಬೇಕಾದಂಥ ಕಾನೂನುಗಳು ಜಾರಿಗೆ ಬಂದಿವೆ. ಆದರೆ. ಅಸಂಘಟಿತ ಕಾರ್ಮಿಕರಿಗೆ ಬೋನಸ್ ಸಿಗುವುದಿಲ್ಲ. ಪ್ರಾವಿಡೆಂಟ್ ಫಂಡ್ ಸಿಗುವುದಿಲ್ಲ, ಇನ್ಸೂರೆನ್ಸ್ ಸಿಗುವುದಿಲ್ಲ, ಗ್ರಾಚ್ಯುಯಿಟಿ ಸಿಗುವುದಿಲ್ಲ. ಇದರ ಬಗ್ಗೆ ಇವತ್ತು ವಿಚಾರ ವಿನಿಮಯ ಆಗಬೇಕಾಗಿದೆ. ಕಾರ್ಖಾನೆಯ ಮಾಲೀಕ ೧೦-೧೫.೨೦ ಜನ ಕಾರ್ಮಿಕರು ತಮ್ಮ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರೆ, ಅವರಿಗೆ ಬೋನಸ್ ಮತ್ತಿತರ ಅನುಕೂಲಗಳನ್ನು ಒದಗಿಸಿಕೊಡುತ್ತಾನೆ. ಕೃಷಿ ಕಾರ್ಮಿಕರು ಒಂದೊಂದು ದಿನ ಒಬ್ಬೊಬ್ಬ ಜಮೀನ್ದಾರನ ಮನೆಯಲ್ಲಿ ಕೆಲಸ ಮಾಡುತ್ತಾರೆ. ಒಂದೇ ಕಡೆ ಕೆಲಸ ಮಾಡತಕ್ಕ ವ್ಯವಸ್ಥೆ ಇಲ್ಲದೇ ಇರುವುದರಿಂದ. ವರ್ಷದಲ್ಲಿ ಇಷ್ಟು ದಿವಸ ನಿಗದಿತ ಕಾಲದಲ್ಲಿ ಕೆಲಸ ಮಾಡದೇ ಇರುವುದರಿಂದ ಬೋನಸ್ ಯಾರು ಕೊಡಬೇಕೆಂಬ ಪ್ರಶ್ನೆ ಇದೆ. ಆದ್ದರಿಂದ ಆ ಒಂದು ವರ್ಗದಿಂದ ಬಂದಿರತಕ್ಕ ಎಲ್ಲರೂ ಸೇರಿ ಈ ವಿಚಾರದಲ್ಲಿ ಯೋಚನೆ ಮಾಡಬೇಕಾಗಿದೆ.

ಶ್ರೀ ಕೆ. ಶಿವಮೂರ್ತಿ.— ಕೃಷಿ ಕಾರ್ಮಿಕರು ಅಸಂಘಟಿತರಾಗಿದ್ದಾರೆ. ಹಳ್ಳಿಗಳಲ್ಲಿ ಹಕ್ಕಿ ಪಿಕ್ಕರು, ಬುಡಬುಡಕಿಯವರು ಇದ್ದಾರೆ. ಇವರಿಗೆ ಯಾವ ಆಸ್ತಿಯೂ ಇಲ್ಲ. ಇವರ ಬಗ್ಗೆ ಏನು ಹೇಳುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ — ಇವರ ಬಗ್ಗೆಯೂ ವಿಚಾರ ಮಾಡಬೇಕಾದ ಅಗತ್ಯ ಇದೆ. ಸಾಮಾಜಿಕ ರಕ್ಷಣೆ ಕೊಡತಕ್ಕ ವ್ಯವಸ್ಥೆಯನ್ನು ಕೃಷಿ ಕಾರ್ಮಿಕರಿಗೆ ತರಲೇಬೇಕು. ರೈತರ ಬಗ್ಗೆ ಮಾತನಾಡುವಾಗ ಕೃಷಿ ಕಾರ್ಮಿಕರನ್ನು ಹೊರತುಪಡಿಸಿ ಮಾತನಾಡುವುದಕ್ಕೆ ಸಾಧ್ಯವಿಲ್ಲ. ಹಕ್ಕಿ ಪಿಕ್ಕರು ಮತ್ತು ಬುಡಬುಡಕಿಯವರು ಸಾಮಾಜಿಕವಾಗಿ ಬಂದಂಥ ಒಂದು ಸಣ್ಣ ವರ್ಗ. ನಂಜುಂಡ ಸ್ವಾಮಿಯವರೆ ಚನ್ನಗಿರಿ ತಾಲ್ಲೂಕಿನಲ್ಲಿ ಇವರಿಗೋಸ್ಕರ ಪುನರ್‌ವಸತಿ ಮಾಡುವುದಕ್ಕೆ ಪ್ರಯತ್ನ ಮಾಡಿ, ಭೂಮಿ ಕೊಟ್ಟು ನೀವುಗಳು ಇಲ್ಲಿಯೇ ವಾಸ ಮಾಡಿಕೊಂಡು ಬದುಕಬೇಕೆಂದು ತಿಳಿಸಿದೆವು. ಇವರು ಒಂದು ಕಡೆ ಒಂದು ತಿಂಗಳು ಕಾಲ ಇದ್ದು ಬೇರೆ ಕಡೆ ಹೊರಟು ಹೋಗುತ್ತಾರೆ. ಇವರು ಸ್ಥಿರವಾಗಿ ಬದುಕುವುದಕ್ಕೆ ಲಕ್ಷ್ಯ ಕೊಡುವುದಿಲ್ಲ. ಇವತ್ತು ಭೂಮಿ ಇದೆ, ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನಲ್ಲಿ, ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್‌ಗಳನ್ನು ತೆಗೆದು ನೀರು ಉಪಯೋಗಿಸಿಕೊಂಡು ಬೇಸಾಯ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಕೆ. ಶಿವಮೂರ್ತಿ.— ಬುಡಬುಡಕಿಯವರಿಗೆ ಸ್ಪೆಷಲ್ ಕಾಂಪೊನೆಂಟ್ ಸ್ಕೀಮು ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ — ಹರಿಜನರಿಗೆ ಮಾತ್ರ ವಿಶೇಷ ಘಟಕ ಯೋಜನೆ ಬರುತ್ತೆ. ಗಿರಿಜನರಿಗೆ, ಗುಡ್ಡಗಾಡು ಜನರಿಗೆ ಬರುವುದಿಲ್ಲ. ಈ ಒಂದು ವರ್ಗದವರಿಗೂ ಈ ಯೋಜನೆಯನ್ನು ಅನ್ವಯಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ವಿಶೇಷ ಘಟಕ ಯೋಜನೆಯ ಪ್ರತಿಫಲದ ವ್ಯಾಪ್ತಿಯಲ್ಲಿ ಇವೊತ್ತು ಹರಿಜನರನ್ನು ಮಾತ್ರ ನಾವು ತಂದಿದ್ದೇವೆ. ಹರಿಜನರು ಒಂದೇ, ಗಿರಿಜನರು ಒಂದೇ. ಅವರೆಲ್ಲರೂ ಅಸ್ಪೃಶ್ಯರು. ಅವರೆಲ್ಲರೂ ಕೂಡ ಸಮಾಜದ ಶೋಷಣೆಗೆ ಒಳಗಾಗಿರ ತಕ್ಕವರೆ.

ಶ್ರೀಮತಿ ಮೋಟಮ್ಮ.— ಗಿರಿಜನರಿಗೆ ಟ್ರೈಬಲ್ಸ್ ಸಬ್ ಪ್ಲಾನ್ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.— ಆದರೆ ವಿಶೇಷ ಘಟಕ ಯೋಜನೆಯ ವ್ಯಾಪ್ತಿಯಲ್ಲಿ ಇವರನ್ನು ತಂದರೆ ಏನೂ ಆಗುವುದಿಲ್ಲ. ಗಿರಿಜನರಿಗೋಸ್ಕರ ಒಂದು ವಿಶೇಷ ಗಿರಿಜನ ಅಭಿವೃದ್ಧಿ ಯೋಜನೆ ಇದೆ. ಅದರಲ್ಲಿ ಒಂದು ತೊಂದರೆ ಏನಾಗಿದೆಯೆಂದರೆ ಕೆಲವು ತಾಲ್ಲೂಕುಗಳಿಗೆ ಮಾತ್ರ ಅದು ಸೀಮಿತವಾಗಿದೆ. ಕೆಲವು ತಾಲ್ಲೂಕಿನಲ್ಲಿ ಕಡಿಮೆ ಪ್ರಮಾಣದ ಜನಸಂಖ್ಯೆ ಇರುವುದರಿಂದ ಆ ಟ್ರೈಬಲ್ ಸಬ್ ಪ್ಲಾನ್, ವಿಶೇಷ ಘಟಕ ಯೋಜನೆ ಏನಿದೆ ಅದು ಅನ್ವಯವಾಗುತ್ತಿಲ್ಲ. ಆದ್ದರಿಂದ, ಈ ವ್ಯವಸಾಯ ಕ್ಷೇತ್ರದ ಬಗ್ಗೆ ಈಗ ನಾನು ಬೇರೆ ಕಡೆ ಮಾತನಾಡಲಿಕ್ಕೆ ಹೋಗಬಾರದು. ಈ ವ್ಯವಸಾಯ ಕ್ಷೇತ್ರದ ಬಗ್ಗೆ ನಾನು ಏತಕ್ಕೆ ವಿಶೇಷವಾಗಿ ಪ್ರಧಾನವಾಗಿ ಪ್ರಸ್ತಾಪ ಮಾಡಿದೆ ಅಂದರೆ ನಮ್ಮ ಕೃಷಿ ನೀತಿಯನ್ನು ಮಾರ್ಪಾಡುಗೊಳಿಸಬೇಕು. ಅದಕ್ಕೆ ವಿಶೇಷವಾಗಿ ಹೊಸ ದೃಷ್ಟಿಕೋನವನ್ನು ಕೊಡಬೇಕು. ಆ ಮುಖೇನ ನಮ್ಮ ರೈತರಿಗೆ ನ್ಯಾಯವಾದಂಥ ಬೆಲೆಯನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ಅದೇ ಕಾಲಕ್ಕೆ ಒಣ ಭೂಮಿಗೆ ಹೆಚ್ಚಿನ ನೀರನ್ನು ಕೊಟ್ಟು ಒಳ್ಳೆಯ ಬೀಜವನ್ನು ಕೊಟ್ಟು ಸಕಾಲದಲ್ಲಿ ಸಾಲ ಕೊಟ್ಟು ರೈತನ ಶಕ್ತಿಯನ್ನು ನಾವು ಬೆಳೆಸಬೇಕು. ನಮಗೆ ಅನ್ನವನ್ನು ಕೊಡತಕ್ಕ ರೈತ ಏನಿದ್ದಾನೆ ಅವನು ಸುಖವಾಗಿ ಬದುಕಬೇಕು ಅವನ ಜೀವನವನ್ನು ಸುಖವಾಗಿ ಇಡಬೇಕು ಎನ್ನುವ ಒಂದೇ ಒಂದು ಕಾರಣಕ್ಕಾಗಿ ವಿಶೇಷವಾಗಿ ಈ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಈ ಅಂಕಿ ಸಂಖ್ಯೆಗಳು ಕಳೆದ ಎರಡು ದಶಕಗಳಲ್ಲಿ ಯಥಾವತ್ತಾಗಿ ಹಾಗೆಯೇ ನಿಂತಿದೆಯೇ ವಿನಹ ಮುಂದೆ ಹೋಗಲಿಲ್ಲ. ಜನಸಂಖ್ಯೆಯ ಪ್ರಮಾಣವನ್ನು ನಾವು ಗಣನೆಗೆ ತೆಗೆದುಕೊಂಡರೆ ಅದು ಹಿಂದೆ ಹೋಗಿದೆಯೇ ವಿನಹ ಮುಂದೆ ಹೋಗುತ್ತಿಲ್ಲ. ಆದ್ದರಿಂದ, ಇದನ್ನು ಮುಂದೆ ತೆಗೆದುಕೊಂಡು ಹೋಗತಕ್ಕ ಕಾರ್ಯಕ್ರಮವನ್ನು ರೂಪಿಸಬೇಕಾದ್ದು ಅಗತ್ಯ. ಅದು ದೇಶೀಯ ನೀರಾವರಿ ಕ್ಷೇತ್ರವನ್ನು ವಿಸ್ತಾರ ಮಾಡುವುದರಿಂದ, ಆಗಬಹುದು ವ್ಯಾಪಕ ಮಾಡುವುದರಿಂದ ಆಗಬಹುದು ಅಥವಾ ಅಂತರ್‌ಜಲವನ್ನು ಮಾಡುವುದರಿಂದ ಆಗಬಹುದು. ಇವೊತ್ತು ಸಹಕಾರ ಸಂಘಗಳನ್ನು ಸದೃಢಪಡಿಸಿ ಹೆಚ್ಚು ಜನರಿಗೆ ಸಾಲವನ್ನು ಸಕಾಲದಲ್ಲಿ ಕೊಡುವಂಥ ಕೆಲಸ ಆಗಬೇಕು. ಇವೊತ್ತು ಗೊಬ್ಬರ ಕೊಡತಕ್ಕಂಥ ಕೆಲಸ ಆಗಬೇಕು. ಏಕೆಂದರೆ, ಗೊಬ್ಬರ ಕೊಡತಕ್ಕ ವಿಚಾರದಲ್ಲಿ ನಾನು ಆಗಲೇ ಪ್ರಸ್ತಾಪ ಮಾಡಿ ಮಧ್ಯದಲ್ಲಿಯೇ ನಿಲ್ಲಿಸಿದ್ದೆ. ರೈತನಿಗೆ ಡಿಸಿಸಿ ಬ್ಯಾಂಕ್‌ನಲ್ಲಿ ಬೆಳೆ ಸಾಲವನ್ನು ಮಂಜೂರು ಮಾಡಿ ಕೊಡುತ್ತಾರೆ. ಅವೊತ್ತು ಅವನಲ್ಲಿ ಗೊಬ್ಬರ ಇರುವುದಿಲ್ಲ, ಆ ಗೊಬ್ಬರ ಇಲ್ಲದೇ ಇರುವ ಕಾರಣಕ್ಕಾಗಿ ಅವನು ಗೊಬ್ಬರ ಹಾಕುವುದಿಲ್ಲ. ಒಂದು ತಿಂಗಳು ಅಥವಾ ಎರಡು

ತಿಂಗಳು ಆದ ಮೇಲೆ ಆ ಗೊಬ್ಬರವನ್ನು ಯಾವುದೋ ಅಂಗಡಿಗೆ ಕೊಡುತ್ತಾನೆ. ಅದರ ಬಾಬ್ತು ಬಂದಂಥ ದುಡ್ಡು ತೆಗೆದುಕೊಂಡು ಹೋಗಿ ಖರ್ಚು ಮಾಡುತ್ತಾನೆ. ಇದು ಆ ರೀತಿಯಲ್ಲಿ ಆಗುತ್ತದೆ. ಏಕೆಂದರೆ, ಬೆಳೆ ಸಾಲವನ್ನು ಕೊಡುವ ದಿವಸ ಅವನ ಕೈಲಿ ಗೊಬ್ಬರವನ್ನು ಕೊಟ್ಟು ಕಳುಹಿಸಿದರೆ, ಸರಿ ಹೋಗುತ್ತದೆ. ಹಳ್ಳಿಯಲ್ಲಿ ಒಂದು ತೊಂದರೆ ಇದೆ. ಬೆಳೆ ಸಾಲವನ್ನು ಬಹಳಷ್ಟು ಜನರು ಬೆಳೆ ಬೆಳೆಯುವುದಕ್ಕೆ ಉಪಯೋಗಿಸದೆ ಬೇರೊಂದಕ್ಕೆ ಉಪಯೋಗ ಮಾಡಿ ಬಿಡುತ್ತಾರೆ. ಆದ್ದರಿಂದ, ಅವನಿಗೆ ಬೆಳೆ ಸಾಲವನ್ನು ಕೊಡುವ ದಿವಸ ಗೊಬ್ಬರವನ್ನೂ ಕೊಟ್ಟುಬಿಟ್ಟರೆ ಒಳ್ಳೆಯದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಅವಕಾಶ ಕೊಡಬೇಕು. ಮಾನ್ಯ ಸದಸ್ಯರು ಗೊಬ್ಬರವನ್ನು ಬೆಳೆ ಸಾಲದ ಸಮಯದಲ್ಲಿ ಕೊಟ್ಟರೆ ಒಳ್ಳೆಯದು ಎಂದು ಪ್ರಸ್ತಾಪ ಮಾಡಿದರು. ತಮ್ಮ ಅನುಭವಕ್ಕೆ ಬಂದಿರ ಬಹುದು. ಯಾವ ರೈತ ಮೂರಿಯಾ ಗೊಬ್ಬರವನ್ನು ಒಡೆ ತಲೆಯ ಮೇಲೆ ಹಾಕಬೇಕು. ಈಗ ಏನು ಆಗುತ್ತಿದೆಯೆಂದರೆ, ಸಾಲ ಪಡೆಯುವಂತಹವನಿಗೆ ೫೦ ರೂಪಾಯಿ ಹಣ ಕೊಟ್ಟು ೫೦ ರೂಪಾಯಿ ಗೊಬ್ಬರ ಕೊಡುತ್ತಿದ್ದಾರೆ. ಅವನಿಗೆ ಗೊಬ್ಬರವನ್ನು ಇಡಲಿಕ್ಕೆ ಸ್ಥಳ ಇರುವುದಿಲ್ಲ. ಏಕೆಂದರೆ, ಅವನು ಗೊಬ್ಬರ ಉಪಯೋಗಿಸಬೇಕಾದರೆ ಮೂರು ತಿಂಗಳು ಆದ ಮೇಲೆ ಉಪಯೋಗಿಸ ಬೇಕಾಗಿರುತ್ತದೆ. ಆ ಗೊಬ್ಬರ ಅವನಿಗೆ ಉಪಯೋಗಕ್ಕೆ ಬರುತ್ತದೆಯೋ ಇಲ್ಲವೋ, ಅವನು ಆ ಗೊಬ್ಬರವನ್ನು ಬಲವಂತವಾಗಿ ತೆಗೆದುಕೊಳ್ಳಲೇ ಬೇಕಾಗಿರುತ್ತದೆ. ಆದ್ದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ, ರೈತನಿಗೆ ಸಾಲ ಕೊಡುವುದು ಸರಿ, ಆದರೆ ಅವನಿಗೆ ಒಳ್ಳೆಯ ಗೊಬ್ಬರ ಸಿಕ್ಕುತ್ತಿಲ್ಲ, ಅವನಿಗೆ ಅನಗತ್ಯ ಗೊಬ್ಬರವನ್ನು ಕೊಟ್ಟು ಅವನು ಇನ್ನೊಬ್ಬನ ಅಂಗಡಿಗೆ ಅದನ್ನು ಮಾರುವ ಸ್ಥಿತಿಯಲ್ಲಿರುತ್ತಾನೆ. ಆದ್ದರಿಂದ ಅವನಿಗೆ ಪೂರ್ಣವಾಗಿ ಹಣ ಕೊಟ್ಟು ಆ ಒಂದು ಸರ್ಕಾರಿ ಗೊಬ್ಬರದ ಅಂಗಡಿಗಳಲ್ಲಿ ಅವನಿಗೆಬೇಕಾದ ಗೊಬ್ಬರವನ್ನು ಕೊಂಡುಕೊಳ್ಳುವ ಅವಕಾಶ ಸಿಕ್ಕಿದಾಗ ಮಾತ್ರ ರೈತನು ಉಳಿಯುತ್ತಾನೆಯೇ ಹೊರತು ಇಲ್ಲದೇ ಹೋದರೆ, ದುಡ್ಡನ್ನು ತೆಗೆದುಕೊಂಡು ಗೊಬ್ಬರವನ್ನು ಮನೆಯಲ್ಲಿಯೇ ಇಟ್ಟು ಅದಕ್ಕೆ ಬಡ್ಡಿ ಕಟ್ಟುವಂಥ ವಿಚಿತ್ರ ಪರಿಸ್ಥಿತಿ ರೈತನಿಗೆ ಒದಗಿ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನನ್ನ ಪ್ರಸ್ತಾಪ ಏನೆಂದರೆ, ನಮ್ಮ ವ್ಯವಸ್ಥೆ ಸರಿಯಿಲ್ಲ. ನಾವು ಇಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದರೂ ಕೂಡ ಅದು ಸರಿಯಾಗಿ ರೈತರಿಗೆ ಮುಟ್ಟುತ್ತಿಲ್ಲ, ಏಕೆಂದರೆ ನಮ್ಮ ವ್ಯವಸ್ಥೆಯಲ್ಲಿ ಲೋಪ ಇದೆ. ಇದನ್ನು ಸರಿಪಡಿಸಬೇಕೆಂದರೆ ನಾವು ಸಕಾಲದಲ್ಲಿ ರೈತನಿಗೆ ಸಾಲವನ್ನು ಕೊಡಬೇಕು, ಸಕಾಲದಲ್ಲಿ ಗೊಬ್ಬರವನ್ನು ಕೊಡಬೇಕು. ಆ ರೀತಿ ಮಾಡಿದರೆ ರೈತರಿಗೆ ಸಹಾಯ ಮಾಡಲಿಕ್ಕೆ ಆಗುತ್ತದೆಯೇ ವಿನಹ ಬರೀ ಮಾತಿನಲ್ಲಿ ಉಳಿದರೆ ಈ ಸಹಾಯ ಅವರಿಗೆ ಸಿಕ್ಕುವುದಿಲ್ಲ. ನಮ್ಮ ವ್ಯವಸಾಯ ಕ್ಷೇತ್ರದಲ್ಲಿ ಅಭಿವೃದ್ಧಿಯಾಗುವುದಿಲ್ಲ, ಹೆಚ್ಚು ಉತ್ಪಾದನೆಯೂ ಸಹ ಆಗುವುದಿಲ್ಲ. ಆದ್ದರಿಂದ, ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಹರ್ಷಕುಮಾರಗೌಡ.— ನಮ್ಮ ಮಾನ್ಯ ಸದಸ್ಯರು ಮಾತನಾಡುತ್ತಾ ವ್ಯವಸಾಯ ಕ್ಷೇತ್ರದಲ್ಲಿ ಬದಲಾವಣೆ ಏನೂ ಆಗಿಲ್ಲ, ಅದು ಹಾಗೇ ಸ್ಥಗಿತಗೊಂಡಿದೆ, ಇದಕ್ಕೆ ಬೇಕಾದಷ್ಟು ಹಣ ಮಾತ್ರ ಖರ್ಚಾಗಿದೆ ಎಂದು ಹೇಳಿದರು. ನನಗೆ ಗೊತ್ತಿರುವ ಹಾಗೆ, ಸುಮಾರು ೩೦–೩೫ ವರ್ಷಗಳ ಹಿಂದೆ ೩೩ ಕೋಟಿ ಜನರಿಗೆ ಅನ್ನ, ಬಟ್ಟೆಯನ್ನು ಹೊಂಚಿಕೊಳ್ಳತಕ್ಕಂತಹ ಸ್ಥಿತಿ ನಮಗೆ ಇಲ್ಲದೆ ಪರದೇಶದಿಂದ ಹುಳಿತ ಜೋಳ, ಗೋಧಿಯನ್ನು ತಂದು ರೇಷನ್ ಡಿಪೋ ಮುಖಾಂತರ ಕೊಡತಕ್ಕಂತಹ ವ್ಯವಸ್ಥೆ ಇತ್ತು. ಇವತ್ತು ೮೦ ಕೋಟಿ ಜನರಿದ್ದೇವೆ ಇಂಡಿಯಾ ದೇಶದಲ್ಲಿ ಗ್ರೀನ್ ರೆವಲ್ಯೂಷನ್ ಆಗಿದೆ. ೮೦ ಕೋಟಿ ಜನರಿಗೆ ಅನ್ನ, ಬಟ್ಟೆ ಕೊಡತಕ್ಕಂತಹ ಸಾಮರ್ಥ್ಯವನ್ನು ಅದು ಪಡೆದಿದೆ ಎಂದು ಅನೇಕ ಇಂಟರ್‌ನ್ಯಾಷನಲ್ ಮಾನಿಟರಿ ಆರ್ಗನೈಸೇಷನ್ಸ್‌ನವರು ಒಪ್ಪಿಕೊಂಡಿದ್ದಾರೆ. ಅಂಥಾದ್ದರಲ್ಲಿ ಈ ವ್ಯವಸಾಯ ಕ್ಷೇತ್ರದಲ್ಲಿ ಏನೂ ಆಗಿಲ್ಲ, ಹಾಗೇ ಉಳಿದಿದೆ ಅನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ನನಗೆ ಸ್ವಲ್ಪ ಕ್ಲಾರಿಫಿಕೇಷನ್ ಕೊಟ್ಟರೆ ಒಳ್ಳೆಯದು.

ಶ್ರೀ ಕಾಗೋಡು ತಿಮ್ಮಪ್ಪ.— ವ್ಯವಸಾಯ ಕ್ಷೇತ್ರದಲ್ಲಿ ಬೆಳವಣಿಗೆ ಆಗೇ ಇಲ್ಲವೆಂದು ನಾನು ಹೇಳಲಿಲ್ಲ. ಆದರೆ ನಮ್ಮ ನಿರೀಕ್ಷೆಗೆ ತಕ್ಕಂತೆ ಆಗಿಲ್ಲ. ಸರಕಾರ ಕೊಟ್ಟಿರುವ ಅಂಕಿ ಅಂಶಗಳನ್ನು ಆಧರಿಸಿ ನಾನು ಇದನ್ನು ಹೇಳುತ್ತಿರತಕ್ಕಂಥಾದ್ದು. ಹಿಂದೆ ನಮ್ಮ ಕರ್ನಾಟಕದಲ್ಲಿ ಎಷ್ಟು ಭೂಮಿಯಲ್ಲಿ ಬೆಳೆಯನ್ನು ಬೆಳೆಯುತ್ತಿದ್ದರೂ ಈಗಲೂ ಅಷ್ಟೇ ಇದೆ. ಯಾವುದೋ ಒಂದು ಜಿಲ್ಲೆಯಲ್ಲಿ ಹತ್ತು ಚೀಲ ಜೋಳ ಬೆಳೆಯುವವನು ೨೦ ಚೀಲ ಜೋಳ ಬೆಳೆಯುತ್ತಿರಬಹುದು. ನಮ್ಮಲ್ಲಿ ಕೂಡ ಹಸಿರು ಕ್ರಾಂತಿಯಾಗಿದೆ. ಇದರ ಬಗ್ಗೆ ಲೆಕ್ಕಾಚಾರ ಹಾಕಿ ಇಲ್ಲಿ ಲೆಕ್ಕ ಕೊಟ್ಟಿದ್ದಾರೆ. ಇವತ್ತು ನಮ್ಮಲ್ಲಿ

ಹೆಚ್ಚು ಒಣ ಭೂಮಿ ಇದೆ, ಅದನ್ನು ಸುಧಾರಣೆ ಮಾಡಿಲ್ಲ. ಇವತ್ತು ಒಣ ಭೂಮಿ ಪ್ರದೇಶದಲ್ಲಿ ಬೆಳೆಯುತಕ್ಕಂತಹ ಬೆಳೆಗೆ ಹೆಚ್ಚು ಹಣವನ್ನು ರೈತನು ಖರ್ಚು ಮಾಡಬೇಕಾಗುತ್ತದೆ, ಮಳೆಯನ್ನು ಆಧರಿಸಿ ಬೆಳೆಯಬೇಕಾಗುತ್ತದೆ ಸಕಾಲದಲ್ಲಿ ಮಳೆ ಬಾರದೇ ಹೋದರೆ ರೈತನು ಮುಳುಗಿ ಹೋಗುತ್ತಾನೆ. ಮಳೆ ಬಂತು ಅಂದರೂ ಕೂಡ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬರಬೇಕು, ಅದು ಬರದೇ ಹೋದರೆ ಯಥಾವತ್ತಾಗಿ ಲುಕ್ಸಾನ್‌ಗೆ ಗುರಿಯಾಗುತ್ತಾನೆ. ನಮ್ಮ ಆಹಾರ ಉತ್ಪಾದನೆ ಒಂದಕ್ಕೆ ೪ರಷ್ಟು ಆಗಬೇಕಾಗಿತ್ತು, ಆದರೆ ಆ ಮಟ್ಟದಲ್ಲಿ ಉತ್ಪಾದನೆಯಾಗುತ್ತಿಲ್ಲ. ಹಿಂದೆ ೫೦ ಲಕ್ಷ ಟನ್ ಬೆಳೆದಿದ್ದರೆ ೨೦ ವರ್ಷಗಳ ನಂತರ ಹತ್ತು ಲಕ್ಷಕ್ಕೆ ಬಂದಿದ್ದೇವೆ. ನಾವು ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಕೂಡ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ನಿರೀಕ್ಷೆ ಏನು ಇತ್ತು, ನಾವು ಎಷ್ಟು ದೂರ ಹೋಗಬೇಕಾಗಿತ್ತು ಅಷ್ಟು ದೂರ ಹೋಗಿಲ್ಲ. ಕೃಷಿ ಕ್ಷೇತ್ರದ ಬಗ್ಗೆ ಹೆಚ್ಚು ಆಲೋಚನೆ ಮಾಡಬೇಕಾದಂತಹ ಅಗತ್ಯ ಇದೆ. ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ಗಳನ್ನು ಮಾಡಿದ್ದಾರೆ. ಇವೊತ್ತು ನಮ್ಮಲ್ಲಿ ೭೦ ಲಕ್ಷ ಹೆಕ್ಟೇರ್ ಒಣ ಭೂಮಿ ಇದೆ. ಇದಕ್ಕೆ ಸರಿಯಾದಂತಹ ಕಾಲದಲ್ಲಿ ನೀರನ್ನು ಒದಗಿಸಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮ ಕೆರೆಗಳ ಹೂಳನ್ನು ತೆಗೆಸಬೇಕಾಗುತ್ತದೆ. ಬೋರ್‌ವೆಲ್ ಅನ್ನು ಹಾಕಬೇಕು, ಬಾವಿ ತೋಡಿಸುವುದಕ್ಕೆ ಅವಕಾಶ ಮಾಡಿ ಕೊಟ್ಟು ಪಂಪ್‌ಸೆಟ್ ಅನ್ನು ಹಾಕಿಸಬೇಕಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ೫೦,೦೦೦ ರೂಪಾಯಿಗಳನ್ನು ಖರ್ಚು ಮಾಡಿ ಬೋರ್‌ವೆಲ್ ಹಾಕಿ ೪-೫ ವರ್ಷವಾಗಿದೆ, ಅದಕ್ಕೆ ಇಲ್ಲಿಯವರೆಗೂ ಕರೆಂಟ್ ಅನ್ನು ಕೊಟ್ಟಿಲ್ಲ. ಹಣವನ್ನು ಸಾಲ ಮಾಡಿ ಪಂಪ್‌ಸೆಟ್ ಅನ್ನು ಪರ್ಚೇಸ್ ಮಾಡಿ ೩-೪ ವರ್ಷದಿಂದ ಹಾಗೆಯೇ ಇಟ್ಟುಕೊಂಡಿದ್ದಾರೆ. ಅದನ್ನು ಹಾಗೇ ಬಿಡುವುದಕ್ಕೆ ಆಗುತ್ತದೆಯೇ ದಕ್ಷಿಣ ಕನ್ನಡ ಜಿಲ್ಲೆಯವರು ಬಾವಿ ತೋಡಿಸಿಕೊಂಡು ೬ ವರ್ಷವಾಗಿದೆ, ಅದು ಹಾಗೇ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಹರ್ಷಕುಮಾರ ಗೌಡ.—ನಮ್ಮ ತಾಲ್ಲೂಕಿನಲ್ಲಿ ಎರಡೂವರೆ ಸಾವಿರ ಪಂಪುಸೆಟ್ಟುಗಳು ವಿದ್ಯುಚ್ಛಕ್ತಿಗಾಗಿ ಕಾಯುತ್ತಿವೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಣ ಬೇಸಾಯಕ್ಕೆ ನೀವು ಕೊಡತಕ್ಕ ಒಂದೇ ಒಂದು ಸಹಾಯ ಎಂದರೆ, ಅವರಿಗೆಲ್ಲಾ ನೀರಾವರಿ ಅನುಕೂಲವನ್ನು ಮಾಡಿಕೊಡತಕ್ಕದ್ದು. ಆದರೆ ಎಲ್ಲ ಕಡೆಯಲ್ಲೂ ನೀರಾವರಿ ಅನುಕೂಲವನ್ನು ಮಾಡಿಕೊಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಸಾಧ್ಯತೆ ಇದೆ ಅಲ್ಲಿ ಮಾಡಿ ಕೊಡುವುದು ಸಾಧ್ಯ. ಸರ್ಕಾರದಿಂದ ಬಾವಿ ತೆಗೆಸಿ, ಬೋರ್‌ವೆಲ್‌ಗಳನ್ನು ಹಾಕಿಸಿ ನೀರನ್ನು ಕೊಡುವುದಾದರೆ ರೈತರಿಗೆ ಸಾಲವನ್ನು ಕೊಡದಿದ್ದರೂ ಚಿಂತೆ ಇಲ್ಲ, ಅವರು ತಾವಾಗಿಯೇ ಮುಂದೆ ಬರುತ್ತಾರೆ. ಆದ್ದರಿಂದ ಈ ಸಂದರ್ಭದಲ್ಲಿ ಒಣ ಬೇಸಾಯದ ಬಗ್ಗೆ ಯೋಚನೆ ಮಾಡತಕ್ಕದ್ದು ಅವಶ್ಯಕವಿದೆ.

ಇನ್ನು ಬಡವರ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲೇಬೇಕಾಗಿವೆ. ಏಕೆಂದರೆ, ಹಿಂದೆ ನಾವು ಅಧಿಕಾರದಲ್ಲಿದ್ದಾಗ ಬಡವರಿಗೋಸ್ಕರ ಪ್ರತಿಯೊಂದು ತಾಲೂಕಿನಲ್ಲೂ ಪ್ರತಿವರ್ಷ ೧೦೦೦ ಜನತಾ ಮನೆಗಳನ್ನು ಕಟ್ಟಿಸಿಕೊಡತಕ್ಕ ಕೆಲಸವನ್ನು ಪ್ರಾರಂಭ ಮಾಡಿದ್ದೆವು. ಇವಕ್ಕೆ ಸಂಬಂಧಪಟ್ಟಂತೆ ಸರ್ಕಾರೀ ಆಜ್ಞೆ ಕೂಡ ಇದೆ. ಆಗ ತಾವೂ ಅಧಿಕಾರದಲ್ಲಿದ್ದಿರಿ......

ಶ್ರೀ ಹರ್ಷಕುಮಾರ ಗೌಡ.—ಮಾನ್ಯ ಅಧ್ಯಕ್ಷರೆ, ರೈತರ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹೇಳುತ್ತಿದ್ದಾರೆ. ನಾನು ಅವರಲ್ಲಿ ಪ್ರಾರ್ಥಿಸುತ್ತೇನೆ ಕರ್ನಾಟಕದಲ್ಲಿ ರೈತರ ಸರ್ವತೋಮುಖ ಅಭಿವೃದ್ಧಿಗೆ ರಾಜ್ಯ ಸರ್ಕಾರದವರು ಹಣವನ್ನು ತೊಡಗಿಸಿದಾಗ ಹಲವಾರು ರೀತಿಯಲ್ಲಿ ರೈತರ ಶೋಷಣೆಯಾಗುತ್ತಿದೆ. ಅದು ಹೇಗೆಂದರೆ, ನಮ್ಮ ರಾಜ್ಯದಲ್ಲಿ ದನಕರುಗಳಿಗೆ ಬೇಕಾದ ಎಲ್ಲ ಆಹಾರಪದಾರ್ಥಗಳು ನಮ್ಮಲ್ಲಿ ತಯಾರಾದರೂ ಅವು ತಮಿಳ್ನಾಡಿಗೆ ಮಾರಾಟಕ್ಕೆ ಹೋಗಿ ಮತ್ತೆ ವಾಪಸು ಕರ್ನಾಟಕಕ್ಕೇ ಬರುತ್ತವೆ ನಮ್ಮ ಕರ್ನಾಟಕದಲ್ಲಿ ಹತ್ತಿ ಬೆಳೆಯುತ್ತದೆ, ಇಲ್ಲಿ ಬೆಳೆದಂಥ ಹತ್ತಿ ತಮಿಳ್ನಾಡಿಗೆ ಹೋಗಿ ಅಲ್ಲಿಂದ ಮತ್ತೆ ವಾಪಸು ನಮ್ಮ ರಾಜ್ಯಕ್ಕೇ ಬರುತ್ತದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ತಯಾರಾದಂಥ ರೇಷ್ಮೆ ತಮಿಳ್ನಾಡಿಗೆ ಮಾರಾಟಕ್ಕೆ ಹೋಗಿ ಮತ್ತೆ ಅಲ್ಲಿಂದ ವಾಪಸು ನಮಗೇ ಬರುತ್ತದೆ. ಕರ್ನಾಟಕದ ರೈತ ಬಾಳೆಹಣ್ಣನ್ನು ಬೆಳೆದರೆ ತಮಿಳ್ನಾಡಿಗೆ ರೂಪಾಯಿಗೆ ೪ರಂತೆ ಮಾರಾಟಕ್ಕೆ ಕಳುಹಿಸಿಕೊಡುತ್ತಾನೆ. ಈ ರೀತಿ ನಮ್ಮ ರೈತರ ಶೋಷಣೆ ಆಗುತ್ತಿದೆ. ಇದನ್ನು ಯಾವರೀತಿ ತಪ್ಪಿಸುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನನಗೆ ಒಂದು ಸಂಶಯ ಬರುತ್ತಿದೆ. ನಮ್ಮ ಎಲ್ಲ ಪ್ರಶ್ನೆಗಳಿಗೂ ಆಡಳಿತ ಪಕ್ಷದ ಸದಸ್ಯರೇ ವಿವರಣೆಗಳನ್ನು ನೀಡುತ್ತಿದ್ದಾರೆ......

ಶ್ರೀ ಹರ್ಷಕುಮಾರಗೌಡ.—ವಿರೋಧಪಕ್ಷದವರು ಸ್ಪಷ್ಟೀಕರಣವನ್ನು ಕೇಳುವ ಅಗತ್ಯವಿಲ್ಲ ಎಂದು ಆಡಳಿತ ಪಕ್ಷದವರೇ ವಿವರಣೆಗಳನ್ನು......

ಶ್ರೀ ಕಾಗೋಡು ತಿಮ್ಮಪ್ಪ.—ಆಗ ಆಡಳಿತಪಕ್ಷದಲ್ಲಿದ್ದವರು ಇವತ್ತು ವಿರೋಧಪಕ್ಷದಲ್ಲಿದ್ದಾರೆ. ನಾವು ಅಧಿಕಾರದಲ್ಲಿದ್ದಾಗ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದುದನ್ನು ಅವರು ಕೈಬಿಟ್ಟಿದ್ದಾರೆ. ಪ್ರತಿವರ್ಷ ರಾಜ್ಯದಲ್ಲಿರತಕ್ಕ ಬಡವರಿಗೋಸ್ಕರ ಪ್ರತಿಯೊಂದು ತಾಲೂಕಿನಲ್ಲೂ ೧೦೦೦ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಯೋಜನೆಯನ್ನು ೧೯೭೨ರಲ್ಲಿ ಪ್ರಾರಂಭ ಮಾಡಿದೆವು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ವಾಮಿ, ೧೯೭೩ರಲ್ಲಿ ಈ ಯೋಜನೆ ಪ್ರಾರಂಭವಾದುದು ನಿಜ. ಅದರಲ್ಲಿ ಅನುಮಾನವಿಲ್ಲ. ಆಗ ನಾವೂ ಮತ್ತು ಅವರೂ ಒಟ್ಟಿಗೇ ಇದ್ದೆವು. ಆದರೆ, ಈ ಯೋಜನೆಯನ್ನು ಏನು ಪ್ರಾರಂಭ ಮಾಡಿದರು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಲಿಲ್ಲ, ಅದನ್ನು ಅನುಷ್ಠಾನದಲ್ಲಿ ತರಲಿಕ್ಕಾಗಲಿಲ್ಲ. ನಾನು ವಸತಿ ಇಲಾಖೆಯ ಮಂತ್ರಿಯಾಗಿದ್ದಾಗ ಪ್ರತಿಯೊಂದು ತಾಲ್ಲೂಕಿನಲ್ಲೂ ರಿವ್ಯೂ ಮಾಡಿದ್ದೇನೆ. ಆದರೆ ಜನತಾ ಮನೆಗಳ ಕ್ವಾಲಿಟಿಯ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ಬಡವರ ಬಗ್ಗೆ ಚಿಂತನೆ ಮಾಡಿ ಅವರ ಏಳಿಗೆಗೆ ಸೈಟುಗಳನ್ನು ಕೊಡತಕ್ಕದ್ದು, ಮನೆಗಳನ್ನು ಕಟ್ಟಿಸಿ ಕೊಡತಕ್ಕದ್ದು ಏನಾದರೂ ಆಗಿದ್ದರೆ ಅದು ದಿವಂಗತ ದೇವರಾಜ ಅರಸರ ಕಾಲದಲ್ಲಿ ಮಾತ್ರ. ಅನಂತರ ಆ ಕಾರ್ಯಕ್ರಮಗಳು ಆಗಲಿಲ್ಲ. ಬೇಕಾದರೆ ತಾವು ಪರಿಶೀಲಿಸಿ ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಜನತಾ ಮನೆಗಳನ್ನು ಕಟ್ಟಿಸಿಕೊಡತಕ್ಕ ಕಾರ್ಯಕ್ರಮ ಪ್ರಾರಂಭವಾದುದು ೧೯೭೨ರಲ್ಲಿ.........

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದನ್ನು ನಾವು ಮಾಡಿದೆವು, ಇದನ್ನು ನಾವು ಮಾಡಿದೆವು ಅಂತ ನೀವು ಹೇಳಿಕೊಳ್ಳುವುದಕ್ಕೆ ಹೋಗಬೇಡಿ. ಇಲ್ಲಿ ಮುಂದೆ ಕೂತಿದ್ದಾಗ ಏನು ಹೇಳಿದಿರಿ......

ಶ್ರೀ ಕಾಗೋಡು ತಿಮ್ಮಪ್ಪ.—ಮುಂದೆ ಕೂತರೂ ಒಂದೇ, ಹಿಂದೆ ಕೂತರೂ ಒಂದೇ ಮಾತನಾಡುತ್ತೇವೆ. ಜನತಾ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ದೇವರಾಜ ಅರಸ್‌ರವರ ಕಾಲದಿಂದ ಜಾರಿಗೆ ಬಂತು ನಾವು ಮತ್ತೆ ಅದನ್ನು ವಿಮರ್ಶೆಮಾಡಿ ಪ್ರತಿಯೊಂದು ತಾಲೂಕಿನಲ್ಲೂ ೧೦೦೦ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಮಾಡಿದ್ದೆವು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನೀವು ಮಾಡಿದಿರಿ ಅಷ್ಟೆ. ಆದರೆ ಅದು ಕಾರ್ಯಗತವಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಮಾಡಿದ್ದೇವೆ, ನೀವು ಸುಮ್ಮನೆ ಇರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ತಮಗೂ ಗೊತ್ತಿರಬಹುದು, ೨೦ ಅಂಶಗಳ ಕಾರ್ಯಕ್ರಮ. ಇದು ೧೯೭೨ರಲ್ಲಿ ಪ್ರಾರಂಭವಾದ ಮೇಲೆ ಶ್ರೀಮಾನ್ ಘೋರ್ಪಡೆಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ ಹಣವನ್ನು ಒದಗಿಸಿಕೊಟ್ಟು ಮಾಡಿದರು. ೧೯೭೭-೭೮ರಲ್ಲಿ ಇದನ್ನು ಮಾಡಲಿಕ್ಕೆ ಆಗಲಿಲ್ಲ. ೧೯೭೮ರಲ್ಲಿ ಪುನಃ ಪಾರ್ಲಿಮೆಂಟ್ ಎಲೆಕ್ಷನ್ ಬಂದಾಗ ಆಗ ನಾನು ರೂರಲ್ ಡೆವಲಪ್‌ಮೆಂಟ್ ಪಂಚಾಯತ್ ರಾಜ್ ಮಂತ್ರಿಯಾಗಿದ್ದ ಆಗ ಶ್ರೀ ದೇವರಾಜ ಅರಸ್‌ರವರು ಒಂದು ಲಕ್ಷ ಮನೆಗಳನ್ನು ಕಟ್ಟುವ ಸಲುವಾಗಿ ೧೬ ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿ, ಅದು ಒಂದು ಹಂತಕ್ಕೆ ಬಂದಿತು ಅದಾದನಂತರ ೧೯೮೦-೮೧ರಲ್ಲಿ ಮಾಡಲಿಕ್ಕೆ ಆಗಲಿಲ್ಲ. ಏತಕ್ಕೆಂದರೆ, ಬ್ಯಾಕ್‌ಲಾಗ್ ಬಿದ್ದುದರಿಂದ ಅವುಗಳನ್ನು ಭರ್ತಿ ಮಾಡಲಿಕ್ಕೆ ಆಗಲಿಲ್ಲ. ೧೯೮೩ನೇ ಇಸವಿಯಲ್ಲಿ ಎಲೆಕ್ಷನ್ ಬಂದಾಗ ಇನ್ನೊಂದು ಸೀರಿಯಲ್ ನಂಬರ್ ಬಂದಿತು. ಆಗ ಪುನಃ ೧೬ ಕೋಟಿ ರೂಪಾಯಿಗಳನ್ನು ಕೊಟ್ಟರು. ಅವಾಗ ಎಲ್ಲಾ ಕಡೆ ಒಂದೊಂದು ಸಾವಿರ ಮನೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿ ಫಸ್ಟ್ ಇನ್‌ಸ್ಟಾಲ್‌ಮೆಂಟನ್ನು ಇಷ್ಯೂ ಮಾಡಿದರು. ತದನಂತರ ನೀವು ಬಂದಿರಿ. ತಮಗೆ ಮಾಡಲಿಕ್ಕೆ ಆಗಲಿಲ್ಲ. ಕೊನೆಗೆ ಎಲೆಕ್ಷನ್ ಬಂತು, ಅವಾಗ ನೀವು ಮಾಡಿದಿರಿ.

ಶ್ರೀ ಕಾಗೋಡು ತಿಮ್ಮಪ್ಪ.—ಹೀಗೆ ಮಾಡಬೇಕಾದರೆ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಅದರಲ್ಲಿ ಒಂದು ತಾಲ್ಲೋಕಿನಲ್ಲಿ ಕನಿಷ್ಟ ೧೦೦ ಊರುಗಳಲ್ಲಿ ಈ ಕೆಲಸ ನಡೆಯಬೇಕೆಂದು ಆದೇಶ ಕೊಟ್ಟಿರಿ. ಅರ್ಧಭಾಗದ ಹಣ ಬಿಡುಗಡೆಯಾಯಿತು. ಅವಾಗ ಅದನ್ನೆ ಮುಂದುವರಿಸಿ ಮಾಡಿದ್ದರೆ ಪ್ರತಿವರ್ಷ ಒಂದು ಲಕ್ಷ ಮನೆಗಳನ್ನು ಕಟ್ಟಬಹುದಾಗಿತ್ತು, ಇನ್ನೊಂದು ಕೆಲಸ ಮಾಡಿದ್ದೀರಿ. ಹಿಂದುಳಿದಿರತಕ್ಕಂಥವರಿಗೆ ಅಲ್ಪಸಂಖ್ಯಾತರಾಗಿರತಕ್ಕಂಥವರಿಗೆ ವಿದ್ಯಾವಂತ ಯುವಕರಿಗೆ ಪ್ರತಿಯೊಂದು

ತಾಲ್ಲೂಕಿನಲ್ಲೂ ೫೦೦ ಜನರಿಗೆ ಸಬ್‌ಸಿಡಿ ರೂಪದಲ್ಲಿ ಹಣವನ್ನು ಕೊಟ್ಟು ಉದ್ಯೋಗಸ್ಥಾಪನೆ ಮಾಡತಕ್ಕಂಥ ಚೈತನ್ಯ ಕಾರ್ಯಕ್ರಮ ಮಾಡಿಕೊಟ್ಟಿದ್ದರು. ನೀವು ಅಧಿಕಾರಕ್ಕೆ ಬಂದಮೇಲೆ ಅದನ್ನು ಸಂಪೂರ್ಣವಾಗಿ ಮುಳುಗಿಸಿಬಿಟ್ಟಿರಿ. ಅವತ್ತು ಬಡವರಿಗೆ, ತರಕಾರಿ ಕೊಂಡು ವ್ಯಾಪಾರ ಮಾಡಿ ಜೀವನ ಮಾಡುವವರಿಗೆ, ವ್ಯಾಪಾರ ಮಾಡುವವರಿಗೆ, ಸಣ್ಣ ಅಂಗಡಿ ಇಟ್ಟುಕೊಳ್ಳುವವರಿಗೆ ಒಂದು ಕಾರ್ಯಕ್ರಮವನ್ನು ಮಾಡಿದ್ದೆವು. ಪ್ರತಿಯೊಂದು ಅರ್ಬನ್ ಸೆಂಟರ್‌ನಲ್ಲೂ ೨೦ರಿಂದ ೫೦ ಜನ ಬಡವರಿಗೆ ೫೦೦ ರೂಪಾಯಿಗಳಿಂದ ೧೦೦೦ ರೂಪಾಯಿಗಳವರೆಗೆ ಸಾಲ ಕೊಟ್ಟಿದ್ದೇವೆ. ಸಣ್ಣಪುಟ್ಟ ವ್ಯಾಪಾರ ಮಾಡಲು, ಮಿನಿ ವ್ಯಾಪಾರಸ್ಥರಿಗೆ ಸಹಾಯ ಮಾಡಬೇಕೆಂದು ೨೫ಭಾಗ ಸಬ್‌ಸಿಡಿ ಕೊಟ್ಟು ನಾವು ಮಾಡಿದೆವಲ್ಲ ನೀವು ಅಧಿಕಾರಕ್ಕೆ ಬಂದಮೇಲೆ ಅದನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟಿರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಅಧಿಕಾರದಲ್ಲಿದ್ದಾಗ ೨೫ ಸಾವಿರ ರೂಪಾಯಿಗಳನ್ನು ಕೊಡತಕ್ಕ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಒಟ್ಟು ೫ಸಾವಿರ ನಿರುದ್ಯೋಗಿಗಳಿಗೆ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಯಾವಾಗ ಮಾಡಿದ್ದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಅಧಿಕಾರದಲ್ಲಿದ್ದಾಗ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಮಾಡಿದ್ದಲ್ಲ. ಮಹಿಳೆಯರಿಗೋಸ್ಕರವಾಗಿ ಕೇಂದ್ರ ಸರ್ಕಾರ ಮಾಡಿದ್ದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಧ್ಯೆ ಮಧ್ಯೆ ಮಾನ್ಯ ಸದಸ್ಯರು ಈ ರೀತಿ ಹೇಳಿಕೊಂಡು ಹೋದರೆ ಆಗುವುದಿಲ್ಲ.

ಶ್ರೀ ಪಿ. ಜಿ! ಆರ್, ಸಿಂಧ್ಯ.—ಅವರು ಪ್ರತಿಸಲ ನಾವು ಏನೇನೂ ಮಾಡಲಿಲ್ಲವೆಂದು ಹೇಳುತ್ತಲೇ ಇದ್ದಾರೆ ಇದು ಸರಿಯಲ್ಲ, ಏತಕ್ಕೆಂದರೆ, ಕರ್ನಾಟಕದ ಜನ ಸದನದ ಪ್ರೊಸಿಡಿಂಗ್ಸ್‌ನ್ನು ಕೇಳುತ್ತಾರೆ. ಕರ್ನಾಟಕದ ಜನಕ್ಕೆ ನಾವು ಏನು ಮಾಡಿದೆವು ಎನ್ನುವುದನ್ನು ಹೇಳಬೇಕಾಗುತ್ತದೆ. ನೀವು ಹೇಳಿದ್ದೆಲ್ಲ ಕೇಳಿಕೊಂಡು ಬಾಯಿಮುಚ್ಚಿಕೊಂಡು ಕುಳಿತುಕೊಂಡಿರುವುದಕ್ಕಾಗುವುದಿಲ್ಲ. ನಿಮ್ಮನ್ನು ಯಾವ ರೀತಿ ಜನರು ಚುನಾವಣೆಯಲ್ಲಿ ಗೆಲ್ಲಿಸಿದ್ದಾರೋ ಅದೇ ರೀತಿ ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ನೀವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗದಿದ್ದರೆ ಎದ್ದುಹೋಗಿ ಎಂದು ಹೇಳುವುದಕ್ಕೆ ನೀವು ಯಾರು ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ನಿಮ್ಮನ್ನು ಎದ್ದುಹೋಗಿ ಎಂದು ಹೇಳಲಿಲ್ಲ.

ಶ್ರೀ ಹರ್ಷಕುಮಾರ್‌ಗೌಡ.—ಮನೆಗೆ ಒಂದು ಉದ್ಯೋಗ ಕೊಡುತ್ತೇವೆಂದು ಹೇಳಿ ಕರ್ನಾಟಕ ರಾಜ್ಯದ ಜನತೆಯಿಂದ ಓಟು ಹಾಕಿಸಿಕೊಂಡಿರುತ್ತೀರಿ.

ಶ್ರೀ ಆರ್. ವಿ. ದೇಶಪಾಂಡೆ.—ನಾವು ನೌಕರಿಯನ್ನು ಕೊಟ್ಟಿರಲಿಲ್ಲವೆಂದು ಹೇಳಬೇಡಿ. ವ್ಯವಸಾಯ ಇನ್ನೂ ಬೇಗ ಬೇರೆ ರೀತಿಯಲ್ಲಿ ಉದ್ಯೋಗವಕಾಶವನ್ನು ಕಲ್ಪಿಸಿರುತ್ತೇವೆ. ಪ್ರತಿ ತಿಂಗಳು ಒಂದು ಸಾವಿರ ಕೈಗಾರಿಕೆಗಳನ್ನು ಶುರು ಮಾಡಿದ್ದೇವೆ. ಸಾವಿರಾರು ಯುವಕರಿಗೆ ಉದ್ಯೋಗವಕಾಶವನ್ನು ಮಾಡಿಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಣಿಯವರೇ, ಬಡವರ ಕಲ್ಯಾಣ ಕಾರ್ಯಕ್ರಮದ ಬಗ್ಗೆ ನಾನು ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಇದ್ದಾಗ ಮಹಿಳೆಯರಿಗೋಸ್ಕರ ಗೃಹಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೆವು.

ಛೇರ್‌ಮನ್.—ನೀವು ಎಲ್ಲರೂ ಮಂತ್ರಿಗಳಾಗಿದ್ದವರು. ಇದು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಸಲ್ಲಿಸುವಾಗ ನೀವು ಆರೋಪ ಪ್ರತ್ಯಾರೋಪ ನಿಮ್ಮ ಪಾರ್ಟಿ ನಮ್ಮ ಪಾರ್ಟಿಯ ಸದಸ್ಯರು ಎಂದು ಹೇಳಿ ಮಧ್ಯೆ ಮಧ್ಯೆ ಇಂಟರ್‌ಪೆಷನ್ ಮಾಡುತ್ತಿದ್ದರೆ ಅವರು ಹೇಗೆ ಭಾಷಣವನ್ನು ಮುಗಿಸಲು ಸಾಧ್ಯವಾಗುತ್ತದೆ. ತಮಗೂ ಅವಕಾಶ ಸಿಗುತ್ತದೆ ಆವಾಗ ದಯವಿಟ್ಟು ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ ಮೀನು ಹಿಡಿಯುತಕ್ಕ ಜನರಿಗೆ......

(ಗೊಂದಲ)

ಶ್ರೀ ಪಿ. ಜಿ. ಆರ್, ಸಿಂಧ್ಯ..—ನಾವೇನು ಸ್ಪಷ್ಟೀಕರಣ ಕೇಳಲಿಲ್ಲ. ಮುಖ್ಯಮಂತ್ರಿಗಳದ್ದೋ, ಮಂತ್ರಿಗಳದ್ದೋ ಕೇಳುತ್ತೇವೆ. ಇವರಿಗೆ ಏತಕ್ಕೆ ನಾವು ಸ್ಪಷ್ಟೀಕರಣ ಕೇಳೋಣ ?

ಶ್ರೀ ಕಾಗೋಡು ತಿಮ್ಮಪ್ಪ.—ಮೀನು ಹಿಡಿಯುವ ಜನರಿಗೆ ನಾವು ಒಂದು ಯೋಜನೆಯನ್ನು ತಯಾರು ಮಾಡಿದ್ದೆವು. ನಮ್ಮ ಸರ್ಕಾರ ಹೋದ ಮೇಲೆ ಬೇರೆ ಸರ್ಕಾರ ಬಂತು. ಆ ಯೋಜನೆಯನ್ನು ಸಂಪೂರ್ಣವಾಗಿ ಅವರು ಕೈಬಿಟ್ಟರು. ಹರಿಜನರಿಗೆ, ಅಲ್ಪ ಸಂಖ್ಯಾತರಿಗೆ, ಹಿಂದುಳಿದವರಿಗೆ, ಮೀನು ಹಿಡಿಯುವವರಿಗೆಲ್ಲ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಮಾಡಿದ್ದರೆ ನಂತರ ಬಂದ ಸರ್ಕಾರ ಅದನ್ನು ಮುಂದುವರಿಸಿಕೊಂಡು ಹೋಗುವ ಬದಲಾಗಿ ಅವನ್ನೆಲ್ಲ ನಿಲ್ಲಿಸಿದ್ದರಿಂದ ಅನ್ಯಾಯವಾಗಿದ್ದು ಯಾರಿಗೆ ? ಬಡವರಿಗೆ. ಅನ್ಯಾಯವಾಗಿದ್ದು ಯಾರಿಗೆ ? ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ. ಆದುದರಿಂದ ಇವತ್ತು ೬-೭ ವರ್ಷಗಳ ಅವಧಿಯಲ್ಲಿ ಹಿಂದುಳಿದಿರತಕ್ಕ ಜನರಿಗೆ ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಸರ್ಕಾರ ಮಾಡಿದ ಕಾರ್ಯಕ್ರಮಗಳನ್ನು ಹಿಂದೆ ತಳ್ಳಿದ್ದರಿಂದ ಅನ್ಯಾಯವಾಗಿದೆ. ಜನತಾ ಸರ್ಕಾರದಲ್ಲಿ ಆದಂತಹ ಅನ್ಯಾಯವನ್ನು ಸರಿಪಡಿಸಿ ಬಡವರ ಕಾರ್ಯಕ್ರಮವನ್ನು ಪುನರ್ ರೂಪಿಸಿ. ಬಡವರು ಏನು ನಮ್ಮ ಸರ್ಕಾರದ ಮೇಲೆ ವಿಶ್ವಾಸ ಇಟ್ಟಿದ್ದಾರೆ ಆ ವಿಶ್ವಾಸವನ್ನು ಉಳಿಸಿಕೊಂಡು ಹೋಗುವ ದೃಷ್ಟಿಯಿಂದ ಬಡವರ ಕಲ್ಯಾಣ ಕಾರ್ಯಕ್ರಮಗಳನ್ನು ಮತ್ತೆ ಜಾರಿಗೆ ತರಬೇಕೆಂದು ಸರ್ಕಾರಕ್ಕೆ ಆಗ್ರಹಪಡಿಸುತ್ತಾ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ಕೃತಜ್ಞತೆಯನ್ನು ಸಲ್ಲಿಸಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಮ್ಮ ಸರ್ಕಾರ ಹಿಂದುಳಿದವರ ಪರವಾಗಿದೆ ಎಂದು ಎದೆ ಮೇಲೆ ಕೈಯಿಟ್ಟು ಹೇಳಿ.

SRI KAGODU THIMMAPPA.—What is that you are saying ? What is this ? You are a senior member.

ಛೇರ್ಮನ್.—ಈಗ ವಿರೋಧ ಪಕ್ಷದ ನಾಯಕರು ಇಲ್ಲದೆ ಇರುವುದರಿಂದ, ಮಾನ್ಯ ಸಿಂಧ್ಯರವರು ಮಾತನಾಡುವುದು.

ಶ್ರೀ ಹೆಚ್. ಏಕಾಂತಯ್ಯ.—ವಂದನಾ ನಿರ್ಣಯವನ್ನು ಕಾಗೋಡು ತಿಮ್ಮಪ್ಪನವರು ಪ್ರಸ್ತಾಪಿಸಿದ್ದಾರೆ ಅದನ್ನು ಮತ್ತೊಬ್ಬರು ಅನುಮೋದನೆ ಮಾಡಬೇಕು. ಅನುಮೋದನೆ ಮಾಡದ ಹೊರತು ಬೇರೆ ಸದಸ್ಯರು ಮಾತನಾಡುವ ಹಾಗೆ ಇಲ್ಲ. ಅನುಮೋದನೆ ಮಾಡದಿದ್ದರೆ ಅದು ಬಿದ್ದುಹೋಯಿತು ಎಂದು ತೀರ್ಮಾನ ಮಾಡಬೇಕಾಗುತ್ತದೆ.

ಛೇರ್ಮನ್.—ಅನುಮೋದನೆ ಮಾಡಬೇಕಾದ ಸದಸ್ಯರ ಮಗನಿಗೆ ಆಪರೇಷನ್......

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರ ಬದುಕಿದೆಯೋ ಸತ್ತಿದೆಯೋ ? ಅದಕ್ಕೆ ಬೇರೆ ವ್ಯವಸ್ಥೆ ಆಗಬೇಕು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ,—ಅಜೆಂಡಾ ಪ್ರಕಾರ..... ....

MADAM CHAIRMAN.—Motion has been seconded.

(ಗೊಂದಲ)

ಛೇರ್ಮನ್.—ಆಕೆಯ ಮಗನಿಗೆ ಆಪರೇಷನ್ ಆಗಿದೆಯೆಂದು ಸೈಂಟ್ ಫಿಲೋಮಿನಾ ಆಸ್ಪತ್ರೆಗೆ ಹೋಗುತ್ತೇನೆಂದು ಹೇಳಿ ಹೋಗಿದ್ದಾರೆ. ಅವರ ಬದಲಿಗೆ ಬೇರೆ ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಎಚ್. ಏಕಾಂತಯ್ಯ.—ಶ್ರೀಮತಿ ಚಂದ್ರಪ್ರಭ ಅರಸು ಅವರು ಏತಕ್ಕಿಲ್ಲ ಎಂಬುದು ಪ್ರಶ್ನೆಯಲ್ಲ. ವಂದನಾ ನಿರ್ಣಯವನ್ನು ಮಂಡಿಸಿ ಮಾತನಾಡಿದ ಮೇಲೆ ಅದನ್ನು ಅನುಮೋದನೆ ಮಾಡಬೇಕು. ಅನುಮೋದನೆ ಮಾಡುವವರು ಸದನದಲ್ಲಿ ಇಲ್ಲದಿದ್ದರೆ ಆ ಪ್ರಸ್ತಾವ ಬಿದ್ದು ಹೋಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, The Motion has been seconded. The Motion has been moved & it has been seconded. Don't misguide this House.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಮ್ಮ ಕಡೆ ಮಾತನಾಡುವವರಿದ್ದಾರೆ,

ಛೇರ್ಮನ್.—ನಿಯಮಾವಳಿ ಪ್ರಕಾರ ಅನುಮೋದನೆ ಮಾಡತಕ್ಕ ಸಂದರ್ಭದಲ್ಲಿ ಅನುಮೋದನೆ ಮಾಡಿದ್ದಾರೆ. ಅನುಮೋದನೆ ಮಾಡಿದ ನಂತರ ಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಬೇಕು ಎಂಬುದು.

ಸಂಪ್ರದಾಯ ಅಷ್ಟೆ. ಆದರೆ ಅವರು ಇರಲೇಬೇಕು ಎಂಬ ಪ್ರಾವಿಷನ್ ಇಲ್ಲ. ಆ ಕಾರಣದಿಂದ ಬೇರೆಯವರು ಮಾತನಾಡುವವರಿದ್ದರೆ ಮಾತನಾಡುತ್ತಾರೆ. ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಬೇಕಾಗಿತ್ತು.

ಶ್ರೀ ಡಿ. ಎ. ಚಿನ್ನಪ್ಪ.—ಅವರು ಮಾತನಾಡುವುದಕ್ಕೆ ಸಿದ್ಧರಾಗಿಲ್ಲ ಎಂದು ಕಾಣುತ್ತದೆ.

ಛೇರ್ಮನ್.—ಮಾನ್ಯ ಸಿಂಧ್ಯ ಅವರು ಪದೇ ಪದೇ ಇಂಟರಪ್ಟ್ ಮಾಡುತ್ತೀರಿ.

ಶ್ರೀ ಪಿ ಜಿ. ಆರ್. ಸಿಂಧ್ಯ.—ನಾನು ಮಾತನಾಡಲೇ ಇಲ್ಲ. ಲಿಸ್ಟ್ ಪ್ರಕಾರ ಯಾರ ಹೆಸರಿದೆ ಹೇಳಿ. ಲಿಸ್ಟ್‌ನಲ್ಲಿ ನನ್ನ ಹೆಸರಿದೆಯೆ ? ನನ್ನ ಹೆಸರಿಲ್ಲ,

ಛೇರ್ಮನ್.—ನಿಮ್ಮ ಕಡೆ ಯಾರು ಮಾತನಾಡುತ್ತಾರೆ ? ಮಾನ್ಯ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಇಲ್ಲ. ಯಡಿಯೂರಪ್ಪನವರನ್ನು ಕರೆಯಲೇ ? ಯಡಿಯೂರಪ್ಪ ನವರೇ, ತಾವು ಮಾತನಾಡಿ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ತಿರುಳಿಲ್ಲದಿದ್ದರೂ ಸಹ ಯಾವುದೇ ಹೊಸ ಕಾರ್ಯಕ್ರಮ ರಾಜ್ಯಪಾಲರ ಭಾಷಣದಲ್ಲಿ ಇಲ್ಲದಿದ್ದರೂ ಸಹ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಅರ್ಥಗರ್ಭಿತವಾಗಿ ಮುಂದೆ ಬರುವಂಥ ದಿವಸಗಳಲ್ಲಿ ಯಾವ ಕೆಲಸ ಆಗಬೇಕು ಎಂದು ಅವರ ಮನಸ್ಸಿನಲ್ಲಿದೆಯೋ ಆ ಕಾರ್ಯಕ್ರಮಗಳನ್ನು ಇನ್ನು ಮುಂದಾದರೂ ಸರ್ಕಾರ ಕಾರ್ಯರೂಪಕ್ಕೆ ತರಬೇಕೆಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅವರು ಅನೇಕ ಬಾರಿ ಅವರ ಭಾಷಣದ ಉದ್ದಕ್ಕೂ ಗ್ರಾಮೀಣ ಪ್ರದೇಶದ ಬಗ್ಗೆ, ರೈತರ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಕಳೆದ ಎರಡು ದಶಕಗಳಿಂದ ಯಾವುದೇ ಅಭಿವೃದ್ಧಿ ಹೊಂದದೆ ಎಲ್ಲಾ ಸ್ಥಗಿತವಾಗಿದೆ ಎಂಬ ಪ್ರಾಮಾಣಿಕ ಅಭಿಪ್ರಾಯವನ್ನು ಕೂಡ ಅವರು ಕೊಟ್ಟಿರು. ಗ್ರಾಮಾಂತರ ಪ್ರದೇಶದ ಜನರ ಪರಿಸ್ಥಿತಿ ಬಗ್ಗೆ ಪ್ರಾಮಾಣಿಕ ಅಭಿಪ್ರಾಯ ಕೊಟ್ಟ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಒಂದು ಹೊಸ ಕಾರ್ಯಕ್ರಮಗಳಿಲ್ಲ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಜನತ ದಳ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಏನು ಕಾರ್ಯಕ್ರಮ ಇತ್ತು, ಯಾವುದು ಯಾವುದನ್ನು ಕಾರ್ಯರೂಪಕ್ಕೆ ತಂದರು ಎಂಬ ಬಗ್ಗೆ ಚರ್ಚೆಯಾಯಿತೇ ವಿನಾ ಈ ಸರ್ಕಾರ ಬರುವ ವರ್ಷದಲ್ಲಿ ಇಂತಿಂಥ ಹೊಸ ಕಾರ್ಯಕ್ರಮವನ್ನು ಮಾಡುತ್ತದೆ ಎಂಬ ಯಾವುದೇ ಒಂದು ಶಬ್ದ ರಾಜ್ಯಪಾಲರ ಭಾಷಣದಲ್ಲಿ ಇಲ್ಲದಿರುವುದು ತುಂಬಾ ದುರದೃಷ್ಟಕರ. ಮಾನ್ಯ ಅಧ್ಯಕ್ಷರೆ ಗ್ರಾಮಾಂತರ ಪ್ರದೇಶದ ಜನರ ಸ್ಥಿತಿ ಏನಿದೆ ? ನಾವು ಈಗ ಮಾರ್ಚಿ ಕೊನೇ ಭಾಗದಲ್ಲಿದ್ದೇವೆ. ಎರಡು ದಿವಸ ರಜಾ ಸಿಕ್ಕಿದಾಗ ನಾವೆಲ್ಲರೂ ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗಿ ಬರುವ ಅವಕಾಶ ಸಿಕ್ಕಿತು. ಗ್ರಾಮಾಂತರ ಪ್ರದೇಶದಲ್ಲಿ ಮಾರ್ಚಿ ಕೊನೇ ಭಾಗದಲ್ಲಿ ಕುಡಿಯುವ ನೀರಿಲ್ಲದೆ ಜನ ಪರಿತಪಿಸುವುದನ್ನು ಕಾಣುತ್ತಿದ್ದೇವೆ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊಡುವುದಿರಲಿ ಇರುವಂಥ ಬೋರ್‌ವೆಲ್‌ಗಳನ್ನೇ ರಿಪೇರಿ ಮಾಡಿಸಿ ಕುಡಿಯುವ ನೀರು ಕೊಡುವುದಕ್ಕೆ ಸರ್ಕಾರ ಗಮನ ಕೊಡಲಿಕ್ಕೆ ಆಗದೇ ಇರುವ ಮಟ್ಟಕ್ಕೆ ಆರ್ಥಿಕ ದಿವಾಳಿತನ ಈ ಸರ್ಕಾರದಲ್ಲಿ ಕಾಣುತ್ತಿದ್ದೇವೆ.

೩–೪೦ ಪಿ.ಎಂ.

ಕುಡಿಯುವ ನೀರಿನ ಸಮಸ್ಯೆ ಈ ರೀತಿಯಾದರೆ ಗ್ರಾಮೀಣ ಪ್ರದೇಶದಲ್ಲಿ ಯಾವ ನಿಮಿಷದಲ್ಲಿ ವಿದ್ಯುತ್ ದೀಪ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಇದು ಗೊತ್ತಿಲ್ಲದೇ ಕತ್ತಲಲ್ಲಿ ನಮ್ಮ ರೈತರು ಕಾಲ ಕಳೆಯುವ ಒಂದು ವಿಚಿತ್ರ ವಾತಾವರಣವನ್ನು ನಾವು ನೋಡುತ್ತಿದ್ದೇವೆ. ಈಗ ಪರೀಕ್ಷೆ ಸಮಯ ಬೇರೆ. ಈ ಸಮಯದಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸರಿಯಾಗಿ ಅಭ್ಯಾಸ ಮಾಡುವುದಕ್ಕೆ ತಕ್ಕ ವಾತಾವರಣ ಇಲ್ಲದೇ ಇರುವ ವಿಚಿತ್ರ ವಾತಾವರಣವನ್ನು ನಾವು ಕಾಣುತ್ತಿದ್ದೇವೆ. ಮತ್ತೆ ರಾಜ್ಯಪಾಲರ ಭಾಷಣದಲ್ಲಿ

> " ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸುವುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ತರುವುದು ನನ್ನ ಸರ್ಕಾರದ ಪ್ರಮುಖ ಕಾರ್ಯಗಳಲ್ಲೊಂದು " " ಭ್ರಷ್ಟಾಚಾರ ಎಲ್ಲೆಡೆ ವ್ಯಾಪಿಸಿದೆ "

ಈ ಮಾತುಗಳನ್ನು ಹೇಳಿದ್ದಾರೆ. ಒಂದು ಮಾತನ್ನು ನಾನು ಮನನೊಂದು ಹೇಳುತ್ತೇನೆ. ನಮ್ಮ ರಾಜಕೀಯ ಅವ್ಯವಸ್ಥೆಯ ಕಾರಣ ಓಟು ಕೊಟ್ಟ ಜನರ ಹಿತವನ್ನು ಕಾಪಾಡುವುದಕ್ಕೆ ಆಗದೇ ಓಟು

ಪಡೆಯುವುದಕ್ಕೆ ನೋಟು ಕೊಟ್ಟ ದೊಡ್ಡ ದೊಡ್ಡ ಕಾರ್ಖಾನೆ ಮಾಲೀಕರನ್ನು ರಕ್ಷಣೆ ಮಾಡುವ ಪ್ರಯತ್ನದಿಂದಾಗಿ ಈ ಒಂದು ವಿಚಿತ್ರ ವಾತಾವರಣದಲ್ಲಿ ಗ್ರಾಮಾಂತರ ಜನರು ಜೀವನವನ್ನು ನಡೆಸುತ್ತಿರಬೇಕಾದರೆ ಎಲ್ಲ ಹೊರೆಯನ್ನೂ ಸರ್ಕಾರಿ ನೌಕರರ ಮೇಲೆ ಹೊರಿಸುವುದಕ್ಕೆ ಮಾಡುತ್ತಿದ್ದೀರಿ. ಇವತ್ತು ಭ್ರಷ್ಟಾಚಾರ ಎಂಬುದು ಎಲ್ಲೆಡೆ ವ್ಯಾಪಿಸಿದೆ. ಹಿಂದಿನ ಸರ್ಕಾರದಲ್ಲಿ ಭ್ರಷ್ಟಾಚಾರ, ಆರ್ಥಿಕ ದಿವಾಳಿತನ ತಾಂಡವವಾಡುತ್ತಿತ್ತು. ಅದನ್ನೆಲ್ಲಾ ಸರಿ ಮಾಡಬೇಕೆಂದು ಜನತೆ ಇವತ್ತು ಇಷ್ಟೊಂದು ಬಹುಮತವನ್ನು ಕೊಟ್ಟು ತಮ್ಮನ್ನು ಆಡಳಿತ ನಡೆಸಲು ಕಳುಹಿಸಿರುವುದು. ಈ ಒಂದು ಅಸ್ತ್ರವನ್ನು ಉಪಯೋಗಿಸಿ ವ್ಯಾಪಕ ಭ್ರಷ್ಟಾಚಾರ, ಆರ್ಥಿಕ ದಿವಾಳಿತನದ ಬಗ್ಗೆ ಗಮನ ಹರಿಸಿ ಸುಧಾರಣೆಯನ್ನು ತರುವ ಜನಪರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಏನೂ ಕಾಣಿಸುತ್ತಿಲ್ಲ. ಈ ಭಾಷಣದಲ್ಲಿ ಈ ವಿಷಯವನ್ನು ಹೇಳುವ ಅಗತ್ಯ ಇಲ್ಲ. ಇವತ್ತು ಎಲ್ಲ ಅಧಿಕಾರಿಗಳೂ ಭ್ರಷ್ಟರಲ್ಲ. ಯಾರು ಭ್ರಷ್ಟರು ಎಂದು ತಮಗೆ ಅನಿಸುತ್ತದೋ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆಯಾದ್ದರಿಂದ ಆ ಪ್ರಕಾರ ಸರಿಪಡಿಸುವುದಕ್ಕೆ ತಾವು ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೇ ವಿನಃ ಈ ಭಾಷಣದಲ್ಲಿ ಇವತ್ತು ರಾಜ್ಯದಲ್ಲಿರುವ ಸರ್ಕಾರಿ ನೌಕರರ ನೈತಿಕ ಸ್ಥೈರ್ಯವನ್ನು ಹದಗೆಡಿಸುವ ಮಾತನ್ನು ಹೇಳಬಾರದಾಗಿತ್ತು. ಅದರ ಬದಲು ಇದನ್ನು ಸರಿಪಡಿಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಬೇಕಾಗಿತ್ತು. ಭ್ರಷ್ಟಾಚಾರ ತೆಗೆದುಹಾಕುವುದಕ್ಕೆ ಮತ್ತು ಒಳ್ಳೆಯ ಆಡಳಿತ ಕೊಡುವುದಕ್ಕೆ ಹೊಸ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದೀರಿ. ಇವತ್ತು ಹಿಂದಿನ ಸರ್ಕಾರ ಯಾವ ರೀತಿ ಅಧಿಕಾರ ಕಳೆದುಕೊಂಡಿತು ಎಂಬುದನ್ನು ನೋಡಬೇಕು. ಇವತ್ತು ಯಾರು ಈ ಶಾಸನ ಸಭೆಗೆ ಚುನಾಯಿತರಾಗಿ ಬಂದಿರುತ್ತಾರೆ ಅವರು ಏನು ಸಲಹೆ ಕೊಡುತ್ತಾರೆ ಅದು ಮಹತ್ವದಿಂದ ಕೂಡಿರುವುದಿಲ್ಲವೆ ? ಗೆದ್ದು ಬಂದ ಶಾಸಕರ ಸಲಹೆಗಳಿಗೆ ಮನ್ನಣೆ ಕೊಡದೇ ಲಿಂಕ್ ಬ್ಯಾಂಕ್ ಎಂದು ಮಾಡಿ ಅದರ ಸಲಹೆಗಳಿಗೆ ಗಮನಕೊಟ್ಟು ಆಡಳಿತ ನಡೆಸಿದ ಸರ್ಕಾರದ ಗತಿ ಏನಾಯಿತು ಎಂದು ತಮಗೆಲ್ಲರಿಗೂ ತಿಳಿದೇ ಇದೆ. ಇವತ್ತು ರಾಜ್ಯಪಾಲರ ಬಾಯಲ್ಲಿ ಈ ರೀತಿ ಹೇಳಿಸಿದ್ದೀರಿ.

> "ಭ್ರಷ್ಟಾಚಾರವು ಎಲ್ಲೆಡೆ ವ್ಯಾಪಿಸಿದೆ. ಜಟಿಲವಾದ ಕಾರ್ಯವಿಧಾನ ಮತ್ತು ನಿಯಮಗಳು ಸುಲಭವಾಗಿ ತಪ್ಪಿಸಬಹುದಾದ ವಿಳಂಬಗಳು ಉಂಟಾಗಲು ಬಹುಪಾಲು ಕಾರಣವಾಗಿದೆ. ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಕಾರ್ಯಗಳು ದಕ್ಷ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ದಕ್ಷತಾ ಪರಿಶೋಧನೆ ಮತ್ತು ಜಾಗೃತ ಮಂಡಲಿಯನ್ನು ರಚಿಸುವುದು"

ಏನು ಸ್ವಾಮಿ ಇದು ? ಯಾರು ಇರುತ್ತಾರೆ ಈ ಮಂಡಳಿಯಲ್ಲಿ ? ಇದರಲ್ಲಿ ಶಾಸಕರು ಇರುತ್ತಾರೆಯೋ ? ಈ ದೇಶದ ಅಭಿವೃದ್ಧಿಗೋಸ್ಕರ ಚಿಂತನೆ ಮಾಡುವ ಚಿಂತಕರು ಇದರಲ್ಲಿ ಇರುತ್ತಾರಾ ? ಈ ಒಂದು ಮಂಡಲಿಯಿಂದ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಸಾಧ್ಯವಿದೆಯೋ ? ಇನ್ನು ಎರಡನೆಯದಾಗಿ......

ಮಾನ್ಯ ಸದಸ್ಯರೊಬ್ಬರು.—ಯಡಿಯೂರಪ್ಪನವರೇ, ನೀವು ಮಾತನಾಡತಕ್ಕ ಸಂದರ್ಭದಲ್ಲಿ ಪ್ರಚೋದನೆಗೋಸ್ಕರ ಮಾತನಾಡುತ್ತೀರೋ ಅಥವಾ ನಿಜಸ್ಥಿತಿಯನ್ನು ಪರಿಶೀಲನೆ ಮಾಡಿ ಮಾತನಾಡುತ್ತೀರೋ ಅಥವಾ ರಾಜ್ಯಪಾಲರ ಭಾಷಣದಲ್ಲಿ ಇರತಕ್ಕ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೋಸ್ಕರ ಈ ಭಾಷಣವನ್ನು ಮಾಡುತ್ತೀರೋ ? ಇಲ್ಲಿ ಪ್ರಚೋದನೆ ಮಾಡಿ ಅಧಿಕಾರಿಗಳು ಮತ್ತು ಸರ್ಕಾರವನ್ನು ಬೇರೆ ಬೇರೆ ಮಾಡುವುದಕ್ಕೋಸ್ಕರ ಮಾತನಾಡುತ್ತಿದ್ದೀರಾ ? ರಾಜ್ಯಪಾಲರ ಭಾಷಣದಲ್ಲಿ ಈ ರೀತಿಯ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಇರುವುದರಿಂದ ಅದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆಯೋ ವಿನಃ ಅಧಿಕಾರಿಗಳು ಹಾಗಿದ್ದಾರೆ, ಹೀಗಿದ್ದಾರೆ ಎಂದು ಹೇಳಿಲ್ಲ. ನಾನು ಬಹಳ ದಿವಸಗಳಿಂದ ನಿಮ್ಮ ಭಾಷಣ ಕೇಳುತ್ತಿದ್ದೇನೆ. ನಿಮ್ಮ ಭಾಷಣ ಯಾವಾಗ ನೋಡಿದರೂ ಕೂಡಾ ಸರ್ಕಾರ ಹಾಗೂ ರೈತರ ಮಧ್ಯೆ, ಸರ್ಕಾರ ಹಾಗೂ ಅಧಿಕಾರಿಗಳ ಮಧ್ಯೆ ತಂದುಹಾಕಬೇಕೆನ್ನುವ ರೀತಿಯಲ್ಲಿ ಇರುತ್ತದೆ, ದಯವಿಟ್ಟು ನಿಮ್ಮ ಧಾಟಿಯನ್ನು ಬದಲಾವಣೆ ಮಾಡಿಕೊಂಡರೆ ಒಳ್ಳೆಯದೆಂದು ನನ್ನ ಭಾವನೆ.

ಮಾನ್ಯ ಅಧ್ಯಕ್ಷಿಣಿಯವರೆ, ನನ್ನನ್ನು ಈ ಸ್ಥಳಕ್ಕೆ, ವಿರೋಧಪಕ್ಷಕ್ಕೆ ಜನ ಆರಿಸಿ ಕಳುಹಿಸಿರುವುದು ಆಡಳಿತ ಪಕ್ಷ ಮಾಡುವಂತಹ ಒಳ್ಳೆಯ ಕೆಲಸಗಳನ್ನು ಶ್ಲಾಘನೆ ಮಾಡುವುದು ದೊಡ್ಡ ಕೆಲಸವಲ್ಲ. ಈ ಪ್ರಜಾಪ್ರಭುತ್ವವ್ಯವಸ್ಥೆಯಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಆಡಳಿತ ಪಕ್ಷಕ್ಕಿಂತ ತುಂಬಾ ಮಹತ್ವವಾದ ಜವಾಬ್ದಾರಿ ವಿರೋಧಪಕ್ಷದ ಮೇಲೆ ಇದೆ. ವಿರೋಧಪಕ್ಷದಲ್ಲಿ ಕುಳಿತಿರುವಂತಹ ಜನ ಸರ್ಕಾರಕ್ಕೆ ಚುಚ್ಚು ಮಾತುಗಳನ್ನು ಆಡುವುದರ ಮೂಲಕ ಸಿಟ್ಟು ಅವರಿಗೆ ಬರುವ ಎಚ್ಚರಿಕೆ

ಒಳ್ಳೆಯ ಆಡಳಿತ ನಡೆಸಿಕೊಂಡು ಹೋಗಲಿ ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಇಲ್ಲಿ ನಿಂತುಕೊಂಡು ಏನು ಮಾತನಾಡಬೇಕೆಂದು ನನಗೆ ಚೆನ್ನಾಗಿ ಗೊತ್ತಿದೆ. ನನ್ನ ಪಾರ್ಟಿಯಲ್ಲಿ, ನನ್ನ ಮನಸ್ಸಿನಲ್ಲಿ ಮುಂದಿನ ಜನತೆಯ ಅಭಿವೃದ್ಧಿ ದೃಷ್ಟಿಯಿಂದ ಹೇಳಬೇಕೆಂದು ನನಗನ್ನಿಸುತ್ತದೆ. ಆ ವಿಚಾರಗಳನ್ನು ಹೇಳುವ ಪ್ರಯತ್ನ ಮಾಡುತ್ತಿದ್ದೇನೆಯೇ ಹೊರತು ಸರ್ಕಾರದ ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ದೊಡ್ಡ ಭಿನ್ನಾಭಿಪ್ರಾಯ ತಂದು ಕೆಟ್ಟ ವಾತಾವರಣ ತರುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಯಾವ ಸರ್ಕಾರಿ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆಯೆಂದು ಅವರು ಹೇಳುತ್ತಿದ್ದಾರೆ. ಹಿಂದೆ ಮಾಡಿರುವಂತಹ ಅನೇಕ ಭ್ರಷ್ಟಾಚಾರದ ಪ್ರಕರಣಗಳ ಬಗ್ಗೆ ನಾನು ಅವರ ಪರವಾಗಿ ವಕಾಲತ್ತು ಮಾಡುತ್ತಿಲ್ಲ. ನಾನು ಹೇಳುವುದು ಏನೆಂದರೆ, ಈಗ ಅಧಿಕಾರಕ್ಕೆ ಬಂದಿರುವ ಸರ್ಕಾರ ಹೇಳಿರುವಂತಹ ಭ್ರಷ್ಟಾಚಾರದ ವೈಫಲ್ಯತೆಗಳು, ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದರು ಅದನ್ನು ಸರಿಪಡಿಸುವ ಬಹುಮತ ತಮ್ಮಲ್ಲಿದ್ದಾಗ ಅದನ್ನು ರಾಜ್ಯಪಾಲರ ಭಾಷಣದಲ್ಲಿ ತರುವ ಅಗತ್ಯವಿಲ್ಲ. ಈ ರೀತಿ ಹೇಳಿ ಅವರ ನೈತಿಕ ಸ್ಥೈರ್ಯವನ್ನು ಕೆಡಿಸುವುದು ಸರಿಯಲ್ಲ. ಅದನ್ನು ಬಿಗಿ ಮಾಡುವಂತಹ...

ಶ್ರೀ ಟಿ. ಎಂ. ಮಂಜುನಾಥ್.—ಭ್ರಷ್ಟಾಚಾರ ಹೋಗಬೇಕೆನ್ನುವ ತಮ್ಮ ಅಭಿಪ್ರಾಯಕ್ಕೆ ಯಾರಾದರೂ ಬೆಂಬಲ ಕೊಡಲೇಬೇಕು. ಈಗ ತಮ್ಮಲ್ಲಿ ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ತಾವು ಯಾರ ಮೇಲೆ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದೀರಿ ಈಗ ಅವರಿಗೆ ಓಟು ಕೊಟ್ಟು ಬಂದಿದ್ದೀರಿ. ಅದಕ್ಕೆ ಉತ್ತರವನ್ನು ನೀವೇ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಮಂಜುನಾಥ್‌ರವರು ಹಿರಿಯ ಸದಸ್ಯರು ಈ ರೀತಿ ಮಾತನಾಡುತ್ತಾರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ, ನಾನೆಂದೂ ಆ ಭಾಗದಲ್ಲಿ ಅಧಿಕಾರದಲ್ಲಿರತಕ್ಕವರೆಲ್ಲ ಭ್ರಷ್ಟಾಚಾರಿಗಳು, ಈ ಕಡೆಯುವರೆಲ್ಲ ಭ್ರಷ್ಟಾಚಾರಿಗಳು ನಾವು ಮಾತ್ರ ಸಾಚ ಎಂದು ಹೇಳುತ್ತಿಲ್ಲ. ಜನ ಹೇಳುತ್ತಿದ್ದಾರೆ, ೧೯೮೩ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಆಡಳಿತ ವೈಖರಿಗೆ ಜನ ಬೇಸತ್ತು ರಾಜ್ಯದಲ್ಲಿ ಒಂದು ಬದಲಾವಣೆಯನ್ನು ತಂದಾಗ, ಅದನ್ನು ಅರ್ಥಮಾಡಿಕೊಂಡು ಒಳ್ಳೆಯ ಆಡಳಿತವನ್ನು ಕೊಡುವಂತಹ ಕೆಲಸ ಪ್ರಾರಂಭವಾಯಿತು. ಕೊನೆಯವರೆಗೆ ಅದೇ ಪ್ರಯತ್ನ ಮುಂದುವರೆಸಿದ್ದರೆ ನೀವು ಅಲ್ಲಿ ಕುಳಿತುಕೊಳ್ಳುವ ಪ್ರಶ್ನೆ ಬರುತ್ತಿರಲಿಲ್ಲ. ಈ ಜನ ಹೇಳುತ್ತಾರೆ; ನಮ್ಮ ತಪ್ಪಿನಿಂದ ನೀವು ಅಧಿಕಾರಕ್ಕೆ ಬಂದಿದ್ದೀರಿ ಅದನ್ನು ಸರಿಪಡಿಸಿ ಒಳ್ಳೆಯ ಆಡಳಿತ ನಡೆಸಿ ಎಂದು ಕೇಳುವ ಸಂದರ್ಭದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದಲೂ ಎಂದೂ ಸಿಗದ ಬಹುಮತ ಸಿಕ್ಕಿರುವ ನಿಮಗೆ, ಸರ್ಕಾರ ರಚನೆ ಮಾಡಿ ೪ ತಿಂಗಳು ಆದರೂ ಮಂತ್ರಿಮಂಡಲ ವಿಸ್ತರಣೆಯಾಗದೇ ಇರುವಂತಹ ರಾಜಕೀಯ ಅಸ್ಥಿರತೆ ನಿಮ್ಮಲ್ಲಿ ತಾಂಡವವಾಡುತ್ತಿರುವುದಕ್ಕೆ ನನಗೆ ಅದರ ಬಗ್ಗೆ ದುಃಖವಾಗಿದೆ.

ಶ್ರೀ ಡಿ.ಎ. ಚಿನ್ನಪ್ಪ.—೧೯೮೩ ರಿಂದ ೧೯೮೫ ರವರೆಗೆ ನೀವು ಸಹಕಾರ ಕೊಟ್ಟಿದ್ದೀರಿ. ೧೯೮೫ರ ಮೇಲೆ ನೀವು ಅವರ ಜೊತೆ ಇರಲಿಲ್ಲ, ಅದಕ್ಕೋಸ್ಕರ ಅವರು ಸೋಲುವ ಪ್ರಸಂಗ ಬಂತು.

ಶ್ರೀ ಕಾಗೋಡು ತಿಮ್ಮಪ್ಪ.—ರಾಜ್ಯಪಾಲರ ಭಾಷಣದಲ್ಲಿ ಒಂದು ವಾಕ್ಯವನ್ನು ಈ ರೀತಿ ಹೇಳಿದ್ದಾರೆ. ''ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸುವುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ತರುವುದು ನನ್ನ ಸರ್ಕಾರದ ಪ್ರಮುಖ ಕಾರ್ಯಗಳಲ್ಲೊಂದು.'' ಅದನ್ನು ಕಾರ್ಯರೂಪಕ್ಕೆ ತರುವಂತಹ ಕೆಲವು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಈಗ ಇರತಕ್ಕ ಕೆಲವು ನ್ಯೂನತೆಗಳಿಂದ ಆಡಳಿತದಲ್ಲಿ ವಿಳಂಬವಾಗಿದೆ. ಇನ್ನು ಜನರಿಗೆ ಹತ್ತಿರವಾಗಲಿಕ್ಕೆ ಪ್ರಯತ್ನಿಸಬೇಕು ಈಗ ದೂರವಾಗಿದೆ ಅದನ್ನು ಸರಿಪಡಿಸಬೇಕೆನ್ನುವ ಉದ್ದೇಶದಿಂದ ಈ ಮಾತನ್ನು ಹೇಳಿದ್ದಾರೆ. ಅದಕ್ಕೆ ಕೆಲವು ಸುಧಾರಣೆಗಳನ್ನು ಅವರೇ ಸೂಚಿಸುತ್ತಾರೆ. ಆ ದೃಷ್ಟಿಯಿಂದ ಆಗಬೇಕೋ ಬೇಡವೊ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷಿಣಿಯವರೆ, ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೆ ಅಂದರೆ, ಇವತ್ತಿನ ದಿವಸ ಆಡಳಿತ ಸುಧಾರಣೆಯಾಗಬೇಕಾದರೆ ಯಾವುದೋ ಸಮಿತಿಗಳನ್ನು ಮಾಡುವುದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ, ಭ್ರಷ್ಟಾಚಾರ ನೀಗುವುದಿಲ್ಲ. ಭ್ರಷ್ಟಾಚಾರ ಕಂಡುಬಂದಾಗ ಅದನ್ನು ಕಟ್ಟುನಿಟ್ಟಾಗಿ ತೊಡೆದು ಹಾಕುವಂತಹ ಪ್ರಕರಣಗಳನ್ನು ತಡೆಯುವಂತಹ ಕೆಲಸವನ್ನು ಮಾಡಿದಾಗ ಈ ಸಮಸ್ಯೆಗಳು ಬಗೆಹರಿಯುತ್ತವೆಯೇ ವಿನಹ ಈ ರೀತಿ ಸಮಿತಿಗಳನ್ನು ಮಾಡುವುದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಇದು ಅನುಭವಕ್ಕೆ ಬಂದಂತಹ ಪಾಠ. ಎರಡನೆಯದಾಗಿ ''ಆಡಳಿತವನ್ನು ಹೆಚ್ಚು ದಕ್ಷತೆ, ಹೊಣೆಗಾರಿಕೆ, ಸ್ಪಂದನೀಯ ಮತ್ತು ಸೌಜನ್ಯಯುತ

ಯಂತ್ರವನ್ನಾಗಿ ಮಾಡುವ ಉದ್ದೇಶದಿಂದ, ಕಾರ್ಯವಿಧಾನವನ್ನು ಮರು ವಿನ್ಯಾಸಗೊಳಿಸಲು, ಪದ್ಧತಿ ಮತ್ತು ಮಾನವ ಶಕ್ತಿ ಯೋಜನೆಯನ್ನು ಪುನರ್ ರೂಪಿಸಲು, ಅನುಭವಶೀಲ ಸರ್ಕಾರಿ ನೌಕರರು ಮತ್ತು ಪ್ರವೀಣ ವ್ಯವಸ್ಥಾಪನಾ ತಜ್ಞರನ್ನೊಳಗೊಂಡ ಪದ್ಧತಿ ಪರಿಶೋಧನಾ ಸಂಸ್ಥೆಯನ್ನು ಸ್ಥಾಪಿಸುವುದು.'' ಎಂದು ಇದೆ. ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ. ಮೂರನೆಯದಾಗಿ, ''ಉನ್ನತ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಹಂತಗಳ ಅಧಿಕಾರಿಗಳ ಕಾರ್ಯಸಾಮರ್ಥ್ಯವನ್ನು ಪರಿಶೀಲಿಸಲು ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪರಿಶೀಲನಾ ಸಮಿತಿಯೊಂದನ್ನು ರಚಿಸಲಾಗುತ್ತಿದೆ. ಈ ಪರಿಶೀಲನೆಯಿಂದ ಸರ್ಕಾರಿ ಸೇವೆಯಲ್ಲಿ ಅಂಥ ಅಧಿಕಾರಿಗಳ ಸೇವೆಯನ್ನು ಮುಂದುವರಿಸುವುದರ ಬಗ್ಗೆ ತೀರ್ಮಾನಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ.''

ನಾನು ಏನು ವಿರೋಧ ಮಾಡುತ್ತಿದ್ದೇನೆ ಎಂದರೆ, ಈ ರೀತಿ ಒಂದು ಚುನಾಯಿತ ಸರ್ಕಾರ ಇರುವಂಥ ಸಂದರ್ಭದಲ್ಲಿ, ಯಾವಾಗ ರಾಜ್ಯಪಾಲರು ಆಡಳಿತ ನಡೆಸಿದ ಸಂದರ್ಭದಲ್ಲಿ ಸಂಪೂರ್ಣವಾಗಿ ಒಂದು ಹಿಡಿಯಷ್ಟು ಅಧಿಕಾರಿಗಳು ಇಡೀ ಸರ್ಕಾರವನ್ನು ತಮ್ಮ ಇಚ್ಛೆಯಂತೆ ನಡೆಸುವ ಅವಕಾಶ ಸಿಕ್ಕಾಗ ರಾಜ್ಯಪಾಲರು ಎಲ್ಲದರಲ್ಲೂ ವಿಫಲತೆಯನ್ನು ಹೊಂದಿದರು. ಹೀಗಿರುವಾಗ ಅಧಿಕಾರ ಇರುವಂಥ ಸರ್ಕಾರ ತನ್ನ ಚುನಾಯಿತ ಪ್ರತಿನಿಧಿಗಳ ಸಹಕಾರದಿಂದ, ವಿರೋಧ ಪಕ್ಷದ ಶಾಸಕರ ಸಲಹೆಯಿಂದ, ಈ ಮೂಲಕವಾಗಿ ಇದನ್ನು ಬಿಗಿಗೊಳಿಸುವ ಮೂಲಕ ಪ್ರಯತ್ನ ಮಾಡಬೇಕೇ ಹೊರತು ಯಾವುದೇ ಸಮಿತಿಗಳನ್ನು ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈ ರೀತಿ ಸಮಿತಿಗಳನ್ನು ಮಾಡಿ ಒಳ್ಳೆಯ ಆಡಳಿತವನ್ನು ಕೊಡುತ್ತೇವೆ ಎಂದು ಕನಸು ಕಾಣುವುದಿದ್ದರೆ ಆ ಕನಸು ನನಸಾಗುವುದಿಲ್ಲ. ಈರೀತಿ ವ್ಯರ್ಥ ಪ್ರಯತ್ನ ಮಾಡದೆ ಸಿಕ್ಕ ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ಜನಪರ ಕಾರ್ಯಕ್ರಮಗಳನ್ನು ಕೊಡುವುದರ ಮೂಲಕ ನೀವು ಕಾರ್ಯಪ್ರವೃತ್ತರಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯದು ಇವತ್ತು ಕುಡಿಯುವುದಕ್ಕೆ ನೀರಿಲ್ಲ, ಜನ ಕತ್ತಲಲ್ಲಿ ಸಾಯುತ್ತಿದ್ದಾರೆ ಎಂದು ನಾನು ಹೇಳಿದೆ ಸರಿಯಾದ ವಿದ್ಯುಚ್ಛಕ್ತಿ ಕೊಡುವ ವ್ಯವಸ್ಥೆಯಾಗುತ್ತಿಲ್ಲ; ನಿರುದ್ಯೋಗದ ಸಮಸ್ಯೆ ಇದೆ ಎಂದು ನಾನು ಹೇಳುತ್ತಿದ್ದೆ. ಇವತ್ತು ಇರುವಂಥ ಹಣಕಾಸಿನ ಪರಿಸ್ಥಿತಿಯಲ್ಲಿ ಹೊಸದಾಗಿ ಕ್ರಾಂತಿ ಮಾಡುವುದಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ದಿಸೆಯಲ್ಲಿ ಇರುವಂಥ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಂಡು ಏನೊಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಯೋಚಿಸುತ್ತಿರಬೇಕಾದರೆ, ಎಷ್ಟರಮಟ್ಟಿಗೆ ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ಇವರು ಸಹಕಾರ ಕೊಡುತ್ತಾರೆಂದು ನನಗೆ ಅನುಮಾನ ಇದೆ. ಅನುಮಾನ ಏಕೆ ? ಅನುಮಾನ ಏಕೆ ಎಂದರೆ, ನಿಮ್ಮ ಸರ್ಕಾರದ ಒಳ ವ್ಯವಸ್ಥೆ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತೆಗೆದುಕೊಂಡಂಥ ತೀರ್ಮಾನಗಳ ಬಗ್ಗೆ ಭಿನ್ನಾಭಿಪ್ರಾಯದ ವಾತಾವರಣ ಮೂಡಿದೆ. ಸುಮ್ಮನೆ ಕುಳಿತುಕೊಂಡಿದ್ದಾರೆ. ಯಾರಾದರೂ ಮಂತ್ರಿಗಳಾಗಬಹುದು ಎನ್ನುವ ಕಾರಣಕ್ಕೋಸ್ಕರ ಇವತ್ತು ಶಾಂತವಾದ ವಾತಾವರಣವನ್ನು ಕಾಣುತ್ತಿದ್ದೇವೆಯೋ ವಿನಹ ನಿಜವಾಗಿಯೂ ಸಹ ಈ ರೀತಿ ಒಮ್ಮತದ ಅಭಿಪ್ರಾಯ ನಿಮ್ಮಲ್ಲಿ ಇದ್ದಿದ್ದರೆ ಮಂತ್ರಿಮಂಡಲ ವಿಸ್ತರಣೆಯಾಗದೇ ಇರುವಷ್ಟು ವಾತಾವರಣ ಮೂಡುತ್ತಿರಲಿಲ್ಲ. ಇದಕ್ಕೆ ಒಂದೇ ಒಂದು ಪರಿಹಾರವನ್ನು ಸೂಚಿಸಿ ನಾನು ಪ್ರಾಮಾಣಿಕವಾಗಿ ಹೇಳುವುದು ಏನೆಂದರೆ, ಈಗಾಗಲೇ ಸ್ವಾತಂತ್ರ್ಯ ಬಂದು ೪೩ ವರ್ಷಗಳಲ್ಲಿ ಅನೇಕ ಸಾರಿ ಹಿರಿಯ ಸ್ಥಾನಗಳನ್ನು ಹೊಂದಿದಂಥವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ; ಮಂತ್ರಿಗಳಾಗಿ, ಎಂ. ಪಿ.ಗಳಾಗಿ, ಕೇಂದ್ರದಲ್ಲಿ ಮಂತ್ರಿಗಳಾಗಿ ಅನೇಕ ಸ್ಥಾನಮಾನಗಳನ್ನು ಹೊಂದಿದ್ದವರು ಇಲ್ಲಿ ಬಂದ ಮೇಲೆ. ಮೂರು–ನಾಲ್ಕು ತಿಂಗಳ ಒಳಗೆ ಅನೇಕ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ, ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಈರೀತಿ ಅನುಭವ ಇರುವವರು ಇರುವಾಗ ಮಂತ್ರಿಮಂಡಲದ ವಿಸ್ತರಣೆಯು ಒಂದು ದಿವಸ ತಡವಾದರೂ ಸಹ ರಾಜ್ಯದ ಹಿತಕ್ಕೆ ಎಷ್ಟು ಧಕ್ಕೆ ಬರುತ್ತದೆ ಎನ್ನುವ ಕಾರಣಕ್ಕೋಸ್ಕರ ನಾನು ಈ ಮಾತನ್ನು ಹೇಳಿದೆ, ಯಾರಿಗೆ ನಿಜವಾಗಿಯೂ ಗ್ರಾಮೀಣ ಜನತೆಯ ಅಭಿವೃದ್ಧಿ ಬಗ್ಗೆ ಕಳಕಳಿ ಇದೆಯೋ, ಅಂತಹವರು ಮುಂದಿನ ಸಾಲಿನಲ್ಲಿ ಬಂದು ಕುಳಿತು ಜನಪರ ಕಾರ್ಯಕ್ರಮಗಳನ್ನು ರೂಪಿಸಿ. ಏನು ಭ್ರಷ್ಟಾಚಾರ ವ್ಯಾಪಕವಾಗಿ ತಾಂಡವವಾಡುತ್ತಿದೆ, ಆರ್ಥಿಕ ದಿವಾಳಿಯಾಗಿ ಜನ ಕಂಗಾಲಾಗಿದ್ದಾರೆ, ಇದನ್ನು ಸುಧಾರಣೆ ಮಾಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸರ್ಕಾರಿ ನೌಕರರ ಸೇವಾ ನಿವೃತ್ತಿ ವಯಸ್ಸನ್ನು ಈಗಿರುವ ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸಬೇಕೆಂದು ಕೋರಿ ಅನೇಕ ಮನವಿಗಳು ಬರುತ್ತಿವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಸರ್ಕಾರಿ ನೌಕರರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿ ಒಂದು ತೂಗು

ಶಕ್ತಿಯನ್ನು ಅವರ ತಲೆಯ ಮೇಲೆ ಇಡುವಂಥ ಪ್ರವೃತ್ತಿ ಇದು. ನಿಮಗೆ ನಿಜವಾಗಿಯೂ ತಾಕತ್ತು ಇದ್ದರೆ, ಧೈರ್ಯ ಇದ್ದರೆ, ಹೇಳುವಂಥ ಮಾತಿನಲ್ಲಿ ನಂಬಿಕೆ ಇದ್ದರೆ ರಾಜ್ಯಪಾಲರ ಭಾಷಣದಲ್ಲಿ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ 'ಇಳಿಸಿದ್ದೇವೆ' ಎಂದು ಹೇಳಬೇಕಿತ್ತು. ಇದನ್ನು ನಾವು ಸ್ವಾಗತ ಮಾಡುತ್ತಿದ್ದೆವು ಆದರೆ ನಾನು ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ಇವರು ಏನು ಮಾಡುತ್ತಾರೆಯೋ, ಅದನ್ನು ನೋಡಿದ ಮೇಲೆ ಹೇಳುತ್ತೇನೆ. ೫೮ ರಿಂದ ೫೫ ವರ್ಷಕ್ಕೆ ಇಳಿಸಿದಾಕ್ಷಣ ಸಮಸ್ಯೆ ಬಗೆಹರಿಯುವುದಿಲ್ಲ. ೫೮ಕ್ಕೆ ಏರಿಸುತ್ತೇವೆ ಎಂದು ಕೂಡ ಹೇಳಿದ್ದು, ಆಯಾಯ ಸಂದರ್ಭದಲ್ಲಿ ಚುನಾವಣೆ ಬಂದಾಗ ಮಾಡಿ ಚುನಾವಣೆ ಮುಗಿದ ಮೇಲೆ ಮತ್ತೆ ನೋಡೋಣ ಎಂದು ಹೇಳುವಂಥ ಅಭಿಪ್ರಾಯ ಸ್ವಾತಂತ್ರ್ಯ ಬಂದು ೪೩ ವರ್ಷಗಳಾದರೂ ನಡೆದುಕೊಂಡು ಬರುತ್ತಿದೆ. ಇದು ಸರಿಯಲ್ಲ, ಇದಕ್ಕೆ ಕೊನೆ ಮಾಡಿ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮಗೆ ಅಧಿಕಾರ ಇದೆ, ಬಹುಮತ ಇದೆ, ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ. ನಿಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಇನ್ನು ಸರ್ಕಾರಿ ಜಮೀನುಗಳ ಅನಧಿಕೃತ ಸಾಗುವಳಿ ಬಗ್ಗೆ ಪ್ರಸ್ತಾಪ ಇದೆ. ಇದನ್ನು ಸ್ವಾಗತ ಮಾಡುತ್ತೇನೆ ಸ್ವಾತಂತ್ರ್ಯ ಬಂದು ೪೩ ವರ್ಷಗಳಲ್ಲಿ, ಸುಮಾರು ೨೦-೨೫ ವರ್ಷಗಳಿಂದ ಉಳುಮೆ ಮಾಡಿಕೊಂಡು ಬಂದಿರುವುದು ಮಾನ್ಯ ಕಾಗೋಡು ತಿಮ್ಮಪ್ಪನವರ ಅನುಭವಕ್ಕೆ ಬಂದಿದೆ. ಒಂದೆರಡು ಎಕರೆ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದ ಬಡವರಿಗೆ ಸಾಗುವಳಿ ಚೀಟಿ ಸಿಕ್ಕಬೇಕೆಂದು ನೀವೂ ಹೋರಾಟ ಮಾಡಿದ್ದೀರಿ, ನಾವೂ ಹೋರಾಟ ಮಾಡಿದ್ದೇವೆ. ಇದೇ ಸದನದಲ್ಲಿ ಅಕ್ಟೋಬರ್ ೧೪, ೧೯೮೮ ರಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡತಕ್ಕಂಥ ಕಡು ಬಡವರ ಜಮೀನನ್ನು ಸಿ ಅಂಡ್ ಡಿ ಲ್ಯಾಂಡ್ ಎಂದು ಕರೆದು, ಸ್ಥಳ ತನಿಖೆ ಮಾಡದೇ ಕಾನೂನಿಗೆ ತಿದ್ದುಪಡಿ ತಂದು, ಈ ಎಲ್ಲಾ ಜಮೀನುಗಳನ್ನೂ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡತಕ್ಕಂಥ ಒಂದು ಕರಾಳ ಶಾಸನವನ್ನು ತಂದಾಗ ಇದೇ ಸದನದಲ್ಲಿ ಧರಣಿ ಕುಳಿತು, ಕಣ್ಣೀರು ಹಾಕಿ, ಬಹುಶಃ ಕರ್ನಾಟಕದಲ್ಲಿಯೇ ಅಲ್ಲ, ಈ ದೇಶದ ಇತಿಹಾಸದೊಳಗೆ ಮೊದಲನೇ ಬಾರಿಗೆ ವಿಧಾನ ಸಭೆಯ ಒಳಗೆ ಸರ್ಕಾರ ತಂದಂಥ ಒಂದು ತಿದ್ದುಪಡಿಯನ್ನು ಬೇಷರತ್ತಾಗಿ ವಾಪಸ್ ತೆಗೆದುಕೊಳ್ಳತಕ್ಕ ಘಟನೆ ನಡೆಯಿತು. ಆ ಸರ್ಕಾರ ಇದ್ದಾಗಲೂ ಕೂಡ ದೊಡ್ಡ ದೊಡ್ಡ ರೈತರ ಜಮೀನನ್ನು ಖಾಯಂ ಮಾಡಬೇಡಿ ಕಡುಬಡವರು, ಕೃಷಿ ಕಾರ್ಮಿಕರು ಯಾರಿದ್ದಾರೆ ಅವರ ಜಮೀನುಗಳನ್ನು ಒಂದು ನಿಮಿಷವೂ ತಡಮಾಡದೇ, ಖಾಯಂ ಮಾಡಿ ಎಂದು ಹೇಳಿದ್ದೆ. ಮಾನ್ಯ ಬೊಮ್ಮಾಯಿಯವರು ಕಂದಾಯ ಸಚಿವರಾಗಿದ್ದಾಗ ಒಂದು ಸಮಿತಿ ಮಾಡಿದ್ದರು, ಆ ಸಮಿತಿಯಲ್ಲೂ ಸಹ ದೊಡ್ಡ ಜಮೀನ್ದಾರ ಜಮೀನುಗಳನ್ನು ಖಾಯಂ ಮಾಡುವುದು ಬೇಡ, ಕಡುಬಡವರ ಜಮೀನುಗಳನ್ನು ಖಾಯಂ ಮಾಡಿ ಎಂದೇ ಹೇಳಿದೆವು. ಇವತ್ತು ನಿಮ್ಮ ಕಾಲದಲ್ಲಿ ಇಷ್ಟನೇ ತಾರೀಖು, ಈ ರಾಜ್ಯದಲ್ಲಿರುವಂಥ ಕಡುಬಡವರ, ಕೃಷಿ ಕಾರ್ಮಿಕರ ಮತ್ತು ಹರಿಜನಗಿರಿಜನ ಬಂಧುಗಳ ಬಗರ್ ಹುಕುಂ ಸಾಗುವಳಿ ಜಮೀನುಗಳನ್ನು ಖಾಯಂ ಮಾಡುತ್ತೀರಾ. ಇವತ್ತು ತಾವು ನಿರ್ದಿಷ್ಟವಾಗಿ ಹೇಳಿ. ನೀವು ಇದನ್ನು ಮಾಡಬೇಡಿ ಎಂದು ಯಾರೂ ನಿಮ್ಮನ್ನು ಅಡ್ಡಿ ಮಾಡಿಲ್ಲ. ಹಾಗಿದ್ದರೆ, ನಾಳೆ ಮಾಡುವುದನ್ನು ಇವತ್ತೇ ಮಾಡಿದರೆ, ಆ ಬಡವ ಒಂದು ಬೋರ್‌ವೆಲ್ ಹಾಕಿಕೊಂಡು, ಸೊಸೈಟಿಯಲ್ಲಿ ಸಾಲ ತೆಗೆದುಕೊಂಡು, ೪ ಚೀಲ ರಾಗಿ ಬೆಳೆಯುವ ಕಡೆ ೧೦ ಚೀಲ ಭತ್ತ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ತಡ ಮಾಡುವ ಅಗತ್ಯವಿಲ್ಲ. ೫ ವರ್ಷಗಳ ಕಾಲವೂ ಬರೀ ಹೇಳಿಕೊಂಡು ಹೋಗುವಂಥ ಪ್ರಯತ್ನ ಮಾಡದೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಕಾಲದಲ್ಲಿ, ಇನ್ನು ೩-೪ ತಿಂಗಳೊಳಗೆ, ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಈ ಅನಧಿಕೃತ ಸಾಗುವಳಿಯನ್ನು ಖಾಯಂ ಮಾಡುತ್ತೇವೆ ಎಂದು ಹೇಳುವುದಕ್ಕೆ ಒತ್ತಡವನ್ನು ತಾವೆಲ್ಲರೂ ತನ್ನಿ, ಅದಕ್ಕೆ ನಾವೂ ಕೂಡ ಬೆಂಬಲ ಕೊಡುತ್ತೇವೆ. ಈ ಒಂದು ಕಾರ್ಯಕ್ರಮ ಸ್ವಾಗತ ಮಾಡುವಂಥಾದ್ದು. ಆದ್ದರಿಂದ ಆದಷ್ಟು ಬೇಗ ಇದನ್ನು ಕಾರ್ಯ ರೂಪಕ್ಕೆ ತರುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲಿರುವಂಥ ಅಧಿಕಾರಿಗಳಲ್ಲಿ ಸ್ವಾರ್ಥ ಮತ್ತು ಭ್ರಷ್ಟಾಚಾರ ನಿವಾರಣವಾಗುತ್ತಿದೆ ಎಂದು ಒಂದು ಕಡೆ ಪ್ರಸ್ತಾಪ ಮಾಡಿದ್ದೀರಿ. ಮತ್ತೊಂದು ಕಡೆ

> "ರಾಜ್ಯದಲ್ಲಿನ ಕೈಗಾರಿಕೆಗಳಲ್ಲಿ ಹಣ ಹೂಡಿಕೆಯು ಕಳೆದ ಕೆಲವು ವರ್ಷಗಳಿಂದ ಒಂದೇ ಸಮನೆ ಕಡಿಮೆಯಾಗುತ್ತಿರುವುದು ನನ್ನ ಸರ್ಕಾರಕ್ಕೆ ತೀವ್ರ ಆತಂಕದ ವಿಷಯವಾಗಿದೆ. ನನ್ನ ಸರ್ಕಾರವು ಕೈಗಾರಿಕಾ ಅಭಿವೃದ್ಧಿಗೆ ಅಗತ್ಯವಾದ ಪ್ರಾಮುಖ್ಯತೆಯನ್ನು ನೀಡುವ ಮೂಲಕ ಈ ನಕಾರಾತ್ಮಕ ಪ್ರವೃತ್ತಿಯನ್ನು ತಡೆಗಟ್ಟಲು ಉದ್ದೇಶಿಸುತ್ತದೆ."

ಎಂದು ಹೇಳಿದ್ದೀರಿ. ಆದ್ದರಿಂದ ನಾನು ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಪ್ಯಾರಾದಲ್ಲಿ ಈ ರೀತಿ ಕೈಗಾರಿಕೆಗೆ ಹಣ ಹೂಡಿಕೆ ಮಾಡುವಂಥಾದ್ದು

ಕಡಿಮೆಯಾಗುತ್ತಿದೆ ಎಂಬುದು ಸರ್ಕಾರಕ್ಕೆ ಮನದಟ್ಟಾದ ಮೇಲೆ ಏತಕ್ಕೋಸ್ಕರ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಜನ ಮುಂದೆ ಬರುತ್ತಾ ಇಲ್ಲ. ಏಕೆ ಹಣ ಹೂಡುತ್ತಾ ಇಲ್ಲ. ಇದಕ್ಕೆ ಪರಿಹಾರ ಹುಡುಕುವ ಪ್ರಯತ್ನ ಮಾಡಿದ್ದೀರಾ ? ಒಬ್ಬ ನಿರುದ್ಯೋಗಿ ವಿದ್ಯಾರ್ಥಿ ತಮ್ಮ ಅಪ್ಪ ಕೊಡಿಟ್ಟ ಹಣವನ್ನು ಉಪಯೋಗ ಮಾಡಿಕೊಂಡು, ಅದರ ಜೊತೆ ಬ್ಯಾಂಕ್‌ನಿಂದ ಸಾಲವನ್ನು ಪಡೆದು ನಿಮ್ಮ ಕಾರ್ಯಕ್ರಮವನ್ನು ನಂಬಿ, ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತಾನೆ. ಅವನಿಗೆ ಡೆವಲಪ್‌ಮೆಂಟ್ ಲೋನ್ ಸಬ್ಸಿಡಿ ಏನಿದೆ, ಅದನ್ನು ೨-೩ ವರ್ಷಗಳಾದರೂ ಪಾವತಿ ಮಾಡದೇ ಇದ್ದರೆ, ಯಾವ ಸಾಮಾನ್ಯ ವ್ಯಕ್ತಿ ಈ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಅಪೇಕ್ಷೆ ಪಡುತ್ತಾನೆ. ಎರಡನೆಯದು, ಈ ರೀತಿ ಹೊಸ ಕೈಗಾರಿಕೆಗಳನ್ನು ಪ್ರಾರಂಭ ಮಾಡುವ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಏನು ದೊಡ್ಡ ಸಂಖ್ಯೆಯಲ್ಲಿ ನಿರುದ್ಯೋಗ ಸಮಸ್ಯೆ ಇದೆ, ಈ ನಿರುದ್ಯೋಗಿ ಜನ ನಗರಕ್ಕೆ ವಲಸೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶದ ಅಂತರ ಜಾಸ್ತಿಯಾಗುತ್ತಿದೆ. ಇದನ್ನು ಸರಿಪಡಿಸುವ ದೃಷ್ಟಿಯಿಂದ ಸರ್ಕಾರ ಮುಂದೆ ಬರುವಂಥ ದಿನಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದರ ಕಡೆ ಗಮನ ಕೊಟ್ಟು, ಯುವಕರಿಗೆ ಕೆಲಸ ಕೊಟ್ಟು, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಹೇಳಬೇಕು. ಅದರ ಜೊತೆಗೆ ಈ ರೀತಿಯ ಕಾರ್ಖಾನೆಗಳಿಗೆ ಸಬ್ಸಿಡಿಯನ್ನು ಕೊಟ್ಟಿಲ್ಲ, ಡೆವಲಪ್‌ಮೆಂಟ್ ಲೋನ್ ಕೊಟ್ಟಿಲ್ಲ. ಆದ್ದರಿಂದ ಬರುವ ಮಾರ್ಚಿ ಕೊನೆಯೊಳಗೆ ಇದನ್ನು ಪಾವತಿ ಮಾಡುತ್ತೇವೆ ಎಂದು ಹೇಳಬಹುದಿತ್ತು. ಅದನ್ನು ಹೇಳದೇ ಸುಮ್ಮನೇ ಮೊಸಳೆ ಕಣ್ಣೀರು ಸುರಿಸುವುದರಿಂದ, ಸಾಮಾನ್ಯ ಜನ ಬಂದು ಹೆಚ್ಚು ಹಣವನ್ನು ತೊಡಗಿಸಿ, ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಸ್ಪಷ್ಟವಾದ ಮಾತಿಲ್ಲ.

ನಾವು ಕರ್ನಾಟಕದ ಎಲ್ಲ ನಿವಾಸಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ಎಂದು ಹೇಳಿರುವುದು ಹೆಮ್ಮೆಯ ವಿಷಯವಾಗಿದೆ. ಇದನ್ನು ಹೇಳುತ್ತಾ, ಈ ವರ್ಷ ಸಣ್ಣ ಹಳ್ಳಿಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಾಲೋನಿಗಳನ್ನು, ಹಿಂದುಳಿದ ವರ್ಗದ ಕಾಲೋನಿಗಳನ್ನು, ತಾಂಡಾಗಳನ್ನು ವಿದ್ಯುದ್ದೀಕರಣಗೊಳಿಸುವುದಕ್ಕೆ, ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಪ್ರಾಶಸ್ತ್ಯ ನೀಡಲಾಗಿದೆ ಎಂದು ಹೇಳಿದ್ದೀರಿ. ನಾನು ಕೇಳುತ್ತೇನೆ, ಸ್ವಾತಂತ್ರ್ಯ ಬಂದು ೩೩ ವರ್ಷಗಳಾಯಿತು. ೬ ಪಂಚವಾರ್ಷಿಕ ಯೋಜನೆಗಳಲ್ಲಿ ಸಹಸ್ರಾರು ಕೋಟಿ ರೂಪಾಯಿಗಳನ್ನು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಖರ್ಚು ಮಾಡಿದಿರಿ. ನಾವು ಅಧಿಕಾರದಲ್ಲಿ ಇರಲಿಲ್ಲ. ನೀವೇ ಇದ್ದೀರಿ ಅಕಸ್ಮಾತ್ ಇಲ್ಲದಿದ್ದರಿ. ೩೩ ವರ್ಷ ಸತತವಾಗಿ ಅಧಿಕಾರದಲ್ಲಿದ್ದ ನೀವು, ಪರಿಶಿಷ್ಟ ಜಾತಿ ಮತ್ತು ವರ್ಗದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುವ ನೀವು, ೬ನೇ ಪಂಚವಾರ್ಷಿಕ ಯೋಜನೆಯವರೆಗೆ ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಾಗಲೂ ಸಹ, ಇವತ್ತು ಗ್ರಾಮೀಣ ಪ್ರದೇಶಗಳಿಗೆ, ತಾಂಡಗಳಿಗೆ, ಹರಿಜನ ಕಾಲೋನಿಗಳಿಗೆ ವಿದ್ಯುತ್ ಒದಗಿಸಿಕೊಟ್ಟಿಲ್ಲ ಎಂದು ಹೇಳುವುದು ನಿಮಗೆ ಗೌರವತರುವ ಸಂಗತಿಯೇ? ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಒದಗಿಸಿಕೊಡುವ ಸಂದರ್ಭದಲ್ಲಿ ಆ ಊರಿಗೆ ವಿದ್ಯುತ್ ಹೋಗುವುದರೊಳಗೆ ಅಲ್ಲಿರತಕ್ಕಂಥ ತಾಂಡಾಗಳಿಗೆ, ಹರಿಜನ ಕಾಲೋನಿಗೆ ವಿದ್ಯುತ್ ಹೋದ ಮೇಲೆ, ಊರೊಳಗೆ ವಿದ್ಯುತ್ ಕಂಬ ಹೋಗುತ್ತದೆ ಎಂದು ಮಾಡುವುದಕ್ಕೆ ಬರಲಿಲ್ಲವೇ ಸ್ವಾಮಿ ? ಏತಕ್ಕೆ ಮಾಡಲಿಲ್ಲ. ಅವರಿಗೆ ವಿದ್ಯುತ್‌ನಿಂದ ಬೆಳಕು ಸಿಕ್ಕಿದರೆ, ರಸ್ತೆ ಸರಿಹೋದರೆ, ಮನೆಯಾದರೆ, ಶಾಲೆ ಆದರೆ, ನಾಳೆ ಹಿಡಿದು ಕೇಳುವ ಶಕ್ತಿ ಅವನಲ್ಲಿ ಬರುತ್ತದೆ ಎಂದು ಅದನ್ನು ಅಡಗಿಸುವ ವ್ಯವಸ್ಥಿತವಾದ ಪ್ರಯತ್ನ ಸ್ವಾತಂತ್ರ್ಯ ಬಂದ ಮೇಲೆ ನಿಮ್ಮಿಂದ ಆಯಿತು. ಇದು ನಿಮಗೆ ಗೌರವ ತರುವ ಸಂಗತಿ ಎಂದು ನನಗನ್ನಿಸುವುದಿಲ್ಲ. ಈಗಲಾದರೂ ನಿರ್ದಿಷ್ಟವಾಗಿ ಬರುವ ವರ್ಷದೊಳಗೆ ರಾಜ್ಯದಲ್ಲಿರುವಂತಹ ಹರಿಜನ ಕೇರಿಗಳಿಗೆ ತಾಂಡಾಗಳಿಗೆ, ನಿಮ್ಮ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ದೃಷ್ಟಿಯಿಂದಲಾದರೂ ಸಹ, ವಿದ್ಯುತ್ ಕೊಡುತ್ತೀರಾ ? ಅಥವಾ ಐದು ವರ್ಷ ಆದಮೇಲೆ ಮತ್ತೊಮ್ಮೆ ಚುನಾವಣೆ ಹೋದಾಗ ಇಷ್ಟು ಮಾಡಿದ್ದೇವೆ, ಮುಂದೆ ಮಾಡುತ್ತೇವೆ ಎಂದು ಕಥೆಯನ್ನು ಹೇಳದೆ ಈಗ ಏನು ಹೇಳಿದ್ದೀರಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿ. ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಪ್ರಾಶಸ್ತ್ಯ ನೀಡಲಾಗುವುದು ಎಂದು ಹೇಳಿದ್ದೀರಿ. ದೇವರ ದಯೆಯಿಂದ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವುದಕ್ಕೆ ಮುಂಚೆ ಬಜೆಟ್ ಭಾಷಣದ ಮೇಲೆ ಚರ್ಚೆಯಾಗುತ್ತಿದೆ. ನೀರಾವರಿಗೆ ಆದ್ಯತೆ ಕೊಡುವ ದೃಷ್ಟಿಯಿಂದ, ಯಾವ ಬಡವನಿಗೆ ನೀರಾವರಿ ಸೌಲಭ್ಯ ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ, ಯಾರು ಒಳಬೇಸಾಯ ಮಾಡುತ್ತಿದ್ದಾರೆ, ಅಂತಹ ಸಹಸ್ರಾರು ಜನ ರಾಜ್ಯದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆದು, ಪಂಪುಸೆಟ್ಟು ಹಾಕಿಕೊಂಡಿರುವ ವಿಚಾರ ನಿಮ್ಮ ಗಮನಕ್ಕೆ ಬಂದಿಲ್ಲವೇ ? ಸರಕಾರಕ್ಕೆ ಗೊತ್ತಿಲ್ಲವೇ ? ಗೊತ್ತಾದ ಮೇಲೆ ಸಾಲ ಪಡೆದು ಬೋರ್‌ವೆಲ್ ಹಾಕಿರುವ ಅಥವಾ ಬಾವಿ ತೆಗೆಸಿರುವಂತಹವರನ್ನು, ಸಾಲ ಪಡೆದು ಪಂಪುಸೆಟ್ಟುಗಳನ್ನು

ತಂದು ಎರಡು ವರ್ಷವಾದರೂ ಸಹ ವಿದ್ಯುಚ್ಛಕ್ತಿ ಕೊಟ್ಟಿಲ್ಲ. ನಿಮ್ಮ ಅಂಕಿ ಅಂಶಗಳ ಪ್ರಕಾರವೇ ಇಂತಹ ಏಳೂವರೆ ಸಾವಿರ ಎಂಟುಸಾವಿರ ಬಡವರಿಗೆ, ಪಂಪುಸೆಟ್ಟು ಹಾಕಿದವರಿಗೆ, ವಿದ್ಯುತ್ ಸೌಲಭ್ಯವನ್ನು ಕಳೆದ ಎರಡು ವರ್ಷದಿಂದ ಕೊಟ್ಟಿಲ್ಲ. ಇವತ್ತು ಧೈರ್ಯವಾಗಿ ಹೇಳುತ್ತೀರಾ ? ನಮ್ಮ ಸರಕಾರ ಬರುವಂತಹ ದಿವಸಗಳಲ್ಲಿ, ಬೋರ್‌ವೆಲ್ ತೆಗೆದ ಒಂದು ತಿಂಗಳ ಒಳಗಾಗಿ ವಿದ್ಯುತ್ ಒದಗಿಸಿಕೊಡುವ ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೀರಾ ? ದೊಡ್ಡ ಕಾರ್ಖಾನೆ ಮಾಲೀಕನಿಗೆ ಕೊಡುವ ವಿದ್ಯುತ್ ತೆಗೆದಾದರೂ ಸಹ ಬಡ ರೈತರನ್ನು ಹರಿಜನರನ್ನು ಉದ್ಧಾರ ಮಾಡುವ ದೃಷ್ಟಿಯಿಂದ ಅವನ ಬೋರ್‌ವೆಲ್‌ಗೆ ಒಂದು ತಿಂಗಳ ಒಳಗಾಗಿ ವಿದ್ಯುತ್ ಒದಗಿಸಿಕೊಡುತ್ತೇವೆ, ಈ ತರಹದ ಒಂದು ಕೇಸ್ ಉಳಿಯುವುದಕ್ಕೆ ಬಿಡುವುದಿಲ್ಲ, ಎಷ್ಟು ಜನ ಮುಂದೆ ಬಂದರೂ ವಿದ್ಯುತ್ ಒದಗಿಸಿಕೊಡುವುದಕ್ಕೆ ಸಿದ್ಧರಿದ್ದೇವೆ ಎಂಬ ಮಾತನ್ನು ಸರಕಾರದ ಮೂಲಕ ಹೇಳುವುದಕ್ಕೆ ತಾವು ತಯಾರಾಗಿದ್ದೀರಾ ? ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಿರ್ದಿಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಾಗಲೀ, ನಿಮ್ಮ ಬಜೆಟ್ ಭಾಷಣದಲ್ಲಾಗಲೀ, ಹೇಳಿಲ್ಲ. ಬರುವಂತಹ ವರ್ಷದಲ್ಲಿ ಒಂದೊಂದು ತಾಲ್ಲೂಕಿಗೆ ಒಂದು ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಿಕೊಡುತ್ತೇವೆ, ಇದಕ್ಕೆ ಆದ್ಯತೆ ನಮ್ಮ ಸರಕಾರದ ನೀತಿ, ಕೈಗಾರಿಕೆಗಳು ಆಮೇಲೆ ಎಂದು ಸ್ಪಷ್ಟವಾಗಿ ಹೇಳುತ್ತೀರಾ ? ಪಬ್ಲಿಕ್ ಅಂಡರ್ ಟೇಕಿಂಗ್ಸ್ ನಿರ್ನಾಮವಾಗಿ ಹೋಗಿದೆ. ಸಣ್ಣ ಕೈಗಾರಿಕೆಗಳಿಗೆ ಹಣ ತೊಡಗಿಸುವುದಕ್ಕೆ ಜನ ಬರುತ್ತಿಲ್ಲ ಎಂಬುದನ್ನು ನೀವೇ ಒಪ್ಪಿಕೊಂಡಿದ್ದೀರಿ. ರೈತನ ಹೊಲ ಎಂಬ ಕಾರ್ಖಾನೆ ಉಳಿದಾಗ ಮಾತ್ರ ಹಳ್ಳಿ ಉಳಿಯುತ್ತದೆ, ದೇಶ ಉಳಿಯುತ್ತದೆ ಎಂಬ ಭಾವನೆ ನಿಮಗೆ ಇದ್ದಿದ್ದರೆ ಬಡ ರೈತನಿಗೆ, ಅವನ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡಿಸುವ ಕೆಲಸ ಮಾಡಬೇಕಾಗಿತ್ತು. ಇದಕ್ಕೆ ಆದ್ಯತೆ ಎಲ್ಲಿದೆ ಸ್ವಾಮಿ ? ಕಥೆ ಹೇಳಿದ್ದೀರಾ, ಅವನ ಕರ್ಮಕಥೆ ಹೇಳಿದ್ದೀರಾ. ಅವನ ಸ್ಥಿತಿ ಏನಿದೆ ಅದನ್ನು ಪುನರುಚ್ಚಾರ ಮಾಡಿದ್ದೀರೇ ವಿನಹ ಯಾವುದೇ ಸ್ಪಷ್ಟವಾದ ಮಾತೂ ಇದರಲ್ಲಿ ಇಲ್ಲ. ಇನ್ನೊಂದು ದೊಡ್ಡ ಮಾತನ್ನು ಹೇಳಿದ್ದೀರಿ. ಯಾವ ಭಾಗದ ರೈತ ಕಳೆದ ಐದಾರು ವರ್ಷಗಳಿಂದ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿದ್ದಾನೆ. ಕಳೆದ ವರ್ಷ ಸಹ ಸರಿಯಾಗಿ ಮಳೆ ಬರದೆ, ಬೆಳೆಯಾಗದೇ ರೈತ ಹಾಳಾಗಿ ಹೋದ ಎಂದು ನೀವೇ ಒಪ್ಪಿಕೊಂಡಿರುವ ಹಾಗೆ ಅಂತಹ ರೈತ, ಅಂತಹ ಕೃಷಿ ಕಾರ್ಮಿಕ ಕೆಲಸವಿಲ್ಲದೆ ಅಲೆಯುವ ದುಃಸ್ಥಿತಿಗೆ ಬಂದಾಗ, ಕಳೆದ ರಾಜ್ಯಪಾಲರ ಆಡಳಿತದ ಅವಧಿಯಿಂದ ಇವತ್ತಿನವರೆಗೆ ಬರಗಾಲ ಕಾಮಗಾರಿಗಳಿಗೆ ಇಷ್ಟು ಹಣವನ್ನು ಒದಗಿಸಿಕೊಟ್ಟಿದ್ದೇವೆ ಎಂಬ ಮಾತು ಇದರಲ್ಲಿ ಇದೆಯೇ ? ನೀವು ಹೇಳಿರುವ ಮತ್ತೊಂದು ಮಾತು ಎಂದರೆ, ಈ ವರ್ಷದಿಂದ ಬರಗಾಲದಲ್ಲಿ ಮೇಲ್ವಿಚಾರಣೆಯ ವಿಶೇಷ ಕೇಂದ್ರವು, ಬರಗಾಲಕ್ಕೀಡಾದ ನಿರ್ದಿಷ್ಟ ಪ್ರದೇಶಗಳನ್ನು ನಿಯತವಾಗಿ ಪ್ರಕಟಿಸುವುದು ಇದರಿಂದ ಏನಾಯಿತು ? ಯಾವ ಹಳ್ಳಿ ಬರಗಾಲಕ್ಕೆ ತುತ್ತಾಗಿದೆ ಎಂದು ನಿಯಮಿತವಾಗಿ ಪ್ರಕಟಿಸುವುದರಿಂದ ಬರಗಾಲದ ಸಮಸ್ಯೆ ಬಗೆಹರಿಯುತ್ತದೆಯೇ ?

ಯಾವ ಹಳ್ಳಿಯಲ್ಲಿ ಬರಗಾಲಕ್ಕೆ ತುತ್ತಾದ ನಿಯತಕಾಲಿಕವಾದ ಪ್ರಕರಣಗಳು ಇವೆ ಅಂತಹ ಕಡೆ ಬರಗಾಲ ಸಮಸ್ಯೆಯನ್ನು ಬಗೆಹರಿಸುತ್ತೇವೆ, ಅದಾದ ಮೇಲೆ ಅಲ್ಲಿಂದ ಕೃಷಿ ಕಾರ್ಮಿಕರಿಗೆ ಕೆಲಸವನ್ನು ಒದಗಿಸುತ್ತೇವೆಂದು ಹೇಳಿದ್ದೀರಿ. ಮುಂದೆ ಬರುವಂತಹ ದಿವಸಗಳಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸವನ್ನು ಒದಗಿಸುವುದಕ್ಕೆ ಸಾಧ್ಯವೇ ? ಈ ಬಗ್ಗೆ ತಾವು ಏನಾದರೂ ಕಾರ್ಯಕ್ರಮ ರೂಪಿಸಿದ್ದೀರಾ ? ಇದರಲ್ಲಿ ಏನಾದರೂ ಪ್ರಸ್ತಾಪ ಇದೆಯೇ ? ಎಲ್ಲಿದೆ ? ಯಾವುದು ಇದೆ ? ಏನು ದೊಡ್ಡ ದೊಡ್ಡ ಮಾತನ್ನು ಹೇಳಿದ್ದೀರಿ, ಕ್ರಿ. ಶ. ೨ ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಎಂದು ಹೇಳಿದೆ. ಎರಡು ಸಾವಿರ ಇಸವಿಯೊಳಗೆ ನಾವು ಎಲ್ಲಿರುತ್ತೇವೆ. ನೀವು ಎಲ್ಲಿರುತ್ತೀರಿ ಎನ್ನುವುದು ಗೊತ್ತಿಲ್ಲ. ಈಗ ಏನು ಮಾಡುತ್ತೀರಿ ಎನ್ನುವುದನ್ನು ಹೇಳಿ. ನಾವೇನು ನಿಮ್ಮನ್ನು ದೊಡ್ಡದು ಕೇಳಲಿಲ್ಲ. ಹೊಸ ಆಸ್ಪತ್ರೆಗಳನ್ನು ಪ್ರಾರಂಭ ಮಾಡುವುದು ಹೋಗಲಿ ಈಗಾಗಲೇ ಇರುವಂತಹ ಆಸ್ಪತ್ರೆಗಳಲ್ಲಿ ಒಂದು ದಿವಸವೂ ಒಬ್ಬ ಡಾಕ್ಟರ್ ಇಲ್ಲದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳುತ್ತೀರಾ ? ಡಾಕ್ಟರ್ಸ್ ನೇಮಕ ಮಾಡಿ ಎಂದು ನಾವು ಹೇಳುತ್ತೇವೆ. ಹೊಸ ಆಸ್ಪತ್ರೆಗಳನ್ನು ಮಾಡುವುದು ಆಮೇಲೆ ಆಯಿತು. ಖಾಲಿ ಇರುವಂತಹ ಆಸ್ಪತ್ರೆಗಳಿಗೆ ಡಾಕ್ಟರ್ಸನ್ನು ಮೊದಲು ಹಾಕಿ. ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ಪಿ. ಎಚ್. ಸಿ.ಗಳು ಇವೆ. ಅದರಲ್ಲಿ ೪ ಕಡೆ ಡಾಕ್ಟರ್ಸ್ ಇಲ್ಲ. ಕಳೆದ ನಾಲ್ಕು ವರ್ಷಗಳಿಂದ ಶಿಕಾರಿಪುರ. ಶಿರಾಳಕೊಪ್ಪ ಪಿ. ಎಚ್. ಸಿ. ಗಳಲ್ಲಿ ಮಹಿಳಾ ವೈದ್ಯರು ಇಲ್ಲ. ಸರ್ಕಾರ ಬದುಕಿದ್ದರೆ ಮುಂದೆ ಬರುವಂತಹ ದಿವಸಗಳಲ್ಲಿ ಪಿ. ಎಚ್. ಸಿ. ಗಳು ಇರಬಹುದು ಅಥವಾ ಪಿ. ಎಚ್. ಯಂ. ಗಳು ಇರಬಹುದು, ಎಲ್ಲಿ ಡಾಕ್ಟರ್ಸ್ ಇಲ್ಲವೋ ಅಲ್ಲಿ ಡಾಕ್ಟರ್ಸನ್ನು ಹಾಕುತ್ತೇವೆಂದು ನೀವು ಹೇಳುತ್ತೀರಾ ? ನಿಮ್ಮಲ್ಲಿ ಮೆಡಿಕಲ್ ಡಾಕ್ಟರ್ಸ್ ಇಲ್ಲವೇ ? ಡಾಕ್ಟರ್ಸ್ ನೇಮಕ ಮಾಡಿಕೊಳ್ಳುವಂತಹ ಶಕ್ತಿ ಇಲ್ಲವೇ ? ನಿಜವಾಗಿಯೂ ನಿಮಗೆ ೨ ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಕೊಡಬೇಕೆನ್ನುವ ಕಳಕಳಿ ಇದ್ದರೆ ಇವತ್ತು ಏನು

ಮಾಡಿದ್ದೀರಿ ಎನ್ನುವುದನ್ನು ಹೇಳಿ. ಮುಂದೆ ಬರುವಂತಹ ದಿವಸಗಳಲ್ಲಿ ಈ ರಾಜ್ಯದಲ್ಲಿರತಕ್ಕಂಥ ಎಲ್ಲಾ ಪಿ. ಎಚ್. ಸಿ ಗಳಿಗೆ ಮತ್ತು ಪಿ ಎಚ್. ಯು.ಗಳಿಗೆ ಮಹಿಳಾ ವೈದ್ಯರನ್ನು, ಡಾಕ್ಟರ್‌ಗಳನ್ನು ನೇಮಕ ಮಾಡುವಂತಹ ದೃಢಸಂಕಲ್ಪ ಮಾಡುತ್ತೀರಾ ? ಈ ಬಗ್ಗೆ ತಾವು ಏನು ವ್ಯವಸ್ಥೆ ಮಾಡುತ್ತೀರಿ ? ಈ ರೀತಿ ಏನಾದರೂ ದೃಢ ಹೆಜ್ಜೆ ಇಡುವಂತಹ ಪ್ರಯತ್ನ ತಾವು ಮಾಡಿದರೆ ಬಹುಶಃ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಕ್ಕೆ ಸಾರ್ಥಕವಾಗುತ್ತದೆ. ಇನ್ನೊಂದು ಮಾತನ್ನು ತಾವು ಹೇಳಿದ್ದೀರಿ. ಅದೇನೆಂದರೆ, " ಕೃಷಿಕರಿಗೆ ಲಾಭದಾಯಕವಾದ ಬೆಲೆಗಳು ಸಿಗುವಂತೆ ಮಾಡುವ ಸಲುವಾಗಿ ನನ್ನ ಸರ್ಕಾರ ಅವಶ್ಯಕವಾದ ಎಲ್ಲಾ ಕಾರ್ಯಕ್ರಮಗಳನ್ನು ಶಕ್ತಿ ಮೀರಿ ಪ್ರಯತ್ನ ಮಾಡುತ್ತದೆ ಎಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಬಡ ರೈತರ ಬಗ್ಗೆ ಬೇಗ್ಗಿಯಿಂದ ಮಾತನಾಡಿದ್ದಾರೆ. ಇವತ್ತೂ ಅದೇ ಆವೇಶ, ಅದೇ ರೌದ್ರಾವತಾರ ಯಾರಿಂ ಕಡುಬಡವ ? ಮತ್ತು "ನನ್ನ ಸರ್ಕಾರ ರಾಜ್ಯದ ರೈತರ ಹಿತಾಸಕ್ತಿಯನ್ನು ಸದಾ ಗಮನದಲ್ಲಿಟ್ಟು ಕೊಂಡು ಅವರಿಗೆ ಸಾಧ್ಯವಾದ ಎಲ್ಲಾ ನೆರವು ಒದಗಿಸುತ್ತದೆ " ಎಂದು ಹೇಳಿದ್ದಾರೆ. ಎಲ್ಲಿ ಒದಗಿಸಿದ್ದೀರಿ. ನಿಮ್ಮ ಸರ್ಕಾರ ಮತ್ತು ಹಿಂದೆ ಇದ್ದಂತಹ ಸರ್ಕಾರಗಳು ಮಾಡಿದಂತಹ ಪರಿಣಾಮಗಳಿಂದಾಗಿ ದುಡಿಯುವ ರೈತನಿಗೆ ಸಾಲ ಕೊಟ್ಟಿದ್ದರೆ ನಿಮ್ಮ ಸಾಲವನ್ನು ಆ ರೈತ ವಾಪಸ್ ಕೊಡುತ್ತಿದ್ದ. ಆ ಪರಿಸ್ಥಿತಿಗೆ ತಾವು ಅವನನ್ನು ತಂದಿದ್ದೀರೇನು ? ಈ ರಾಜ್ಯದ ರೈತ ಇವತ್ತು ಭಿಕ್ಷುಕನಾಗಿ ತಾನು ಪಡೆದಂತಹ ಸಾಲ ವಾಪಸ್ ಕೊಡುವುದಕ್ಕೆ ಆಗದೆ ಸಾಲ ಮನ್ನಾ ಮಾಡಿ ಎಂದು ಕೇಳುವಂತಹ ಹೀನ ಪರಿಸ್ಥಿತಿಗೆ ಅವನನ್ನು ತೆಗೆದುಕೊಂಡು ಬಂದಿದ್ದೀರಿ. ನಮಗೆ ಸ್ವಾತಂತ್ರ್ಯ ಬಂದು ೪೩ ವರ್ಷಗಳು ಕಳೆದರೂ ರೈತ ಬೆಳೆದಂತಹ ಬೆಳೆಗೆ ಯೋಗ್ಯ ಬೆಲೆ ಕೊಡುತ್ತಿದ್ದೀರಾ ? ಉತ್ತಮವಾದ ಬೀಜ ಕೊಡುತ್ತಿದ್ದೀರಾ ? ಇಲ್ಲದಿದ್ದರೆ ನಿಮ್ಮ ಕಾರ್ಯಕ್ರಮದಲ್ಲಿ ರೈತನಿಗೆ ಅಗತ್ಯವಾದ ಉತ್ತಮ ಬೀಜ, ಅದು ಹತ್ತಿ ಬೀಜ ಆಗಿರಬಹುದು ಶೇಂಗಾ ಬೀಜ ಆಗಿರಬಹುದು, ಭತ್ತದ ತಳಿ ಆಗಿರಬಹುದು, ಅದನ್ನು ಕೊಡುವಂತಹ ಕಾರ್ಯಕ್ರಮ ಏನಿದೆ ? ನಿಮ್ಮ ಅಗ್ರಿಕಲ್ಚರ್ ಯೂನಿವರ್ಸಿಟಿಯವರು ಉತ್ತಮವಾದ ಬೀಜ, ಉತ್ತಮವಾದ ತಳಿ ಕೊಡುವುದಕ್ಕೆ ತಯಾರು ಇದ್ದಾರೇನು ? ಅವರ ತಳಿಯನ್ನು ರೈತ ನಂಬಿ ಬಿತ್ತನೆ ಬೀಜ ತೆಗೆದುಕೊಂಡು ಹೋದರೇ ಆ ಬೀಜ ಹುಟ್ಟುವುದೇ ಇಲ್ಲ. ಸರ್ವನಾಶವಾಗಿ ಹೋಗುತ್ತದೆ. ಇದಕ್ಕೆ ಪರಿಹಾರವೇನು ? ರೈತನಿಗೆ ಏನು ಕಾರ್ಯಕ್ರಮ ಮಾಡಿದ್ದೀರಿ ? ರೈತ ಬೆಳೆದಂತಹ ಕಬ್ಬಿಗೆ ಯೋಗ್ಯ ಬೆಲೆ ಸಿಗಲಿಲ್ಲ. ನಾನು ಈ ಬಗ್ಗೆ ಅನೇಕ ಸಲ ಚರ್ಚೆ ಮಾಡಿದಾಗ ಅವರ ಇಳುವರಿ ಮೇಲೆ ಬೆಲೆ ಗೊತ್ತು ಮಾಡುತ್ತೇವೆಂದು ನಿಮ್ಮ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಈ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಏನಿವೆ ಆ ಕಾರ್ಖಾನೆಗಳು ಇಳುವರಿ ಮೇಲೆ ಬೆಲೆ ಕೊಡುತ್ತವೆ. ಕಬ್ಬು ಬೆಳೆದಂತಹ ರೈತನಿಗೆ ಒಂದು ಕಡೆ ೪೫೦ ರೂಪಾಯಿಗಳು ಒಂದು ಟನ್‌ಗೆ ಕೊಡುತ್ತಾರೆ, ಇನ್ನೊಂದು ಕಡೆ ಅಂದರೆ ಬ್ರಹ್ಮಾವರದ ಶಿವಮೊಗ್ಗ ಜಿಲ್ಲೆ ಸಕ್ಕರೆ ಕಾರ್ಖಾನೆಯವರು ಒಂದು ಟನ್‌ಗೆ ೩೩೦ ರೂಪಾಯಿಗಳನ್ನು ಕೊಡುತ್ತಾರೆ. ಇದಕ್ಕೆ ಕಾರಣವೇನು ? ಒಂದು ಟನ್ ಕಬ್ಬಿಗೆ ಒಂದು ಕ್ವಿಂಟಾಲ್ ಸಕ್ಕರೆ ಆಗುತ್ತದೆ. ಅದಕ್ಕೆ ಬಹಿರಂಗ ಮಾರುಕಟ್ಟೆಯಲ್ಲಿ ೭೫೦ ರೂಪಾಯಿಗಳು ಆಗುತ್ತದೆ. ಬಡ ರೈತನಿಗೆ ತಾವು ೩೩೦ ರೂಪಾಯಿಗಳನ್ನು ಕೊಡುತ್ತೀರಿ. ಇದು ಶೋಷಣೆ ಅಲ್ಲವೇ ? ಮತ್ತೆ ಕಬ್ಬು ಬೆಳೆದಂತಹ ರೈತನ ಮೇಲೆ ತೆರಿಗೆಯನ್ನು ಜಾಸ್ತಿ ಮಾಡುವಂತಹ ಧೈರ್ಯ ಬೇರೆ ನಿಮಗೆ ಇದು ರೈತ ಪರವಾದ ಕಾರ್ಯಕ್ರಮವೇ ? ಇದನ್ನು ರೈತ ಪರ ಕಾರ್ಯಕ್ರಮ ಎಂದು ತಾವು ಹೇಳುತ್ತೀರಾ ? ಇದರಲ್ಲಿ ರೈತರ ಪರವಾಗಿ ಒಂದು ಶಬ್ದವೇನಾದರೂ ಇದೆಯೇ ? ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡಿ ಎಂದು ಕೂಗಿದಾಗ ಹುಚ್ಚ ಎಂದು ತಾವು ತಿಳಿದುಕೊಂಡು ನಾನು ಬೊಬ್ಬೆ ಹಾಕಿದರೂ ಇದು ಸಾಧ್ಯವಿಲ್ಲವೆಂದು ಹೇಳಿದಿರಿ. ಈ ರಾಜ್ಯದ ರೈತರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕಳಕಳಿಯನ್ನು ವ್ಯಕ್ತಪಡಿಸುತ್ತಾ, ಅನೇಕ ಸಲ ಹೊರಗಡೆ ಮಾಡಿದಂತಹ ಭಾಷಣಗಳಲ್ಲಿ ರೈತರ ಸಾಲ ಮನ್ನಾ ಮಾಡತಕ್ಕಂಥಾದ್ದು ಸರಿಯಲ್ಲ, ಎಂದು ಹೇಳುವಂತಹ ಧೈರ್ಯ ನೀವು ಮಾಡಿದಿರಿ. ಇವತ್ತು ನಾನು ಕೇಳುತ್ತೇನೆ ಮೊದಲ ಬಾರಿಗೆ ಕೇಂದ್ರ ಸರ್ಕಾರದವರು ರೈತರ ಪರವಾಗಿ ಯೋಚನೆ ಮಾಡುತ್ತಿರುವಾಗ, ತಾವು ನಾನು ನಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುತ್ತೇನೆಂದು ಹೇಳಿದ್ದೇನೆ. ನಾನು ಒತ್ತಾಯ ತರುತ್ತೇನೆ ಎಂದು ಹೇಳಿದ್ದೀರಿ. ಈ ರಾಜ್ಯದ ರೈತನ ಪರಿಸ್ಥಿತಿ ಸರಿಯಾಗಿಲ್ಲ ಎನ್ನುವುದನ್ನು ತಾವು ಅರಿತುಕೊಂಡೇ ಈ ಮಾತನ್ನು ಹೇಳಿದ್ದೀರಿ. ಇವತ್ತು ಕೇಂದ್ರ ಸರ್ಕಾರ ಮುಂದೆಬಂದಿದೆ. ಆದರೆ ನಿಮ್ಮ ಸರ್ಕಾರದ ಕಾರ್ಯಕ್ರಮ ಏನು ? ಈ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು ನೀವು ನೆರವು ನೀಡುವ ಧೈರ್ಯದ ಮಾತು ಹೇಳಿದ್ದೀರಾ, ಇಲ್ಲ ಹೇಳಲಿಲ್ಲ. ನಿಮ್ಮ ಪಕ್ಷದಲ್ಲಿ ನಿಮ್ಮ ಮುಖ್ಯಮಂತ್ರಿಗಳಲ್ಲಿ ನೀವು ಏನಾದರೂ ಆಗ್ರಹ ಮಾಡಿದ್ದೀರಾ ? ಇಡೀ ದೇಶದಲ್ಲಿ ರೈತರ ಸಾಲ ಮನ್ನಾ ಮಾಡುವಂತಹ ಕಾಲ ಬಂದಾಗ ಈ ಬಗ್ಗೆ ನಿಮ್ಮ ಮುಖ್ಯಮಂತ್ರಿಗಳು ಏನಾದರೂ ಆಶ್ವಾಸನೆ ಕೊಡಲು ನೀವು ಒತ್ತಾಯ

ಮಾಡಿದ್ದೀರಾ. ಈ ಬಗ್ಗೆ ಪ್ರಯತ್ನವನ್ನು ಏನಾದರೂ ಮಾಡಿದ್ದೀರಾ ? ನೀವು ರೈತರಿಂದ ಓಟು ಪಡೆದಿಲ್ಲವೇ ? ನಾನು ಈ ಬಗ್ಗೆ ಪ್ರಸ್ತಾಪ ಮಾಡಿದಾಗ, ಹೋರಾಟ ಮಾಡಿದಾಗ ತಾವು ನನ್ನನ್ನು ತಮಾಷೆ ಮಾಡಿದಿರಿ, ಲೇವಡಿ ಮಾಡಿದಿರಿ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಹಿಂದೆ ಇದೇ ರೀತಿ ಮಾತನಾಡುತ್ತಿದ್ದರು. ಈಗಲೂ ಇದೇ ರೀತಿ ಮಾತನಾಡುತ್ತಿದ್ದಾರೆ. ಬಡವರ ಬಗ್ಗೆ, ರೈತರ ಬಗ್ಗೆ, ಕಡು ರೈತರ ಬಗ್ಗೆ ಎಷ್ಟು ಸಾರಿ ಇದನ್ನೇ ಹೇಳುತ್ತೀರಿ.

೪–೦೦ ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತು ರೈತನ ಸ್ಥಿತಿ ಏನಿದೆ ?

ಶ್ರೀ ಬಿ. ಬಸವಲಿಂಗಪ್ಪ.—ಕಡು ಬಡವನ ಬಗ್ಗೆ ಮಾತನಾಡುವುದು ನಿಮಗೆ ಅದೇನು ಕಸುಬಾ? ಅವರ ಬಗ್ಗೆ ಮಾತನಾಡುವುದಕ್ಕೆ ಈ ರಾಜ್ಯದಲ್ಲಿ ಬೇರೆ ಯಾರೂ ಇಲ್ಲವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನೀವು ಸದನದೊಳಗೆ ಬರುವುದಕ್ಕಿಂತ ಮುಂಚೆ ನಾನು ಒಂದೆರಡು ಮಾತುಗಳನ್ನು ಹೇಳಿದ್ದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳವರು ವಾಸ ಮಾಡುವಂಥ ಕಾಲೋನಿಗಳಿಗೆ ಅನೇಕ ವರ್ಷಗಳಾದರೂ, ತಮ್ಮಂಥವರು ಮಂತ್ರಿಗಳಾಗಿದ್ದರೂ ಮಾಡಲಾಗಲಿಲ್ಲವಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಹರಿಜನರು ಬೇರೆ ಜನರ ಕೈಗೆ ಸಿಕ್ಕಿ ನರಳುತ್ತಿದ್ದಾರೆ. ಯಾವ ಗ್ರಾಮಕ್ಕೇ ಹೋಗಿರಿ. ಹರಿಜನ, ದಲಿತರು, ಕಡು ಬಡವರು, ಬಹಳ ಬಡವರು, ಅತೀ ಬಡವರು ನಿರ್ಗತಿಕರು ಎಂದು ಹೇಳುತ್ತಾರೆ. ಇದು ಯಾವ ಭಾಷೆ. ಇವತ್ತಿನ ದಿವಸ ನಿಮ್ಮ ಊರಿನಲ್ಲಿ ಹೋಗಿ ನೋಡಿ, ಕಡು ಬಡವರಿದ್ದಾರಲ್ಲ, ದಲಿತರು ಇದ್ದಾರಲ್ಲಾ ಅವರು ಹೇಗಿದ್ದರೋ ಹಾಗೆಯೇ ಇದ್ದಾರೆ. ನಾವು ಮಾತ್ರ ಅವರ ಅಭಿವೃದ್ಧಿಗಾಗಿ ಹಣವನ್ನು ಖರ್ಚು ಮಾಡುತ್ತಲೇ ಇದ್ದೇವೆ. ನಾವು ಕೊಡುವ ಹಣ ಅವರಿಗೆ ನೇರವಾಗಿ ಸಿಕ್ಕಿದೆಯೆಂದು ತಿಳಿದುಕೊಂಡಿದ್ದೀರಾ ? ಯಾರು ಮಧ್ಯಸ್ಥರಿದ್ದಾರೋ ಅವರು ಆ ಹಣವನ್ನು ತಿಂದು ಹಾಕುತ್ತಾರೆ. ನೀವು ಅದರ ಮೇಲೆ ವ್ಯಾಖ್ಯಾನ ಮಾಡಬೇಕು. ಅವರ ಕೈಗೆ ನೇರವಾಗಿ ಹಣ ಸಿಕ್ಕುವುದು ಹೇಗೆ ಎಂದು ನೀವು ಸರಕಾರಕ್ಕೆ ಸಲಹೆ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು ಪರಿಶಿಷ್ಟ ವರ್ಗದ ಜನ ನಮ್ಮ ಕೈಗೆ ಸಿಕ್ಕಿ ನರಳುತ್ತಿದ್ದಾರೆಂದು ಹೇಳಿದರು. ಇದರ ಬಗ್ಗೆ ಪ್ರಾಮಾಣಿಕವಾಗಿ ಯೋಚನೆ ಮಾಡಿ. ಕಳೆದ ೬–೭ ವರ್ಷಗಳಲ್ಲಿ ಈ ಸದನದಲ್ಲಿ ನಾನು ಇದ್ದಾಗ್ಯೂ ಪರಿಶಿಷ್ಟ ವರ್ಗದ ಜನಾಂಗದ ಮೇಲೆ ಆಗಿರುವಂಥ ಹಲ್ಲೆ ಬಗ್ಗೆ, ಅವರಿಗೆ ಆಗಿರುವಂಥ ಅನ್ಯಾಯದ ಬಗ್ಗೆ ಹೋರಾಟ ಮಾಡಲಿಲ್ಲವೇ ? ಶಿಕಾರಿಪುರ ತಾಲ್ಲೂಕಿನಲ್ಲಿ ತಾಂಡದ ಒಬ್ಬ ಬಡವನಿಗೆ ಬೆತ್ತಲೆ ಮೆರವಣಿಗೆ ಮಾಡಿದಾಗ ಆಗ ಹೋಮ್ ಮಿನಿಸ್ಟರ್ ಆಗಿದ್ದ ರಾಚಯ್ಯನವರ ಮುಂದೆ ನಾನು ಕಣ್ಣೀರು ಹಾಕಲಿಲ್ಲವೆ? ಅವನನ್ನು ನಿಮ್ಮೆಲ್ಲರ ಮುಂದೆ ಕರೆದುಕೊಂಡು ಬಂದು ಅವನಿಗೆ ಅನ್ಯಾಯವಾಗಿದೆ, ತಾವು ನ್ಯಾಯ ದೊರಕಿಸಿಕೊಡಿ ಎಂದು ನಾನು ಕೇಳಲಿಲ್ಲವೆ ? ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದರ ಬಗ್ಗೆ ಹೇಳುವುದಾದರೆ, ಮಾನ್ಯ ಬಸವಲಿಂಗಪ್ಪನವರೇ, ತಾವು ನಮ್ಮ ಜಿಲ್ಲೆಗೂ ಬರುತ್ತಿದ್ದಿರಿ. ಅಲ್ಲಿರುವಂಥ ಸಾವಿರಾರು ಕುಟುಂಬಗಳವರು ಕಳೆದ ೨೫–೩೦ ವರ್ಷಗಳಿಂದ ಒತ್ತುವರಿ ಮಾಡಿಕೊಂಡು ಬಗರ್‌ಹುಕುಂ ಮಾಡಿರತಕ್ಕವರಲ್ಲಿ ಶೇಕಡಾ ೪೦–೫೦ ಭಾಗ ಪರಿಶಿಷ್ಟ ವರ್ಗದ ಜನರೇ ಇದ್ದಾರೆ. ನೀವೂ ಅನೇಕ ವರ್ಷಗಳಿಂದ ಅಧಿಕಾರದಲ್ಲಿದ್ದರೂ ಸಹಾ ಬಡವರಿಗೆ ಜಮೀನು ನಿಮ್ಮದು ಎಂದು ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ. ಅದನ್ನು ಕೊಟ್ಟಿದ್ದರೆ ಇವತ್ತು ಬಡವರು ಸಾಯುವಂಥ ಸ್ಥಿತಿ ಬರುತ್ತಿತ್ತೇ ಸ್ವಾಮಿ ? ಯಾವ ಜೀತದಾಳುಗಳು ಮಾನ್ಯ ದೇವರಾಜ ಅರಸರ ಕಾಲದಲ್ಲಿ ಜೀತದಿಂದ ಬಿಡುಗಡೆಯಾದರೋ ಆ ಜೀತದಾಳುಗಳಲ್ಲಿ ನೂರಕ್ಕೆ ೫೦ ಭಾಗ ಆ ಜನ ಇದ್ದಾರಲ್ಲಾ ಅವರ ಪರವಾಗಿ ನಾನು ಎರಡು ತಿಂಗಳು ತಾಲ್ಲೂಕು ಬೋರ್ಡ್ ಮುಂದೆ ಧರಣಿ ಕುಳಿತು ಶಿವಮೊಗ್ಗದವರೆಗೂ ಕಾಲು ನಡಿಗೆಯಲ್ಲಿ ಬಂದು ಆ ೬೮ ಲಕ್ಷ ರೂಪಾಯಿಗಳನ್ನು ಮೂರು ವರ್ಷಗಳಿಂದ ಮುಚ್ಚಿಟ್ಟುಕೊಂಡಿದ್ದಿರಲ್ಲಾ ಆ ಹಣವನ್ನು ೨೪ ಗಂಟೆಯೊಳಗೆ ಬಡವರಿಗೆ ತಲುಪಿಸಿದೆ. ಆ ಪ್ರಯತ್ನವನ್ನು ನಾನು ಮಾಡಲಿಲ್ಲವೆ ? ನಾನು ತೋರಿಕೆಗೆ ಮಾತನಾಡುತ್ತಿಲ್ಲ. ಯಾರಿಗೂ ಬಡವರ ಬಗ್ಗೆ ಕಳಕಳಿ ಇಲ್ಲ, ನನ್ನೊಬ್ಬನಿಗೆ ಮಾತ್ರ ಇದೆ ಎಂದು ನಾನು ಹೇಳಲಿಲ್ಲ. ಈ ೪೩ ವರ್ಷಗಳ ಸಾಧನೆ ಎಂದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪರಿಶಿಷ್ಟ ವರ್ಗದ ಜನ ಇರಬಹುದು, ಕೃಷಿ ಕಾರ್ಮಿಕರು ಇರಬಹುದು, ಯಾವುದೇ ವ್ಯಕ್ತಿ

ಇರಬಹುದು. ಆದರೆ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಬೇಕಾದಂಥ ಸವಲತ್ತುಗಳನ್ನು ಕೊಡಿಸುವುದರಲ್ಲಿ ವಿಫಲವಾಗಿದೆ. ಅವರು ಗೌರವದಿಂದ ಜೀವನ ಮಾಡುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದರಲ್ಲಿ ವಿಫಲರಾಗಿದ್ದೇವೆಂದು ಒಪ್ಪಿಕೊಳ್ಳಬೇಕಾಗಿದೆ. ಈ ಕಾಲದಲ್ಲಿ ಆ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕೆ ನೀವು ಹಾಕಿಕೊಂಡಿರುವ ಕಾರ್ಯಕ್ರಮಗಳೇನೆಂದು ನಾನು ಕೇಳುತ್ತಿದ್ದೇನೆ.

ಶ್ರೀ ವಿನಯಕುಮಾರ್ ಸೊರಕೆ.—ಒಂದು ನಿಮಿಷ ತಾವು ಬೆಂಬಲ ಕೊಟ್ಟು ಸರ್ಕಾರ ರಚನೆ ಮಾಡಿದರಲ್ಲಾ ಆ ಸಂದರ್ಭದಲ್ಲಿ ತಮ್ಮ ಕಳಕಳಿ, ಪ್ರಾಮಾಣಿಕತೆಯ ಉದ್ಗಾರ ಅಷ್ಟಾಗಿ ಕೇಳಿ ಬಂದಿರಲಿಲ್ಲವಲ್ಲಾ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾವುದಾದರೂ ಒಂದು ಸಂದರ್ಭದಲ್ಲಿ ಜನತಾ–ಜನತಾದಳ ಸರ್ಕಾರ ಮಾಡಿದಂಥ ಕಾನೂನು ಬಾಹಿರ ಕಾರ್ಯಕ್ರಮಕ್ಕೆ, ಜನವಿರೋಧಿ ನೀತಿಗೆ ಯಡಿಯೂರಪ್ಪನವರು ಬೆಂಬಲ ಕೊಟ್ಟಿದ್ದಾರೆಂದು ಒಂದು ಉದಾಹರಣೆ ರೆಕಾರ್ಡ್‌ನಲ್ಲಿ ಇದೆಯೆಂದು ನೀವು ಹೇಳಿದರೆ ನಾನು ಈ ಸಮಯದಲ್ಲಿ ಮಾತನಾಡುವುದನ್ನು ನಿಲ್ಲಿಸಿ, ತಾವು ಹೇಳಿದಂಥ ಪ್ರಾಯಶ್ಚಿತ್ತವನ್ನು ನಾನು ತೆಗೆದುಕೊಳ್ಳುತ್ತೇನೆ. ಇವತ್ತು ಸರ್ಕಾರವನ್ನು ಟೀಕೆ ಮಾಡುವ ಪ್ರಶ್ನೆಯಲ್ಲ. \ ಪ್ರಾಮಾಣಿಕವಾಗಿ ಇಲ್ಲಿ ಕುಳಿತಾಗ ಸತ್ಯವಾದ ಸಂಗತಿಗಳನ್ನು ಹೇಳಬೇಕಾಗುತ್ತದೆ. ಬರಗಾಲಕ್ಕೆ ತುತ್ತಾಗಿರತಕ್ಕಂಥ ಕೃಷಿ ಕಾರ್ಮಿಕರು, ರೈತರು ಏನಿದ್ದಾರೆ ಅವರಿಗೆ ಕನಿಷ್ಟ ಪಕ್ಷ ತಮ್ಮ ಸರಕಾರದ ಅವಧಿಯಲ್ಲಿ ತತ ಕ್ಷಣ ಸಾಲ–ಸೋಲ ಮಾಡಿಕೊಂಡು ಬೋರ್‌ವೆಲ್, ಬಾವಿಯನ್ನು ಮಾಡಿಸಿಕೊಂಡು, ನೀರಿದ್ದೂ ವಿದ್ಯುಚ್ಛಕ್ತಿ ಇಲ್ಲದೆ ಎರಡು ಮೂರು ವರ್ಷಗಳಿಂದ ಅದಕ್ಕಾಗಿ ಕಾಯುತ್ತಿರುವವರಿಗೆ ವಿದ್ಯುಚ್ಛಕ್ತಿಯನ್ನು ಕೊಡಿಸುವ ಒಂದು ಮಹತ್ಕಾರ್ಯವನ್ನು ತಾವುಗಳು ಮಾಡಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿದ ಒಂದು ಸಮಸ್ಯೆ ಸುಮಾರು ಒಂದೂವರೆ ತಿಂಗಳ ಹಿಂದೆ ನಮ್ಮ ಗಮನಕ್ಕೆ ಬಂದಿದೆ. ಈ ಕುರಿತು ಯಾರ್‍ಯಾರು ಪರಿಶಿಷ್ಟರು ಇದ್ದಾರೆ, ಅಂತಹವರಲ್ಲಿ ಯಾರ್‍ಯಾರು ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಲು ಕಾಯುತ್ತಿದ್ದಾರೆ ಅವರಿಗೆ ಆದ್ಯತೆಯ ಮೇಲೆ ವಿದ್ಯುತ್‌ನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆ ಬಗ್ಗೆ ಇರುವ ಅಂಕಿ ಅಂಶಗಳನ್ನು ಮಾನ್ಯ ಸದಸ್ಯರಿಗೆ ಒಂದು ತಿಂಗಳೊಳಗಾಗಿ ಕೊಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕರ್ನಾಟಕ ರಾಜ್ಯದಲ್ಲಿ ವೀರೇಂದ್ರ ಪಾಟೀಲರ ಸರಕಾರ ಬಂದಿರತಕ್ಕಂಥದ್ದು ರೈತರ ಪರವಾಗಿ ಇಲ್ಲ, ಅದು ರೈತವಿರೋಧಿಯಾಗಿದೆ. ಮಾನ್ಯ ಶ್ರೀ ಯಡಿಯೂರಪ್ಪನವರು ಮತ್ತು ಅವರ ಸಂಗಡಿಗರು ಮಾತ್ರ ರೈತರ ಪರವಾಗಿ ಹೋರಾಡುತ್ತಿದ್ದಾರೆ ಎಂಬ ಕೂಗು ಎಬ್ಬಿಸುತ್ತಾ ಇದ್ದಾರೆ, ನಾನು ಕಾಂಗ್ರೆಸ್‌ನಲ್ಲಿ ಇರಲಿ, ಇಲ್ಲದಿರಲಿ, ಎಂದಿಗೂ ನೀತಿಗೆ ವಿರೋಧವಾಗಿ ನಡೆದುಕೊಂಡಿಲ್ಲ. ಆದರೆ ರೈತರ ಪರವಾಗಿ ಯಾರೂ ವಿರೋಧ ಮಾಡುತ್ತಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಯಡಿಯೂರಪ್ಪನವರು, ರೈತರು ಎರಡು ಮೂರು ವರ್ಷಗಳಿಂದಲೂ ವಿದ್ಯುತ್‌ಗಾಗಿ ಅರ್ಜಿಯನ್ನು ಹಾಕಿಕೊಂಡು ಕಾಯುತ್ತಾ ಇದ್ದಾರೆ. ಸಾಲದಲ್ಲಿ ಮುಳುಗಿದ್ದಾರೆ ಎಂದು ಹೇಳುತ್ತಿದ್ದಾರೆ. ೧೯೮೨–೮೩ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಇಲಾಖೆಗಾಗಿ ೧೦೧ ಕೋಟಿ ರೂಪಾಯಿಗಳನ್ನು ಮಾನ್ಯ ಗುಂಡೂರಾಯರ ಸರಕಾರದವರು ಇಟ್ಟಿದ್ದರಲ್ಲಿ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರು. ೧೯೮೪–೮೫ರಲ್ಲಿ ೮೭ ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ೮೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದಾದ ಮೇಲೆ ೧೯೮೭–೮೮ನೇ ಇಸವಿಯಲ್ಲಿ ೧೩೯ ಕೋಟಿ ರೂಪಾಯಿಗಳನ್ನು ಇಟ್ಟು ೭೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೧೯೮೮–೮೯ರಲ್ಲಿ ೨೧೦ ಕೋಟಿ ರೂಪಾಯಿಗಳನ್ನು ಇಟ್ಟು ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗೆ ಮಾನ್ಯ ಸದಸ್ಯರು ರೈತರ ಬಗ್ಗೆ ಮಾತನಾಡುತ್ತಾ ರೈತರಿಗೆ ಕೊಡಿ, ಇಲ್ಲದಿದ್ದರೆ ರೈತರು ಹೋರಟು ಹೋಗುತ್ತಾ ಇದ್ದಾರೆ ಎಂದೆಲ್ಲಾ ಹೇಳುತ್ತಿರುವುದು ಬರೀ ಬೊಬ್ಬೆ ಮಾತು. ಇದು ಒಂದು ರೀತಿಯಲ್ಲಿ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸತಕ್ಕಂಥಾದ್ದು ಎಂದು ಹೇಳಬೇಕಾಗುತ್ತದೆ. ಅವರಿಗೆ ರೈತರ ಬಗ್ಗೆ ಕಳಕಳಿ ಇರಬಹುದು. ಈ ದೇಶಕ್ಕೆ ಅನ್ನ ಕೊಡತಕ್ಕಂಥ ರೈತರಿಗೆ ಸೌಲಭ್ಯಗಳನ್ನು ಕೊಡಬಾರದು ಎಂದು ಯಾರೂ ಹೇಳುವುದಿಲ್ಲ. ವಿದ್ಯುಚ್ಛಕ್ತಿಗಾಗಿ ಅರ್ಜಿ ಹಾಕಿದವರಿಗೆ ಅದನ್ನು ಒದಗಿಸತಕ್ಕದ್ದು ಯಾವುದೇ ಸರಕಾರದ ಮೊದಲ ಕರ್ತವ್ಯವಾಗಿರಬೇಕು. ಆದರೆ ಕಳೆದ ಆರು–ಏಳು ವರ್ಷಗಳಿಂದಲೂ ನಮ್ಮನ್ನು ರಾಜ್ಯಭಾರ ಮಾಡಿರತಕ್ಕಂಥವರು ಯಾವ ರೀತಿಯಲ್ಲಿ ಯಾವ ದುಟ್ಟಕ್ಕೆ ವಿದ್ಯುತ್ ಸರಬರಾಜನ್ನು ತಂದಿಟ್ಟಿದ್ದಾರೆ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಸುಮಾರು ೨೬ ಸಾವಿರ ಮಿಲಿಯನ್ ಯೂನಿಟ್ ನಮಗೆ ಬೇಕಾಗಿರುವುದು. ಆದರೆ ನಮ್ಮಲ್ಲಿ ತಯಾರಾಗತಕ್ಕಂಥಾದ್ದು ೧೬ ಸಾವಿರ ಮಿಲಿಯನ್ ಯೂನಿಟ್‌ಗಳು

ಮಾತ್ರ. ಇದಕ್ಕೆ ಯಾರು ಕಾರಣರು ? ಇವರೇ ಕಾರಣರಲ್ಲವೆ ? ಇವನ್ನೆಲ್ಲಾ ಬಿಟ್ಟು ರೈತರ ಪರವಾಗಿ ಇರತಕ್ಕಂಥ ಒಂದು ಗಂಭೀರ ಪ್ರಶ್ನೆಯನ್ನು ರಾಜಕೀಯವಾಗಿ ಮಾಡಿಕೊಳ್ಳುವುದು ಬೇಡ. ಎಲ್ಲರೂ ಸೇರಿ ಆ ಬಗ್ಗೆ ಪರಿಹಾರ ಕಂಡುಕೊಳ್ಳೋಣ ಎಂದು ಹೇಳ ಬಯಸುತ್ತೇನೆ. ಈ ಸದನದಲ್ಲಿ ಯಾರು ಬೇಕಾದರೂ ರೈತರ ಬಗ್ಗೆ ಮಾತನಾಡಿದರೆ ನಾನು ಸಹಿಸಿಕೊಳ್ಳುತ್ತೇನೆ. ಆದರೆ ಮಾನ್ಯ ಸದಸ್ಯರುಗಳು ಈ ರೀತಿಯಾಗಿ ಕೂಗು ಎಬ್ಬಿಸುವುದನ್ನು ಸಹಿಸಲಾಗುವುದಿಲ್ಲ. ಅವರಿಗೂ ರೈತರ ಬಗ್ಗೆ ಕಳಕಳಿ ಇರಬಹುದು. ರೈತರ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತೀರಿ, ರೈತರು ಮುಳುಗಡೆಯಾಗುತ್ತಿದ್ದಾರೆ ಎಂದು ಹೇಳುತ್ತೀರಿ, ರೈತರನ್ನು ಉಳಿಸಬೇಕೆಂದು ಹೇಳುತ್ತೀರಿ. ಹಾಗಾದರೆ ಕೇಂದ್ರದಲ್ಲಿ ನಿಮ್ಮ ಮಾನ್ಯ ಅಡ್ವಾನಿ ಸಾಹೇಬರು, ಅಟಲ್‌ಬಿಹಾರಿ ವಾಜ್‌ಪೈ ಸಾಹೇಬರು, ಯಾವಾಗಲಾದರೂ ಅಕ್ಕಿ ಬೆಲೆಯನ್ನು ೫೦ ಪೈಸೆ ಜಾಸ್ತಿ ಮಾಡಿದರೆ ಅಲ್ಲಿ ಗ್ರಾಹಕರ ಪರವಾಗಿ ಬೋರ್ಡ್ ಹಾಕಿಕೊಂಡು ನಿಂತುಕೊಳ್ಳುತ್ತಾರೆ. ಏಕೆ ಬೆಲೆ ಜಾಸ್ತಿ ಮಾಡಿದ್ದೀರಿ ಎಂದು ಕೇಳುತ್ತಾರೆ. ಇಂಥ ಒಂದು ದ್ವಂದ್ವ ನೀತಿಯು ನಿಮ್ಮಲ್ಲಿ ಇದೆಯಲ್ಲ ಅದು ಕೇವಲ ರಾಜಕೀಯ ಎಂದು ಹೇಳದೆ ಬೇರೆ ಮಾರ್ಗವಿಲ್ಲ.

ಶ್ರೀ ಡಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರಾಗಿರತಕ್ಕಂಥ ಯಡಿಯೂರಪ್ಪನವರು ಕೆಲವು ವಿಚಾರಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಆದರೆ ಈ ಸದನದಲ್ಲಿ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಒಂದು ವಿಚಾರವನ್ನು ಎತ್ತಿರುವುದರಿಂದಾಗಿ ಕೆಲವು ಮಾತನ್ನು ನಾನು ಹೇಳಬೇಕಾಗುತ್ತದೆ. ೧೯೮೩ನೇ ಇಸವಿಯಿಂದ ೧೯೮೯ರ ವರೆಗೆ ಆಡಳಿತ ಮಾಡಿದಂಥ ಸರಕಾರದವರು ಜನರಿಗೆ ಅನ್ಯಾಯವನ್ನು ಮಾಡಿದರು ಎನ್ನುವ ಮಾತನ್ನು ಅವರು ಹೇಳಿದರು. ಐ. ಪಿ. ಸೆಟ್‌ಗಳಿಗೆ ಎನರ್‌ಜೈಸ್ ಮಾಡುವ ವಿಚಾರದಲ್ಲಿ ಭಾರಿ ಅನ್ಯಾಯ ವಾಯಿತು ಎಂದು ಹೇಳಿದರು. ಈ ವಿಚಾರದಲ್ಲಿ ಬಹುಶಃ ಅವರಿಗೆ ಹೆಚ್ಚು ವಿಚಾರಗಳು ಗೊತ್ತಿಲ್ಲ ಎಂದು ಕಾಣುತ್ತದೆ. ಈ ಬಗ್ಗೆ ನನಗೆ ಬಹಳ ದುಃಖವಾಗುತ್ತಾ ಇದೆ. ೧೯೮೩ನೇ ಇಸವಿಯವರೆಗೆ ಒಂದು ವರ್ಷಕ್ಕೆ ಕೇವಲ ೧೫-೧೬ ಸಾವಿರ ಐ. ಪಿ. ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇದ್ದರು. ಅದು ಬಹಳ ಜಾಸ್ತಿ ಎಂದರೆ ೧೪ ಸಾವಿರದವರೆಗೆ ಇತ್ತು. ಆದರೆ ನಾವು ೧೯೮೬-೮೯ರ ವರೆಗೆ ೪೫-೫೦ ಸಾವಿರ ಐಪಿ ಸೆಟ್‌ಗಳಿಗೆ ಎನರ್‌ಜೈಸ್ ಮಾಡಿದ್ದೇವೆ ಎಂಬ ಮಾತನ್ನು ಮಾನ್ಯ ಸದಸ್ಯರು ತಿಳಿದುಕೊಂಡಿಲ್ಲ ಎಂದು ಕಾಣುತ್ತದೆ. ಮಾನ್ಯ ಸದಸ್ಯರು ಮಾತನಾಡುವಾಗ ಇವನ್ನು ತಿಳಿದುಕೊಂಡು ಮಾತನಾಡಿದರೆ ಚರ್ಚೆಗೆ ತೂಕ ಬರುತ್ತದೆಂದು ತಿಳಿದಿದ್ದೇನೆ. ಅಲ್ಲದೆ ಈ ಸದನದ ಸದಸ್ಯರಲ್ಲದ ವಾಜಪೇಯಿ, ಆಡ್ವಾನಿಯವರು ಬೋರ್ಡ್ ಹಿಡಿಕೊಂಡು ಮಾತನಾಡುತ್ತಾರೆನ್ನುವುದು ರೆಕಾರ್ಡ್‌ನಲ್ಲಿ ಹೋಗುವುದಕ್ಕೆ ಬಿಡಲು ಆಗುವುದಿಲ್ಲ. ಅವರು ನಮ್ಮ ರಾಷ್ಟ್ರದ ಮುಖಂಡರಿದ್ದಾರೆ. ಈಗಾಗಲೇ ನಾನು ಮಾನ್ಯ ಮಲ್ಲಾರಿಗೌಡ ಪಾಟೀಲರಿಗೂ ಮಾನ್ಯ ಸಭಾನಾಯಕರಿಗೂ ರಿಕ್ವೆಸ್ಟ್ ಮಾಡಿ ಕೊಂಡಿದ್ದೇನೆ. ಈ ಸದಸ್ಯರು ಬಹಳ ಅವಸರದಲ್ಲಿದ್ದಾರೆ ದಯವಿಟ್ಟು ಅವರನ್ನು ಸೇರಿಸಿಕೊಂಡುಬಿಡಿ, ನಮಗೂ ಅನುಕೂಲವಾಗುತ್ತದೆ. ನಾವು ವಿರೋಧಪಕ್ಷದಲ್ಲಿ ಸ್ವಲ್ಪ ರಚನಾತ್ಮಕ ಸಲಹೆಗಳನ್ನು ಸರ್ಕಾರಕ್ಕೆ ಕೊಡಬಹುದೆಂದು ಹೇಳಿದ್ದೇನೆ. ತಾವಾದರೂ ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಸಿಂಧ್ಯರವರು ಹೇಳಿರುವುದು ರೆಕಾರ್ಡ್‌ಗೆ ಹೋಗಿದೆ. ಮಾನ್ಯ ಸಭಾಧ್ಯಕ್ಷಿಣಿಯವರೆ ಮಾನ್ಯ ಸಿಂಧ್ಯಾರವರು ಹೇಳಿದರು, ಅವರು ಪ್ರಗತಿಪರವಾದ ಕೆಲಸ ಮಾಡೇ ಇಲ್ಲವೆಂದು ನಾನು ಹೇಳಿದೆನೆಂದು ಆ ರೀತಿ ನಿರ್ಣಾಮ ಮಾಡಿದರೆಂದು ನಾನು ಹೇಳಲಿಲ್ಲ ಅಲ್ಪಸ್ವಲ್ಪ ಮಾಡಿರಬೇಕು, ಆದಕ್ಕೆ ಜನ ನಿಮಗೆ ೭ ವರ್ಷ ವೋಟ್ ಕೊಟ್ಟಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಎರಡು ವರ್ಷದಿಂದ ಜನ ಅಲೆಯುತ್ತಿದ್ದಾರೆ. ಆದ್ದರಿಂದ ಅವರಿಗೆ ಕೊಟ್ಟೇಕೊಡಬೇಕೆನ್ನುವ ವಿಚಾರದಲ್ಲಿ ನಾನು ಹೇಳಿದೆ. ಕೊಡುವುದಕ್ಕೆ ಆಗುವುದಿಲ್ಲ ಎಂದು ಏಕೆಂದರೆ, ಸರ್ಕಾರ ಬಂದು ಇನ್ನೂ ೧೫೦ ದಿವಸವಾಗಿದೆ. ೬೭ ಸಾವಿರ ಐಪಿ ಸೆಟ್‌ಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆ. ಚರ್ಚೆಯಲ್ಲಿ ಯಡಿಯೂರಪ್ಪನವರು ಹೇಳಿದರೂ ಕೊಡಲಿಲ್ಲ, ಸರ್ಕಾರವನ್ನು ಬೈದರು ಎಂದು ನಾಳೆ ಪತ್ರಿಕೆಯಲ್ಲಿ ಬರುತ್ತದೆ, ಆದ್ದರಿಂದ ಜನ, ಈ ಸರ್ಕಾರ ರೈತ ವಿರೋಧಿ ಸರ್ಕಾರ ಎಂದು ತೀರ್ಮಾನ ಮಾಡಿಕೊಳ್ಳುವುದು ಬೇಡ. ರೈತರ ಬಗ್ಗೆ ಕಾಳಜಿ ನಮಗಿದೆ. ವಿದ್ಯುತ್ ಇಲಾಖೆ ಯಾವ ಮಟ್ಟಕ್ಕೆ ಹೋಗಿದೆ ಎಂದು ಹೇಳಿದೆನೇ ಹೊರತು ಬೇರೇನೂ ಹೇಳಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಸದಸ್ಯರು ಮಾತನಾಡುತ್ತಾ, ಶ್ರೀ ವಾಜಪೇಯಿ ಶ್ರೀ ಅಡ್ವಾನಿಯವರ ಬಗ್ಗೆ ಹೇಳಿದರು, ನಾನು ತಪ್ಪು ಎಂದು ಹೇಳುವುದಿಲ್ಲ. ಹೇಳುವುದಕ್ಕೆ ಅವರಿಗೆ ಸ್ವಾತಂತ್ರ್ಯ ಇದೆ, ಜನ ತೀರ್ಮಾನ ಮಾಡಲಿ. ಆದರೆ ಒಂದು ಮಾತು. ಇವತ್ತು ಬಿಜೆಪಿ ಕೇಂದ್ರ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಈ ದೇಶದ ರೈತ ಸ್ವಾತಂತ್ರ್ಯ ಬಂದು ೪೩ ವರ್ಷಗಳಲ್ಲಿ

ಶೋಷಣೆಗೊಳಗಾಗಿ, ಅವನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗದಿರುವ ಕಾರಣ ಅವನ ಸಾಲ ಮನ್ನಾ ಆಗಿ ಯೋಗ್ಯ ಬೆಲೆಯೂ ಸಿಗಬೇಕು ಎಂದು ಹೇಳಿದ್ದೇವೆ, ರಾಜ್ಯದ ಪ್ರಣಾಳಿಕೆಯಲ್ಲೂ ಹೇಳಿದ್ದೇವೆ. ಯಾರು ತಾವು ಮಾಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿ ಆಮೇಲೆ ಅದನ್ನು ತಿರುಗ ಮುರುಗ ಮಾಡಿ ಕೇಂದ್ರದ ಕಡೆ ತೋರುತ್ತಿದ್ದಾರೋ ಅವರು ಇದನ್ನು ಕಾರ್ಯರೂಪಕ್ಕೆ ತರಬೇಕೆಂಬ ಒತ್ತಾಯವನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಹೇಳುತ್ತಿದ್ದೇನೆ. ರಾಜ್ಯದ ರೈತರ ಬಗ್ಗೆ ಯಾರು ಮಾತನಾಡಬೇಕು, ಯಾರು ಮಾತನಾಡಬಾರದು ಎಂದು ಜನ ಬರುವ ದಿನಗಳಲ್ಲಿ ತೀರ್ಮಾನ ಮಾಡುತ್ತಾರೆ. ಆದರೆ ಇಲ್ಲಿ ನಿಂತಾಗ ನಮ್ಮ ಹಲವಾರು ಜಿಲ್ಲೆಗಳಂತೆ, ಬರಗಾಲಕ್ಕೆ ತುತ್ತಾದ ಬಿಜಾಪುರ ಜಿಲ್ಲೆಯ ಯಾವ ಬೋರ್ ವೆಲ್‌ಗಳಲ್ಲಿ, ಬಾವಿಗಳಲ್ಲಿ ನೀರನ್ನೇ ತೆಗೆದುಕೊಂಡಿಲ್ಲ, ಮೋಟಾರ್ ಕೂರಿಸಿಲ್ಲ ಅಂತಹ ಕಡೆ ವಿದ್ಯುತ್ ದರದ ಮೇಲೆ ಬಡ್ಡಿ ಸುಸ್ತಿ ಬಡ್ಡಿ ಹಾಕಿ ಸಾವಿರಾರು ರೂಪಾಯಿಗಳ ಬಿಲ್ ಮಾಡಿದಂತಹ ಪ್ರಯತ್ನ ನಡೆದಿದೆ, ಬಿಜಾಪುರದ ಇಂಡಿ, ಸಿಂಧಗಿ, ಜಮಖಂಡಿ ತಾಲೂಕಿನ ಕೆಲವು ಭಾಗದಲ್ಲಿ ನಾನು ರೈತರ ಜಾಥಾಗೆ ಹೋದಾಗ ಅಲ್ಲಿ ನಾಲ್ಕೈದು ವರ್ಷಗಳಿಂದ ಸತತವಾಗಿ ಮಳೆಯಾಗದೆ ಕಂದಾಯ ಮನ್ನಾ ಮಾಡಿರುವ ಪ್ರದೇಶದಲ್ಲೂ ಸಹ ವಿದ್ಯುತ್ ಮಂಡಲಿಯವರು ಸಾವಿರಾರು ರೂಪಾಯಿ ಸುಸ್ತಿ ಬಡ್ಡಿ ಹಾಕಿದ್ದಾರೆ ಅವನ ಪೂರ್ಣ ಸಾಲ ಮನ್ನಾ ಮಾಡುವುದಕ್ಕೆ ನಿಮ್ಮಿಂದ ಆಗದಿದ್ದರೂ ತಾವು ಯಾರನ್ನಾದರೂ ಕಳಿಸಿಕೊಟ್ಟು ತನಿಖೆ ಮಾಡಿಸಿ ಕನಿಷ್ಟ ಏನು ಸುಸ್ತಿ ಬಡ್ಡಿ ಹಾಕಿದ್ದಾರೋ ಅದನ್ನಾದರೂ ತಪ್ಪಿಸಿ ರೈತರನ್ನು ಉಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ ಮನ್ನಾ ಮಾಡಿ ಎಂದು ನಾನು ಕೇಳುತ್ತಿಲ್ಲ. ನಾನು ಊರ ಹೆಸರು ಹೇಳಿದೆ. ರಾಜ್ಯದಲ್ಲಿ ಇಂಥ ಬರಗಾಲದ ಪರಿಸ್ಥಿತಿ ಅನೇಕ ಕಡೆ ಇದೆ. ಅಂತಹ ಸ್ಥಳಗಳಲ್ಲಿ ಬಾವಿಯಲ್ಲಿ ನೀರಿರದಿದ್ದರೂ ವಿದ್ಯುತ್‌ಬಿಲ್ ಮೇಲೆ ಬಡ್ಡಿ, ಸುಸ್ತಿಬಡ್ಡಿ ಹಾಕಿ ಬಿಲ್ ಕೊಟ್ಟಿದ್ದಾರೆ. ನಿಮಗೆ ನಿಜಕ್ಕೂ ಕಳಕಳಿ ಇದ್ದರೆ ಅಲ್ಲಿ ನೀರು ಬಿದ್ದಿಲ್ಲ ಎಂದು ಮನವರಿಕೆ ಆದರೆ, ಅಂತಹ ರೈತರನ್ನು ಸುಸ್ತಿಬಡ್ಡಿಯಿಂದ ವಿಮುಕ್ತಿಗೊಳಿಸಿ. ಅವನು ನೆಮ್ಮದಿಯಾಗಿ ಬದುಕುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿದೆ.

ನಿಜವಾಗಿ ನಿಮಗೆ ಬಡವರ ಬಗ್ಗೆ ಕಳಕಳಿ ಇದ್ದರೆ ಆ ರೀತಿ ಮಾಡಿ ಎನ್ನುವ ಮಾತನ್ನು ಹೇಳುತ್ತೇನೆ. ನಿಮ್ಮನ್ನು ನೋಡಿದ ಮೇಲೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. "ಬರುತ್ತಾ ಬರುತ್ತಾ ರಾಜನ ಕುದುರೆ ಕತ್ತೆ ಆಯಿತು" ಎನ್ನುವ ಹಾಗೆ, ಹಿಂದೆ ಇದ್ದಂಥ ಸರ್ಕಾರ ಮಾಡಿದಂಥ ಎಲ್ಲಾ ಕಾರ್ಯಕ್ರಮಗಳನ್ನು ಕೈಬಿಡುತ್ತಾ ಹೋಗುವಂಥ ಪ್ರಯತ್ನ ಮಾಡುತ್ತೀರಿ. ಯಾವುದೇ ಒಂದು ಹೊಸ ಕಾರ್ಯಕ್ರಮ ಕೂಡಾ ಇಲ್ಲ. ಇವತ್ತು ಈ ರಾಜ್ಯದಲ್ಲಿ ವಿದ್ಯಾ... ಮಾಡುತ್ತಿರುವಂಥ ಪ್ರೈಮರಿ, ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿ ಪುಸ್ತಕಗಳನ್ನು ಕೊಡುವಂಥ ವ್ಯವಸ್ಥೆ ಇತ್ತು. ಉಚಿತವಾಗಿ ಪುಸ್ತಕಗಳನ್ನು ಕೊಡುವಂಥ ವ್ಯವಸ್ಥೆ ಇದೆ. ಈಗಾಗಲೇ ಪತ್ರಿಕೆಯಲ್ಲಿ ಅದು ಪ್ರಕಟವಾಗಿದೆ. ಈಗಿರುವಂಥ ನಿಮ್ಮ ಸಿದ್ಧತೆಯನ್ನು ನೋಡಿದಾಗ ಈ ವರ್ಷ ಶಾಲೆಗಳು ಪ್ರಾರಂಭವಾಗಿ ಮೂರು ನಾಲ್ಕು ತಿಂಗಳಾದರೂ ಸಹ ನೀವು ಪುಕ್ಕಟೆಯಾಗಿ ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲ್ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪುಸ್ತಕಗಳನ್ನು ಕೊಡುವ ನಂಬಿಕೆ ನಮಗೆ ಇಲ್ಲ. ಏಕೆಂದರೆ, ಈಗಾಗಲೇ ಪ್ರಿಂಟಿಂಗ್ ವ್ಯವಸ್ಥೆ ಆಗಬೇಕಾಗಿತ್ತು. ಅದರ ಬಗ್ಗೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಇವತ್ತಿನವರೆಗೂ ತಾವು ಮಾಡುತ್ತಿಲ್ಲ. ಅದಕ್ಕೋಸ್ಕರ ಏನಾದರೂ ನಿಶ್ಚಿತವಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಸಮಯದಲ್ಲಿ ಈ ವರ್ಷ ಶಾಲೆಗಳು ಪ್ರಾರಂಭವಾಗುವಂಥ ಸಮಯದಲ್ಲಿ ಪುಸ್ತಕಗಳನ್ನು ಕೊಡುವ ಬಗ್ಗೆ ಭರವಸೆಯನ್ನು ಕೊಡುತ್ತಾರೆಯೋ ? ಏಕೆಂದರೆ, ಹೋದ ವರ್ಷದಲ್ಲೂ ಸಹಾ ಮೂರು ತಿಂಗಳು, ನಾಲ್ಕು ತಿಂಗಳು ಆದ ಮೇಲೆ ಅನೇಕ ತರಗತಿಗಳ ಮಕ್ಕಳಿಗೆ ಪುಸ್ತಕ ಸಿಕ್ಕಿದೆ. ಅದಕ್ಕೋಸ್ಕರವಾಗಿ ಶಾಲೆಗಳು ಪ್ರಾರಂಭವಾದ ತಕ್ಷಣ ಈ ರೀತಿ ಉಚಿತ ಪುಸ್ತಕಗಳನ್ನು ಕೊಡುವ ವ್ಯವಸ್ಥೆ ಏನು ಇದೆ. ಅದನ್ನು ವಿತರಣೆ ಮಾಡಲಿಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಭರವಸೆಯನ್ನು ಕೊಡಬಲ್ಲರೇ, ನಿಮ್ಮ ಸರ್ಕಾರ ಈ ರೀತಿ ಭರವಸೆಯನ್ನು ಕೊಡಬಲ್ಲುದೇ ? ಈ ರೀತಿ ನಿರ್ದಿಷ್ಟವಾದಂಥ ಉತ್ತರವನ್ನು ನಾನು ನಿಮ್ಮ ಸರ್ಕಾರದಿಂದ ನಿರೀಕ್ಷೆ ಮಾಡುತ್ತೇನೆ. ಇನ್ನು ಡೈರೆಕ್ಟರ್, ಪ್ರಿಂಟಿಂಗ್ ಅಂಡ್ ಸ್ಟೇಷನರಿ, ಬೆಂಗಳೂರು, ಇವರು ಟೆಕ್ಸ್ಟ್ ಬುಕ್‌ಗಳನ್ನು ಪ್ರಿಂಟ್ ಮಾಡುವಂಥ ಸೋಲ್ ಅಥಾರಿಟಿ ಇದ್ದಾರೆ. ಟೆಕ್ಸ್ಟ್ ಬುಕ್‌ಗಳನ್ನು ನೂರಾರು ಖಾಸಗಿ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಪ್ರಿಂಟ್ ಮಾಡಿಸತಕ್ಕಂಥ ವ್ಯವಸ್ಥೆ ಈ ರಾಜ್ಯದಲ್ಲಿದೆ. ಎಲ್ಲೆಲ್ಲಿ ಎಷ್ಟೆಷ್ಟು ಪುಸ್ತಕಗಳು ಪ್ರಿಂಟ್ ಆಗುತ್ತಿವೆ, ಏನು ಎನ್ನುವುದರ ಬಗ್ಗೆ ಯಾವುದೇ ವಿವರ ಇವತ್ತು ನಮಗೆ ಕಾಣುತ್ತಿಲ್ಲ. ೧೯೭೦–೭೧ ರಿಂದ ೧೯೮೯–೯೦ ರವರೆಗೆ ಎಷ್ಟು ಪುಸ್ತಕಗಳು ಯಾವ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಿಂಟ್ ಆಯಿತು ಎನ್ನುವುದು ಗೊತ್ತಾಗುತ್ತಿಲ್ಲ. ಕನ್‌ಸೆಷನ್ ರೇಟ್‌ನಲ್ಲಿ ಬರುವಂಥ ಪೇಪರನ್ನು ಯಾವ ಯಾವ ಪ್ರಿಂಟಿಂಗ್ ಪ್ರೆಸ್‌ಗೆ ಎಷ್ಟು ಕೊಟ್ಟನು ? ಅದು ಯಾವುದೂ ಕೂಡಾ ಆಡಿಟ್ ಆಗಿಲ್ಲ. ೧೯೮೦–೮೧ ರಿಂದ ೧೯೮೯–೯೦ ರ ವರೆಗೆ ಯಾವುದೇ ಆಡಿಟ್ ಆಗಿಲ್ಲ. ತಮಗೆ ಗೊತ್ತಿರುವ ಹಾಗೆ, ಈ

ಕನ್‌ಸೇಷನ್ ರೇಟ್‌ನಲ್ಲಿ ಅಂದರೆ ಒಂದು ಮೆಟ್ರಿಕ್ ಟನ್‌ಗೆ ಏಳು ಸಾವಿರ ರೂಪಾಯಿಯಂತೆ ಕಡಿಮೆ ದರದಲ್ಲಿ ಪೇಪರನ್ನು ತಂದು ಟೆಕ್ಸ್ಟ್ ಬುಕ್‌ಗಳನ್ನು ಮಾಡುವುದಕ್ಕೆ ನಾವು ಕೊಡುತ್ತೇವೆ. ಬಹಿರಂಗ ಮಾರುಕಟ್ಟೆಯಲ್ಲಿ ಒಂದು ಮೆಟ್ರಿಕ್ ಟನ್‌ಗೆ ಸಾವಿರದ ಐದುನೂರು ರೂಪಾಯಿ ಇದೆ. ಈಗ ನಮಗೆ ಬಂದಿರುವಂಥ ಮಾಹಿತಿ ಪ್ರಕಾರ ಈ ರೀತಿ ಕೋಟ್ಯಾಂತರ ರೂಪಾಯಿಗಳ ಪೇಪರ್‌ಗಳನ್ನು ಕೊಂಡು ಕೊಂಡು ಬಂದು ಖಾಸಗಿ ಮಾಲೀಕರು ಏನು ಇದ್ದಾರೆ, ಅವರಿಗೆ ಪೇಪರ್‌ಗಳನ್ನು ಕೊಟ್ಟು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಿಂಟ್ ಮಾಡಿಸುತ್ತಿದ್ದಾರೆ, ಯಾವುದೇ ಲೆಕ್ಕಬುಕ್ ಇಡದೇ ಕೋಟಿಗಟ್ಟಲೇ ಹಣವನ್ನು ಲೂಟಿ ಮಾಡುತ್ತಿದ್ದಾರೆ ಎನ್ನತಕ್ಕಂಥ ಆರೋಪ ಇದೆ. ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಇದರ ಬಗ್ಗೆ ಸಿ. ಓ. ಡಿ. ತನಿಖೆಯನ್ನು ಮಾಡಿಸುವುದಕ್ಕೆ ಸಿದ್ಧರಿದ್ದೀರಾ? ಇದನ್ನು ತಕ್ಷಣ ಮಾಡಿಸಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಗೌರ್ನಮೆಂಟ್ ಟೆಕ್ಸ್ಟ್ ಬುಕ್ಸ್, ಮೈಸೂರು, ಇಲ್ಲಿ ಸುಮಾರು ನಾಲ್ಕೂವರೆ ಲಕ್ಷ ರೂಪಾಯಿಗಳಿಗೆ ಒಂದರಂತೆ ಮೂರು ಹೊಸ ಪ್ರಿಂಟಿಂಗ್ ಮೆಷಿನ್‌ಗಳನ್ನು ಪ್ರಿಂಟಿಂಗ್ ಪ್ರೆಸ್‌ಗೆ ಬೇಕಾದ ಮೆಷಿನ್‌ಗಳನ್ನು ಕೊಂಡುಕೊಂಡರು. ಡೆಪ್ಯುಟಿ ಡೈರೆಕ್ಟರ್ ಆಫ್ ಪ್ರಿಂಟಿಂಗ್ ಪ್ರೆಸ್ ಮೈಸೂರು ಅವರು ಅದರಲ್ಲಿ ನಾಲ್ಕೂವರೆ ಐದು ಲಕ್ಷ ರೂಪಾಯಿ ಬೆಲೆ ಬಾಳುವಂಥ ಒಂದು ಪ್ರಿಂಟಿಂಗ್ ಮಿಷನನ್ನು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಪ್ರೈವೇಟ್ ಪ್ರಿಂಟಿಂಗ್ ಪ್ರೆಸ್‌ಗೆ ಕೊಟ್ಟಿದ್ದಾರೆ ನಾನು ಇದರ ಬಗ್ಗೆ ನೇರವಾದ ಆರೋಪವನ್ನು ಮಾಡುತ್ತಿದ್ದೇನೆ. ಮೂರು ಪ್ರಿಂಟಿಂಗ್ ಪ್ರೆಸ್ ಮೆಷಿನ್‌ಗಳನ್ನು ಸಂಬಂಧಪಟ್ಟವರು ಖರೀದಿ ಮಾಡಿ ಸುಮಾರು ಹದಿನಾಲ್ಕೂವರೆ-ಹದಿನೈದು ಲಕ್ಷ ರೂಪಾಯಿಗಳಿಗೆ ತಂದಂಥ ಮೆಷಿನ್‌ಗಳನ್ನು ಈ ರೀತಿ ಮಲ್ಲೇಶ್ವರಂನಲ್ಲಿರುವ ಪ್ರಿಂಟಿಂಗ್ ಪ್ರೆಸ್‌ಗೆ ಸುಮಾರು ೭೮-೮೦ ಲಕ್ಷ ರೇಟ್‌ನ ಪುಸ್ತಕಗಳು ಕಳೆದ ವರ್ಷ ಪ್ರಿಂಟ್ ಆಯಿತು. ಅಲ್ಲಿ ಸರ್ಕಾರದ ಮೆಷಿನನ್ನು ಇಟ್ಟು ಪ್ರಿಂಟ್ ಮಾಡಿಸುತ್ತಿದ್ದಾರೆ. ಇದರ ಬಗ್ಗೆ ತಾವು ಸಿ. ಓ. ಡಿ. ತನಿಖೆಯನ್ನು ಮಾಡಿಸುತ್ತೀರಾ? ಈ ರೀತಿ ಕಡಿಮೆ ದರದಲ್ಲಿ ಎಷ್ಟು ಪೇಪರನ್ನು ಖರೀದಿ ಮಾಡಿದರು? ಯಾವ ಪ್ರೆಸ್‌ಗೆ ಎಷ್ಟು ಪೇಪರನ್ನು ಕೊಟ್ಟರು? ಅದರಲ್ಲಿ ಎಷ್ಟು ಪುಸ್ತಕಗಳು ಪ್ರಿಂಟ್ ಆಗಿ ಬರುತ್ತಿವೆ? ಇದರ ಬಗ್ಗೆ ಲೆಕ್ಕದ ಬುಕ್ ಇದೆಯೇ? ಇದರ ಬಗ್ಗೆ ಸರಿಯಾಗಿ ಆಡಿಟ್ ಆಗಿದೆಯೇ? ಮತ್ತೆ ಡೆಪ್ಯುಟಿ ಡೈರೆಕ್ಟರ್, ಡೈರೆಕ್ಟರ್‌ಗಳು ಸೇರಿಕೊಂಡು ಬೇನಾಮಿ ಪ್ರಿಂಟಿಂಗ್ ಪ್ರೆಸ್‌ಗಳನ್ನು ಮೈಸೂರಿನಲ್ಲಿ ಇಟ್ಟುಕೊಂಡಿದ್ದಾರೆ. ಮತ್ತೆ ಟೆಕ್ಸ್ಟ್ ಬುಕ್‌ಗಳನ್ನು ಪ್ರಿಂಟ್ ಮಾಡುವುದಕ್ಕೆ ಎಂಥ ಪೇಪರನ್ನು ಕೊಡುವುದು ಎಂದರೆ, ಇವರು ರಿಯಾಯಿತಿ ದರದಲ್ಲಿ ಕೊಂಡು ಕೊಂಡಂಥ ಪೇಪರನ್ನು ಒಂದು ಮೆಟ್ರಿಕ್ ಟನ್‌ಗೆ ಏಳೂವರೆ ಸಾವಿರ ರೂಪಾಯಿ ದರದಲ್ಲಿ ತಂದಂಥ ಪೇಪರನ್ನು ಪ್ರಿಂಟ್‌ಗೆ ಕೊಡುವುದು. ಅದನ್ನು ಬಹಿರಂಗ ಮಾರುಕಟ್ಟೆಯಲ್ಲಿ ಸಾವಿರದ ಐದುನೂರು ರೂಪಾಯಿಗಳಿಗೆ ಮಾರಿಕೊಳ್ಳುವುದು. ಎಷ್ಟು ಪುಸ್ತಕ ಬಂತು, ಎಷ್ಟು ಪುಸ್ತಕ ಹೋಯಿತು ಎನ್ನುವುದಕ್ಕೆ ಲೆಕ್ಕ ಇಲ್ಲ, ಜವಾಬ್ ಇಲ್ಲ. ಆಡಿಟ್ ಇಲ್ಲ, ಹೇಳುವವರು ಇಲ್ಲ, ಕೇಳುವವರೂ ಇಲ್ಲ. 'ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ' ಎನ್ನುವ ಗಾದೆಯ ಹಾಗೆ ಆಗಿದೆ.

(ಗೊಂದಲ)

ಕರಿಯಣ್ಣನವರೇ ನಾನು ಕನ್ನಡದಲ್ಲಿ ಹೇಳುತ್ತಿದ್ದೇನಲ್ಲ, ನಾನು ನೀವು ಮಾಡಿದಿರಿ ಎಂದು ಹೇಳಿದನೇ.

ಶ್ರೀ ಕರಿಯಣ್ಣ.—ತಾವು ಅಧಿಕಾರಕ್ಕೆ ಸಪ್ಪೋರ್ಟ್ ಮಾಡದೆ ಇರಬೇಕು,

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನಿಮ್ಮ ಗವರ್ನಮೆಂಟ್ ಬಗ್ಗೆ ಹೇಳುತ್ತಿಲ್ಲ ನಾವು ಯಾರೂ ಆಗಿಲ್ಲ. ಎಲ್ಲದಕ್ಕೂ ಮನ ಬಂದಂತೆ ಮಾತನಾಡಿದರೆ ಹೇಗೆ. ಶ್ರೀ ಕರಿಯಣ್ಣ ನನ್ನ ಬಗ್ಗೆ ಏಕೆ ಹೇಳುತ್ತಿದ್ದೀರಿ

ಶ್ರೀ ಬಿ. ಎಸ್. ಯಡಿಯೂರಪ್ಪ. ನಿಮ್ಮ ಸರ್ಕಾರದ ಬಗ್ಗೆ ನಾನು ಹೇಳುತ್ತಿದ್ದೇನೆಯೇ. ಸುಮ್ಮನೆ ಎಲ್ಲಕ್ಕೂ ಮಾತನಾಡುವುದು ಎಂದರೆ ನಾನು ಏನು ಹೇಳಿದೆ ಅಂದರೆ ೧೯೮೦ ರಿಂದ ೧೯೮೯ರವರೆಗೆ ನೀವು ಇರಲಿಲ್ಲ. ಅವತ್ತಿನಿಂದ ಇವತ್ತಿನವರೆಗೆ ಆಡಿಟ್ ಆಗಿಲ್ಲ ಎಂದು ಹೇಳಿದೆ. ಯಾವುದು ಪೇಪರ್‌ಅನ್ನು ಕೊಂಡಿರಿ. ಸಬ್ಸಿಡೈಸ್ಡ್ ರೇಟ್‌ನಲ್ಲಿ ಕೊಂಡಂತಹ ತೆಗೆದುಕೊಂಡಂತಹ ಪೇಪರ್‌ನ ಜವಾಬ್ ಖರ್ಚು ಇಲ್ಲ ಎಂದು ಹೇಳುತ್ತಿದ್ದೇನೆ, ಕೊಂಡಂತಹ ಪ್ರಿಂಟಿಂಗ್ ಮೆಷಿನ್‌ರಿಯನ್ನು ಒಂದನ್ನು ಮಲ್ಲೇಶ್ವರಂನಲ್ಲಿ ಖಾಸಗಿಯವರಿಗೆ ಕೊಟ್ಟು ಪ್ರಿಂಟ್ ಮಾಡಿಸುತ್ತಿದ್ದಾರೆ. ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಕೋಟಿಗಟ್ಟಲೇ ನೋಟ್ ಹೊಡೆಯುತ್ತಿದ್ದಾರೆ, ಇದನ್ನು ಸಿ.ಓ.ಡಿ. ತನಿಖೆ ಮಾಡಿ ಎಂದು ಹೇಳುತ್ತಿದ್ದೇನೆ. ಇವೊತ್ತು ಇದನ್ನು ಮಾಡಿಸುವುದನ್ನು ಬಿಟ್ಟು ಅದರ

ಜೊತೆ ಜೊತೆಗೆ ಇನ್ನೂ ಎಷ್ಟೆಷ್ಟು ತಿನ್ನುತ್ತಾರೆ. ಉಣ್ಣುತ್ತಾರೆ. ಅದನ್ನು ಸರಿಪಡಿಸುವುದಕ್ಕೆ ಆದರೆ ಮಾಡಿ ಇಲ್ಲದಿದ್ದರೆ ಜನ ನಿಮಗೆ ಬುದ್ಧಿ ಕಲಿಸುತ್ತಾರೆ, ನಾನು ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ ನಾನು ಇದನ್ನು ಪ್ರಸ್ತಾಪ ಮಾಡಿದಂತಹ ಹಿನ್ನೆಲೆ ಏನು ಅಂದರೆ, ಈ ವರ್ಷವಾದರೂ ಶಾಲೆಗಳು ಪ್ರಾರಂಭ ಆದ ದಿವಸ ಮಕ್ಕಳ ಕೈಗೆ ಪುಸ್ತಕ ಕೊಡುವ ವ್ಯವಸ್ಥೆಯಾದರೂ ಮಾಡುತ್ತೀರಾ ಯಾಕೆಂದರೆ, ಅನೇಕ ಪುಸ್ತಕಗಳಿಗೆ ಸಿಲಬಸ್ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ, ಇನ್ನೂ ನಿಮ್ಮದು ಪ್ರಿಂಟಿಂಗ್ ಪ್ರೆಸ್‌ಗೆ ಹೋಗಿಲ್ಲ. ನಾಳೆ ಶಾಲೆ ಪ್ರಾರಂಭ ಆದರೆ ಪುಸ್ತಕಗಳು ಎಲ್ಲಿ ಬರುತ್ತದೆ. ಈ ಬಗ್ಗೆ ಪತ್ರಿಕೆಗಳಲ್ಲಿ ಆಗಲೇ ಬಂದಿದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಈಗಲಾದರೂ ವಿಶೇಷವಾಗಿ ಮೂರನೇ ತರಗತಿ ನಾಲ್ಕನೇ ತರಗತಿ ಹಾಗೂ ಏಳನೇ ತರಗತಿಯ ಪುಸ್ತಕದ ಸ್ಕ್ರಿಪ್ಟ್ಸ್ ಸಹ ಇನ್ನೂ ರೆಡಿಯಾಗಿಲ್ಲ ಅಂದ ಮೇಲೆ ಪ್ರಿಂಟ್ ಆಗುವುದು ಎಲ್ಲಿ ಬಂತು. ನಿಮ್ಮ ಸರ್ಕಾರ ನಿದ್ದೆ ಮಾಡುತ್ತಿದೆ, ಸ್ವಲ್ಪ ಎಚ್ಚೆತ್ತು ಒಳ ರಾಜಕಾರಣವನ್ನು ಬಿಟ್ಟು ಏನು ಆಗುತ್ತಿದೆ ಎಂದು ನೋಡಿ. ಜನತೆಯ ಹಿತದೃಷ್ಟಿಯಿಂದ ಶಾಲಾ ಪುಸ್ತಕಗಳನ್ನು ಪ್ರಿಂಟ್ ಮಾಡುವ ಕಡೆಗೆ ಗಮನ ಕೊಡಿ ಎಂದು ತಮ್ಮ ಗಮನ ಸೆಳೆಯುತ್ತಿದ್ದೇನೆ ಅಷ್ಟೆ. ಇನ್ನು ಧಾರವಾಡದ ವಿಶ್ವವಿದ್ಯಾನಿಲಯದ ಒಂದು ಸಂಗತಿಯನ್ನು ಇಲ್ಲಿ ಹೇಳಲೇಬೇಕು. 'ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಉತ್ತರ ಪತ್ರಿಕೆ ಹಗರಣದ ಕರ್ಮಕಾಂಡ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದ್ರೋಹ' ಎಂದು ಪತ್ರಿಕೆಗಳಲ್ಲಿ ಪ್ರಕಟ ಆಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕಳೆದ ಡಿಸೆಂಬರ್ ತಿಂಗಳಿನಲ್ಲಿ ನಡೆದಂತಹ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಮೂಲ ಉತ್ತರ ಪತ್ರಿಕೆಗಳನ್ನು ಬದಲಾವಣೆ ಮಾಡಿ ಹಾಸ್ಟೆಲ್‌ಗಳಲ್ಲಿ, ಹೋಟೆಲ್‌ಗಳಲ್ಲಿ ಕುಳಿತುಕೊಂಡು ಹೊಸದಾಗಿ ಉತ್ತರ ಪತ್ರಿಕೆಗಳನ್ನು ಬರೆಸಿ ಲಕ್ಷಾಂತರ ರೂಪಾಯಿ ನೋಟ್ ಮಾಡುವಂತಹ ವ್ಯವಸ್ಥಿತವಾದಂಥ ಜಾಲ ಪತ್ತೆ ಆಗಿದೆ. ಈ ಒಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಆಫೀಸ್ ಸೂಪರಿಂಟೆಂಡೆಂಟ್ ಆಗಿರುವ ಶ್ರೀ ಸಿ. ಜೆ. ಪಾಟೀಲ್ ಅವರ ಮನೆಗೆ ಪೋಲೀಸರು ಜನವರಿ ೭, ೧೯೯೦ರಂದು ಧಾಳಿ ನಡೆಸಿದಾಗ ೧೫೨ ಖಾಲಿ ಉತ್ತರ ಪತ್ರಿಕೆಗಳು ಸಿಕ್ಕಿವೆ. ಈ ರೀತಿ ಯಾರು ಪರೀಕ್ಷೆಯಲ್ಲಿ ಪಾಸ್ ಮಾಡಿಲ್ಲ ಸರಿಯಾಗಿ ಉತ್ತರ ಬರೆದಿಲ್ಲ, ಅಂಥವರನ್ನು ಮನೆಗೆ ಕರೆದುಕೊಂಡು ಬಂದು ಉತ್ತರ ಪತ್ರಿಕೆ ಕೊಟ್ಟು ಬರೆಸಿ ಅವನ್ನು ಸೇರಿಸುವಂತಹ ಪ್ರಯತ್ನ ಮಾಡಬೇಕಾದರೆ, ಎಲ್ಲಿ ಪೊಲಿಗೆ ಹೊಲಿಯುವಂಥ ಮಿಷನ್ ಇಟ್ಟುವನ್ನು ಸೀಜ್ ಮಾಡಿದ್ದಾರೆ ನನ್ನ ಹತ್ತಿರ ಉತ್ತರ ಪತ್ರಿಕೆಗಳು ಇದೆ. ಈ ರೀತಿ ಉತ್ತರ ಪತ್ರಿಕೆ ಸೀಲ್ ಆಗಿ ಹೊಲಿಗೆ ಆಗಿ ಬರುತ್ತದೆ.

(ಮಾನ್ಯ ಸದಸ್ಯರು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷಿಣಿಯವರಿಗೆ ಉತ್ತರ ಪತ್ರಿಕೆಯನ್ನು ತೋರಿಸಿದರು)

ಈ ಪೊಲಿಗೆ ಮಾಡುವುದಕ್ಕೆ ಹೊಸ ಮಿಷನ್‌ಗಳು ಏನಿವೆ ಅವನ್ನು ಸೀಜ್ ಮಾಡಿದ್ದಾರೆ. ಈ ಉತ್ತರ ಪತ್ರಿಕೆಯನ್ನು ಹಾಗೇ ಇಟ್ಟು ಒಳಗಡೆ ಇರುವ ಪೇಪರನ್ನು ಬಿಡಿಸಿ ಬೇರೆ ಉತ್ತರ ಪತ್ರಿಕೆಯನ್ನು ಬರೆಸಿ ಮತ್ತೆ ಸೇರಿಸಿ ಐದು ಸಾವಿರ, ಆರು ಸಾವಿರ ರೂಪಾಯಿ ತೆಗೆದುಕೊಂಡು ಒಬ್ಬೊಬ್ಬರಿಗೆ ಡಿಗ್ರಿ ಕೊಡುತ್ತಾರೆ. ಈ ಜಾಲ ಪತ್ತೆ ಆಗಿದೆ. ಸ್ಥಳದಲ್ಲಿಯೇ ಆ ಜನ ಸಿಕ್ಕಿಬಿದ್ದಿದ್ದಾರೆ. ವೈಸ್ ಛಾನ್ಸಲರ್ ಇದರ ಬಗ್ಗೆ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನ ಮಾಡುತ್ತಿಲ್ಲ. ಯಾರು ಸ್ವಲ್ಪ ದುಡ್ಡು ಕೊಟ್ಟಿದ್ದಾನೆ, ಇನ್ನೂ ಸ್ವಲ್ಪ ದುಡ್ಡು ಬಂದಿಲ್ಲ ಎಂದು ಪತ್ರ ಬರೆದಂತಹ ಪತ್ರ ಸಹ ನಮಗೆ ಬಂದಿದೆ, ತಮಗೆ ನಿಜವಾಗಿ ಬದಲಾವಣೆ ತರಬೇಕು ಎಂದರೆ ಸರಿಯಾದ ಕ್ರಮ ತೆಗೆದುಕೊಳ್ಳಿ. ಹುಬ್ಬಳ್ಳಿಯ ಬಿ.ಬಿ. ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿ ರಿಜಿಸ್ಟರ್ ನಂಬರ್ ೧೫೪ ಬರೆದ ಪರೀಕ್ಷೆಯಲ್ಲಿ ಚೆನ್ನಣ್ಣ ಎನ್ನುವ ಕ್ಲರ್ಕ್ ಒಬ್ಬರು ಇನ್‌ಲ್ಯಾಂಡ್ ಲೆಟರ್‌ನಲ್ಲಿ ಪತ್ರ ಬರೆದಿದ್ದಾನೆ. ಮೊದಲನೆ ಕಂತು ಬಂತು. ಉಳಿದ ದುಡ್ಡು ಬಂದಿಲ್ಲ. ತಕ್ಷಣ ಕಳಿಸಿಕೊಡದಿದ್ದರೆ ನಾನೇ ನಿಮ್ಮ ಊರಿಗೆ ಬರಬೇಕಾಗುತ್ತದೆ ಎಂದು ಪತ್ರ ಬರೆದಿದ್ದಾನೆ. ಈ ರೀತಿ ಒಂದು ವ್ಯವಸ್ಥಿತವಾದಂತಹ ಜಾಲ ಧಾರವಾಡ ಯೂನಿವರ್ಸಿಟಿಯಲ್ಲಿ ಫೇಲ್ ಆದಂತಹ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳನ್ನು ಮನೆಯಲ್ಲಿ ಬರೆಸಿ ಅವರಿಗೆ ಡಿಗ್ರಿ ಕೊಡುವಂತಹ ಹೇಯ ಕೃತ್ಯ ನಡೆಯುತ್ತಿದೆ. ಹೀಗಾದರೆ ಪ್ರತಿಭಾವಂತ ವಿದ್ಯಾರ್ಥಿಗಳ ಪಾಡೇನು ಎಂದು ತಾವು ಸರ್ಕಾರ ಸೀರಿಯಸ್ ಆಗಿ ಯೋಚನೆ ಮಾಡಿ ನಾನು ಎರಡು ವರ್ಷದ ಹಿಂದೆ ಮಾನ್ಯ ರಘುಪತಿಯವರು ಎಜುಕೇಷನ್ ಮಿನಿಸ್ಟರ್ ಆದಂಥ ಆ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪತ್ರಿಕೆಗಳು ಪ್ರಕಟ ಆದಾಗ ನಾನು ಪ್ರಿವಿಲೇಜ್ ಮೋಷನ್ ಮೂವ್ ಮಾಡಿ ಗಲಾಟೆ ಮಾಡಿದಾಗ ಸಾಲು ಸರಿಯಿಲ್ಲ, ಕಾಮ ಸರಿಯಿಲ್ಲ, ಮುಂದೆ ಹೆಚ್ಚು ಕಡಿಮೆ ಇದೆ ಎಂದು ಅದು ನಮ್ಮದು ಎಂದು ಒಪ್ಪಿಕೊಳ್ಳಲಿಲ್ಲ, ಈಗಲೂ ಸಹ ಅದೇ ಪುನರಾವರ್ತನೆ ಆಯಿತು. ಯಾವ ಪಿ.ಯು.ಸಿ. ಸೆಕೆಂಡ್ ಇಯರ್ ಪರೀಕ್ಷೆಯಲ್ಲಿ ಪಾಸ್ ಮಾಡಿ ಹೆಚ್ಚು ಅಂಕಗಳನ್ನು ಪಡೆದರೆ ನಾಳೆ ಮೆಡಿಕಲ್, ಇಂಜಿನಿಯರಿಂಗ್ ಸೀಟ್ ಸಿಗುತ್ತದೆ ಎಂದು ಅಲ್ಲಿ ಪ್ರಶ್ನೆ ಪತ್ರಿಕೆಗಳು ಬಹಿರಂಗ ಆಗುತ್ತಿದೆ. ಇದನ್ನು ಒಪ್ಪಿಕೊಳ್ಳುವ ಸೌಜನ್ಯವನ್ನು ನಿಮ್ಮ ಸರ್ಕಾರ ತೋರಿಸದೆ

ಇದರಲ್ಲಿ ಸ್ವಲ್ಪ ವ್ಯತ್ಯಾಸ ಇದೆ ಒಪ್ಪಿಕೊಳ್ಳುವುದಿಲ್ಲ ಎಂಬ ಹೇಳಿಕೆಯನ್ನು ನಮ್ಮ ವಿದ್ಯಾ ಸಚಿವರು ಕೊಡುವಂತಹ ಪ್ರಯತ್ನ ಮಾಡಿದರು. ಎಲ್ಲಾ ಕಡೆ ಈ ರೀತಿ ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಅಲ್ಲಿನ ಅಧ್ಯಾಪಕರು, ಸ್ಟಾಫ್ ಚೆಲ್ಲಾಟ ಆಡುವಂತಹ ಪ್ರಯತ್ನ ನಡೆಯುತ್ತಿರುವ ಸಂದರ್ಭದಲ್ಲಿ ಇದನ್ನು ಸರಿಪಡಿಸಲು ನಿಮ್ಮ ಸರ್ಕಾರ ಏನಾದರೂ ಕಾರ್ಯಕ್ರಮವನ್ನು ಇಟ್ಟುಕೊಂಡಿದೆಯೇ. ಅದನ್ನು ಸರಿಪಡಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೀರ ಎಂದು ಕೇಳಲು ಇಚ್ಛೆಪಡುತ್ತೇನೆ.

ಇನ್ನು ನಮ್ಮ ರುಕ್ಮಯ್ಯ ಪೂಜಾರಿಯವರು ಪ್ರಶ್ನೆ ಕೇಳಿದಾಗ ಉತ್ತರ ಬರಲಿಲ್ಲ, ಅನೇಕ ಸಾರಿ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ. ನೀವು ಕಿವಿ ಕೇಳಿದರೂ ಕೇಳಿಸದ ಹಾಗೆ ಮಾಡುತ್ತೀರಿ. ಜೆಬಿಎಂ ಸ್ಟೂಡೆಂಟ್ಸ್ ಏನು ಮಂಗಳೂರು ಯೂನಿವರ್ಸಿಟಿಯಲ್ಲಿದ್ದಾರೆ ಅಲ್ಲಿ ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ ಆಫೀಸ್‌ನಲ್ಲಿ ೭ ಪ್ರಶ್ನೆ ಪತ್ರಿಕೆಗಳು ಕಳುವಾಗಿ ಇದುವರೆಗೆ ಅವರ ರಿಸಲ್ಟ್ ಅನೌನ್ಸ್ ಆಗದೆ ತೊಂದರೆಯಾಗಿದೆ ಎನ್ನುವ ಮಾತನ್ನು ರುಕ್ಮಯ್ಯ ಪೂಜಾರಿಯವರು ಪ್ರಸ್ತಾಪ ಮಾಡಿದಾಗ ಅದಕ್ಕೆ ಉತ್ತರ ಇದುವರೆಗೆ ಸಿಕ್ಕಿಲ್ಲ. ಈ ರೀತಿ ಯೂನಿವರ್ಸಿಟಿಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಾ ಇರುವಂಥ ಸಂದರ್ಭದಲ್ಲಿ ಅದಕ್ಕೆ ಯಾರು ಕಾರಣ ಎಂದು ಹೇಳುವುದಕ್ಕೆ ಬರುವುದಿಲ್ಲ. ಆಡಳಿತದ ಶಿಥಿಲತೆಯಿಂದ ಈ ರೀತಿ ಆಗುತ್ತಾ ಇರಬಹುದು, ಭಯ ಇಲ್ಲದೆ ಇರಬಹುದು, ದುಡ್ಡಿಗಾಗಿ ಏನೂ ಬೇಕಾದರೂ ಮಾಡಬಹುದು, ಎನ್ನುವ ತೀರ್ಮಾನಕ್ಕೆ ಕೆಲವರು ಬಂದಿರಬಹುದು. ಅದನ್ನು ಸರಿಪಡಿಸುವ ದೃಷ್ಟಿಯಿಂದ ಏನಾದರೂ ಸರಿಯಾದಂಥ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ನಮ್ಮ ಮುಖ್ಯಮಂತ್ರಿಗಳು ಅಧಿಕಾರಿಗಳ ಬಗ್ಗೆ ಎಲ್ಲಾ ಹೇಳಿದರು ಸರಿಪಡಿಸುತ್ತೇವೆ. ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಒಂದು ಬಹಳ ಪ್ರಮುಖವಾದಂಥ ಸಂಗತಿಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮಗೆ ಏನಾದರೂ ಈ ಒಂದು ಭ್ರಷ್ಟಾಚಾರ ಬಯಲು ಆಗಬೇಕು, ನ್ಯಾಯಸಿಗಬೇಕು ಎಂದು ಇದ್ದರೆ ನೀವು ಈ ವಿಷಯದ ಬಗ್ಗೆ ಒಂದು ಸದನದ ಸಮಿತಿ ಮಾಡಬೇಕು ಏನು ಅದು ಅಂದರೆ, ಸಂಡೂರಿನ ತಾರಾನಗರ ಮೈನಿಂಗ್ ಕಂಪನಿಗೆ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಅರಣ್ಯ ವಿಭಾಗಕ್ಕೆ ಸೇರಿದ ಕುದುರೆಗುಂಡಿ ಬಳಿ ಮಲಂದೂರು ಗ್ರಾಮದಲ್ಲಿ ೧೦೦ ಎಕರೆ ದಟ್ಟ ಅರಣ್ಯವನ್ನು ರಿಸರ್ವ್ ಫಾರೆಸ್ಟನ್ನು ಮ್ಯಾಂಗನೀಸ್ ತೆಗೆಯುವುದಕ್ಕೋಸ್ಕರ ಗುತ್ತಿಗೆ ಕೊಡುತ್ತಾ ಇದ್ದಾರೆ. ಈ ೧೦೦ ಎಕರೆಯಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಉತ್ತಮವಾದಂಥ ಮರಗಳಿವೆ. ನಾನು ನೋಡಿಕೊಂಡು ಬಂದಿದ್ದೇನೆ, ಬೇಜವಾಬ್ದಾರಿಯಿಂದ ಈ ಮಾತನ್ನು ಆಡುತ್ತಾ ಇಲ್ಲ. ರೆಕಾರ್ಡ್ಸ್ ಬಿಲ್ಡ್ ಅಪ್ ಆಗುತ್ತಾ ಇದೆ. ಅಲ್ಲಿರುವಂಥ ಉತ್ತಮ ಜಾತಿಯ ಮರಗಳನ್ನು ಕಡಿಯಲು ಆರ್ಡರ್‌ಗಾಗಿ ಕೊಪ್ಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಕಳಿಸಿದೆ. ಬೇಗ ಸೆಲ್ಲಿಂಗ್ ಆರ್ಡರ್ ಕೊಡಿ ಎಂದು ಸರ್ಕಾರಕ್ಕೆ ಒತ್ತಡ ತರುತ್ತಾ ಇದೆ. ಇದು ನನಗೆ ಸಿಕ್ಕಿದಂಥ ಸತ್ಯವಾದಂಥ ಮಾಹಿತಿ. ಇದರಲ್ಲಿ ಪ್ರಭಾವಿತ ಒಬ್ಬ ವ್ಯಕ್ತಿ ಇದ್ದಾರೆ. ಮೊದಲನೆಯದಾಗಿ ಸಂಡೂರಿಗೆ ಸಂಬಂಧಪಟ್ಟಂತೆ ಮ್ಯಾಂಗನೀಸ್ ತೆಗೆಯುವುದಕ್ಕೆ ಲೀಸ್ ಕೊಡುತ್ತಾ ಇರುವುದು ತಪ್ಪು. ಅದು ದಟ್ಟವಾದಂಥ ಅರಣ್ಯ. ಒಂದು ಕಡೆ ಅರಣ್ಯ ನಾಶವಾಗುತ್ತದೆ. ಇನ್ನೊಂದು ಕಡೆ ಅರಣ್ಯ ಬೆಳೆಸುತ್ತೇವೆಂದು ಹೇಳಿ ಲೂಟಿ ಮಾಡುವಂಥ ಒಂದು ವ್ಯವಸ್ಥಿತವಾದಂಥ ಸಂಚು ಏನು ನಡೆಯುತ್ತಿದೆ, ಇದನ್ನು ಕೊನೆ ಮಾಡಬೇಕು ಎಂದು ನಿಮಗೆ ಕಳಕಳಿ ಇದ್ದರೆ ಯಾವ ೧೦೦ ಎಕರೆಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮರವನ್ನು ಕಡಿದು ನುಂಗುವಂಥ ಪ್ರಯತ್ನ ನಡೆಯುತ್ತಿದೆ, ಯಾರೋ ಒಬ್ಬರ ಉದ್ಧಾರ ಮಾಡುವುದಕೋಸ್ಕರ ಏನು ನಡೆಯುತ್ತಿದೆ ಅದು ಬಹಿರಂಗ ಆಗಬೇಕು ಅಂದರೆ ಅದು ಹೊರಗಡೆಯವರಿಂದ ಆಗುವುದಿಲ್ಲ. ನಿಮ್ಮ ಸರ್ಕಾರಕ್ಕೆ ನಿಮ್ಮ ಮುಖ್ಯ ಮಂತ್ರಿಗಳಿಗೆ ಕಳಕಳಿ ಇದ್ದರೆ ಎಲ್ಲಾ ಪಕ್ಷಗಳ ಸದನದ ಒಂದು ಸಮಿತಿ ಮಾಡಿ. ಈ ೧೦೦ ಎಕರೆ ದಟ್ಟವಾದಂಥ ಅರಣ್ಯವನ್ನು ಮ್ಯಾಂಗನೀಸ್ ತೆಗೆಯುವುದಕ್ಕೋಸ್ಕರ ಲೀಸ್‌ಗೆ ಕೊಡುವುದಕ್ಕೆ ರೆಕ್‌ಮೆಂಡ್ ಮಾಡಿದಂಥ ಅಧಿಕಾರಿ ಯಾರು. ಆ ರೀತಿ ದಟ್ಟವಾದಂಥ ಅರಣ್ಯದಲ್ಲಿ ಮರಗಳನ್ನು ಕಡಿಯುವುದಕ್ಕೆ ಸೆಲ್ಲಿಂಗ್ ಆರ್ಡರ್ ಕೊಡುವುದಕ್ಕೆ ಒತ್ತಡ ತರಲು ಸರ್ಕಾರದಲ್ಲಿ ಕುಳಿತಿರುವಂಥ ಕಾಣದ ಕೈ ಯಾವುದು ಎನ್ನುವುದನ್ನು ಪತ್ತೆ ಹಚ್ಚಬೇಕಾಗಿದೆ. ಅದಕ್ಕೋಸ್ಕರ ಸದನದ ಸಮಿತಿ ಮಾಡಬೇಕು ಎಂದು ನಾನು ಆಗ್ರಹ ಮಾಡುತ್ತೇನೆ. ಈ ಬಗ್ಗೆ ಇನ್ನೂ ಹೆಚ್ಚಿನ ವಿವರ ಬೇಕಾದರೆ ನಾನು ನಿಮಗೆ ಕಳಿಸಿಕೊಡುತ್ತೇನೆ. ಸನ್ಮಾನ್ಯ ಬಸವಲಿಂಗಪ್ಪನವರೆ, ತಾವು ಏನು ಹೇಳುತ್ತಿದ್ದೀರಿ. ಅಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ, ಇಲ್ಲಿ ಬೇರೆ ಕಡೆ ಕೈ ತೋರಿಸುವ ಬದಲಿಗೆ ನಮ್ಮಲ್ಲಿ ಏನು ಆಗುತ್ತಿದೆ ಅದನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡುವುದಾದರೆ ಸದನದ ಸಮಿತಿ ಮಾಡುತ್ತೇವೆ ಎಂದು ನಿಮ್ಮ ಮುಖ್ಯ ಮಂತ್ರಿಗಳು ಘೋಷಣೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂಥ ಜನ ಈ ಪಾಪದ ಕೆಲಸ ಏನು ಮಾಡುತ್ತಾ ಇದ್ದಾರೆ. ಅವರ ಕೈ ಕತ್ತರಿಸುವಂಥ ತೀರ್ಮಾನ

ಕೈಗೊಂಡಾಗ ಮಾತ್ರ ನಿಮಗೆ ಭ್ರಷ್ಟಾಚಾರ ತಡೆಯುವಂಥ ಶಕ್ತಿ ಇದೆ ನೀವು ಹೇಳಿದಂತೆ ನಡೆದುಕೊಳ್ಳುವಂಥ ಜನ ಎನ್ನುವ ನಂಬಿಕೆ ಬರುತ್ತದೆ. ಆದ್ದರಿಂದ ಇದನ್ನು ಮಾಡುವುದಕ್ಕೆ ಸದನದ ಸಮಿತಿ ಮಾಡುತ್ತೇವೆ ಎಂದು ಹೇಳುತ್ತೀರೆ. ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಲ್ಲ. ನೀವು ಎದ್ದು ನಿಂತುಕೊಂಡು ಹೇಳುವುದಕ್ಕೆ ಧೈರ್ಯ ಇದೆಯೇ. ಏಕೆಂದರೆ. ಆ ಧೈರ್ಯ ಇಲ್ಲ. ಇವತ್ತು ಸರ್ಕಾರದಲ್ಲಿ ೧೧–೧೨ ಜನ ಇದ್ದೀರಿ. ಇಬ್ಬರು–ಮೂವರ ಕೈಯಲ್ಲಿ ಅಧಿಕಾರ ಇರುವುದು. ಬೇರೆಯವರಿಗೆ ಹೇಳುವಂಥ ಧೈರ್ಯವಿಲ್ಲ ಮೊದಲು ನಡೆಯುತ್ತಾ ಇತ್ತು. ಒಬ್ಬ ಹಿರಿಯ ಸಚಿವರು ಅಲ್ಲಿ ಕುಳಿತಾಗ, ಯಡಿಯೂರಪ್ಪನವರೆ, ಸತ್ಯವಾದರೆ ನಾನು ಮಾಡುತ್ತೇನೆ ಎಂದು ಹೇಳುವಂಥ ತಾಕತ್ತು ಇತ್ತು. ಬಸವಲಿಂಗಪ್ಪನವರೇ, ಇದರ ಬಗ್ಗೆ ಏನೇ ಹೇಳುತ್ತೀರಿ, ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಧೈರ್ಯ ಇದೆ, ಹೇಳುತ್ತೇನೆ. ನೀವು ಧೈರ್ಯ ಇಲ್ಲವೆಂದು ಹೇಳುತ್ತೀರಿ. ಕೇಳಿ ಸ್ವಾಮಿ, ಏಕೆ ಇಷ್ಟು ಆವೇಶರಾಗುತ್ತೀರಿ. ಸ್ವಂತದ್ದು ಏನಾದರೂ ಆಸ್ತಿ ಹೋಗಲಿಲ್ಲ. ಈಗ ಒಂದು ವಿಚಾರ ಇದೆ. ಅವರು ಹೇಳುವುದು ಸರಿ. ಈಗ ನಾವು ಅವರ ಕಡೆಗೆ ಗಮನಕೊಟ್ಟಿದ್ದೇವೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಸೋಷಿಯಲ್ ಫಾರೆಸ್ಟ್ರಿ ಮಾಡಿದ್ದಾರೆ. ಅದರ ಬಗ್ಗೆ ನನಗೆ ಕಳವಳವುಂಟು. ನಾನು ಹಲವಾರು ಕಡೆ ಹೋದಾಗ ಅದರಲ್ಲೂ ನನ್ನ ತಾಲ್ಲೂಕಿಗೆ ಹೋದವರ್ಷ ಹೋಗಿದ್ದೆ. ಅಲ್ಲಿ ಹೆಬ್ಬಾಳ ಗ್ರಾಮ ಇದೆ. ಅಲ್ಲಿ ಒಂದು ಲಕ್ಷ ಮರಗಳನ್ನು ಬೆಳೆಸಿದ್ದೇವೆ ಎಂದು ವರದಿ ಇದೆ.

೪–೪೦ ಪಿ. ಎಂ.

ನಾನು ಹೋದರೆ ಅಲ್ಲಿ ಒಂದೂ ಮರವೂ ಇಲ್ಲ. ಎಲ್ಲಿ ಅಂದರೆ ಯಾರೋ ಒಬ್ಬರು ಅನಾಥಾಶ್ರಮಕ್ಕೆ ಕರೆದುಕೊಂಡು ಹೋಗಿ ಸಣ್ಣ ಸಣ್ಣ ಸಸಿಗಳನ್ನು ತೋರಿಸಿದರು. ನಾನು ಬಂದು ಬೆಂಗಳೂರು ನಗರದ ಡೆಪ್ಯೂಟಿ ಕಮಿಷನರ್‌ಗೆ ಹೇಳಿದೆ, ಅವರೇ ಈಗ ಡೆವಲಪ್‌ಮೆಂಟ್‌ಗೆ ಇನ್‌ಚಾರ್ಜ್ ಇದ್ದಾರೆ. ಅಲ್ಲಿಗೆ ಹೋದೆ, ಅಲ್ಲಿ ಒಂದು ಮರ ಇಲ್ಲ. ಇದಕ್ಕೆ ಮಾತ್ರ ದುಡ್ಡನ್ನು ಕೊಡಬೇಡಿ ಎಂದು ಹೇಳಿದ್ದೇನೆ. ಇದಕ್ಕೆ ದುಡ್ಡು ಕೊಟ್ಟಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಹೋದ ವರ್ಷ ಒಂದೂವರೆ ಲಕ್ಷ ಮರಗಳನ್ನು ಬೆಳೆಸಿದ್ದೇವೆಂದು ದುಡ್ಡನ್ನು ಕೊಟ್ಟಿದ್ದಾರೆ. ನಮ್ಮ ಯಡಿಯೂರಪ್ಪನವರ ವೀರಾವೇಷವನ್ನು ಕೇಳಿ ನನಗೆ ಬಹಳ ಸಂತೋಷವಾಗುತ್ತದೆ. ನಮ್ಮ ಅನುಭವ ಇದೆ, ಅವರು ತಕ್ಷಣಕ್ಕೆ ಮಾತನಾಡುತ್ತಾರೆ ಅದಕ್ಕೆ ಬಹಳ ಸಂತೋಷವಾಗುತ್ತದೆ. ಈಗ ಸೋಶಿಯಲ್ ಫಾರೆಸ್ಟ್ರಿ ಬಗ್ಗೆ ಸರ್ಕಾರದವರು ನಿಲುವು ತೆಗೆದುಕೊಂಡಿದ್ದೇವೆ. ನೀವು ಏನು ಹೇಳಿದ್ದೀರಿ ಅದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ. ನಾವು ಮಾಡುವುದಿಲ್ಲವೆಂಬ ಅಪನಂಬಿಕೆ ನಿಮಗೆ ಇದೆಯೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನೂರು ಎಕರೆ ಮಂಜೂರು ಮಾಡಿರುವ ಬಗ್ಗೆ ಸದನದ ಸಮಿತಿ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಇಲ್ಲದ ಸಮಯದಲ್ಲಿ ಹೇಳುವುದಕ್ಕೆ ನಿಮಗೆ ಅಧಿಕಾರ ಇದೆಯೆ ?

ಶ್ರೀ ಬಿ. ಬಸವಲಿಂಗಪ್ಪ.—ಆ ಪ್ರಶ್ನೆ ಬೇರೆ, ಆಮೇಲೆ ನೋಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಯಾರಿಗೆ ಕಾನೂನು ಬಾಹಿರವಾಗಿ ೧೦೦ ಎಕರೆ ಮಂಜೂರು ಮಾಡಿ ೫–೬ ಸಾವಿರ ದೊಡ್ಡ ಮರಗಳನ್ನು ಕಡಿದು, ಕೋಟ್ಯಾಂತರ ರೂಪಾಯಿ ಲೂಟಿ ಮಾಡುವ ಪ್ರಯತ್ನಕ್ಕೆ ಬೆಂಬಲ ಕೊಡುವುದು ನಡೆಯುತ್ತಿದೆ, ಅದನ್ನು ಸರಿಪಡಿಸುತ್ತೀರೆನ್ನುವ ಪ್ರಯತ್ನ ಮಾಡಬೇಕು. ಇದರ ಬಗ್ಗೆ ಉತ್ತರವನ್ನು ನಿರೀಕ್ಷಣೆ ಮಾಡುತ್ತಿದ್ದೇನೆ, ಇನ್ನೊಂದು ಕಡೆ ಶ್ರೀಮತಿ ಕೆ. ಎಸ್. ಸರೋಜ ಎಂಬುವವರು ಹರಪನಹಳ್ಳಿ ತಾಲ್ಲೂಕು, ಕಂಚಿಗೇರೆ ಮೀಸಲು ಅರಣ್ಯ ಪ್ರದೇಶದಲ್ಲಿ ೨೫೦೦ ಎಕರೆ ಪ್ರದೇಶದಲ್ಲಿ ಬೆಣಚುಕಲ್ಲು ತೆಗೆಯುವುದಕ್ಕೆ ಫಾರೆಸ್ಟ್ ಸೆಕ್ರೆಟರಿಯವರಾದ ಶ್ರೀ ಮುನಿಯಪ್ಪನವರು ಕೇಂದ್ರ ಸರ್ಕಾರಕ್ಕೆ ಒಪ್ಪಿಗೆಗಾಗಿ ಎರಡು–ಮೂರು ಸಾರಿ ಫೈಲನ್ನು ಕಳುಹಿಸಿಕೊಟ್ಟರು. ಫೈಲು ಹೋಯಿತು, ಅವರಿಗೆ ಬೇಕಾದವರೆಲ್ಲ ದೆಹಲಿಯಲ್ಲಿ ಓಡಾಡಿಕೊಂಡು ಮಂಜೂರು ಮಾಡಿಸಿಕೊಂಡು ಬಂದರು. ಈಗ ಕೇಂದ್ರ ಸರ್ಕಾರದವರು ಪರಿಸರ ಇಲಾಖೆ ಮತ್ತು ಜಿಯಾಲಜಿಕಲ್ ಇಲಾಖೆಯವರನ್ನು ಅನುಮತಿ ಕೇಳಿದ್ದು, ಅವರೂ ಸಹ ಅನುಮತಿ ಕೊಟ್ಟು ಆಗಿದೆ. ಈಗ ಯಾವ ಒಂದು ವ್ಯಾಪಕ ಭ್ರಷ್ಟಾಚಾರವನ್ನು ತೆಗೆಯಬೇಕೆಂದು ನಿಮಗೆ ಕಳಕಳಿ ಇದೆ, ಅರಣ್ಯ ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ದೊಡ್ಡ ದೊಡ್ಡ ಹೇಗ್ಗಣಗಳನ್ನು ಸಾಕುತ್ತಿದ್ದೀರಿ, ಈ ಫಾರೆಸ್ಟ್ ಸೆಕ್ರೆಟರಿಯವರು ಮಂಜೂರಾಗಿ ಪೂರ್ಣವಾಗಿ ಕೊನೆಯ ಸಿಗ್ನೇಚರ್ ಆಗುವವರೆಗೆ ಏನೂ ಮಾಡಲಿಲ್ಲ, ಎಲ್ಲ ಕಡೆ, ಎಲ್ಲರ ಬಾಯಿಗೆ ಮಣ್ಣು ಹಾಕಿ ಮಂಜೂರು ಆಗಿ ತರುವಂತಹ ಸ್ಟೇಜಿಗೆ ತಂದರು. ಮೊನ್ನೆ ಫೈನಲ್ ಸಿಗ್ನೇಚರ್ ಮಾಡುವ ಸಮಯದಲ್ಲಿ ೧೦ ಲಕ್ಷ ರೂಪಾಯಿಯನ್ನು ಇಡಿ, ಸೈನ್ ಮಾಡುತ್ತೇ

ನೆಂದು ಹೇಳಿದರು. ಅವರು ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಕ್ಕೆ, ಒಂದೇ ಸೆಂಟೆನ್ಸ್‌ನಿಂದ ಡ್ರಾಪ್ ಮಾಡಿದ್ದಾರೆ. ಅವರು ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ಮನವಿ ಕೊಟ್ಟಿದ್ದಾರೆ. ಹೈಕೋರ್ಟಿಗೆ ಹೋಗಿ ರಿಟ್ ಪಿಟಿಷನ್ ಹಾಕಿದ್ದಾರೆ. ರಿಟ್‌ಪಿಟಿಷನ್ ನಂ. ೬೪೮೫ ದಿನಾಂಕ ೨೬-೩-೧೯೯೦. ಹೈಕೋರ್ಟಿನಲ್ಲಿ ನ್ಯಾಯಾಧೀಶರು ಅದನ್ನೆಲ್ಲಾ ನೋಡಿ, ನಕ್ಕು ಇದಕ್ಕೆ ಸ್ಟೇ ಕೊಟ್ಟಿದ್ದಾರೆ. ನಾನು ಕೇಳುತ್ತೇನೆ ಒಂದು ಕಡೆ ಎಲ್ಲಿ ಸೆಲ್ಲಿಂಗ್ ಮಾಡುವುದಕ್ಕೆ ಸಾಧ್ಯವಿಲ್ಲವೋ, ಎಲ್ಲಿ ದಟ್ಟವಾದ ಅರಣ್ಯ ಇದೆಯೋ ಅಲ್ಲಿ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಕಾನೂನು. ಬಾಕಿ ರಕ್ರಮ. ಮತ್ತೊಂದು ಕಡೆ ಅಲ್ಲಿ ಒಂದು ಗಿಡ ಇಲ್ಲ, ಮರಇಲ್ಲ ಇದನ್ನು ಅಲ್ಲಿ ಕೊಡಬಹುದೆಂದು ಹೇಳಿದ್ದಾರೆ. ಇದನ್ನು ಕೊಟ್ಟರೆ ೧ ಕೋಟಿ ೨೦ ಲಕ್ಷ ಅವನು ಸರ್ಕಾರಕ್ಕೆ ಹಣವನ್ನು ಕಟ್ಟಿ ವರ್ಷಕ್ಕೆ ೨.೫ ಲಕ್ಷ ರೂಪಾಯಿ ಲೀಸ್‌ನಂತೆ ೨೦ ವರ್ಷ ದುಡ್ಡು ಕೊಡಬೇಕು. ಮೈನ್ಸ್ ಅಂಡ್ ಜಿಯಾಲಜಿಯವರಿಗೆ ಸುಮಾರು ೧೦ ಲಕ್ಷ ರೂಪಾಯಿ ಅವನು ಸಂದಾಯ ಮಾಡಬೇಕಾಗುತ್ತದೆ. ಈ ರೀತಿ ಸರ್ಕಾರದ ಬೊಕ್ಕಸಕ್ಕೆ ದುಡ್ಡು ಬರುವುದು ಗೊತ್ತಿದ್ದರೂ ಸಹ, ಬಂದ ಮೇಲೆ ನಿಮಗೆ ತಂದು ತಲುಪಿಸುತ್ತೇವೆಂದು ಅಂಗಲಾಚಿದರೂ ಸಹ ಇವತ್ತು ಒಂದೇ ವಾಕ್ಯದಲ್ಲಿ ವಜಾ ಮಾಡುವಂತೆ ಬರೆದಿದ್ದಾರೆ. ನಾನು ಇವರಿಗೆ ರೆಕಮೆಂಡ್ ಮಾಡುತ್ತಿಲ್ಲ. ಇದರ ಬಗ್ಗೆ ಡಿಟೈಲ್ಸ್ ನನಗೆ ಗೊತ್ತಿಲ್ಲ. ಇದು ನನಗೆ ಅರ್ಥವಾಗ ವುದಿಲ್ಲ. ಏಕೆ ಕೊಟ್ಟರು, ಯಾರು ಕೊಟ್ಟರು ಎಂದು ಗೊತ್ತಿಲ್ಲ, ಕೊನೆಗೆ ರೆಕಮೆಂಡ್ ಮಾಡಿದರು ಸನ್ಮಾನ್ಯ ಬಸವಲಿಂಗಪ್ಪನವರಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ಎರಡು ಸಾರಿ ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಿದಂತಹ ನಿಮ್ಮ ಫಾರೆಸ್ಟ್ ಸೆಕ್ರೆಟರಿ ದುಡ್ಡು ಕೊಡಲಿಲ್ಲವೆಂಬ ಒಂದೇ ಕಾರಣದಿಂದ ಡ್ರಾಪ್ ಮಾಡಿದ್ದಾರೆ. ಇದು ಸತ್ಯವಾದರೆ ಅವರನ್ನು ಹ್ಯಾಂಗ್ ಮಾಡುವುದಕ್ಕೆ ಧೈರ್ಯವಿದೆಯೆ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ, ಮತ್ತೊಂದು ನಡೆಯುತ್ತಿದೆ ಎಂದು ಹೇಳಿ......

ಶ್ರೀ ಕೆ. ಶಿವಮೂರ್ತಿ.—೧೦ ಲಕ್ಷ ರೂಪಾಯಿ ಕೊಡಿ ಎಂದು ಕೇಳಿರುವುದು ರಿಟ್‌ಪಿಟಿಷನ್‌ನಲ್ಲಿ ಇದೆಯಾ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಈ ಕೇಸನು ರೆಕಮೆಂಡ್ ಮಾಡುತ್ತಿಲ್ಲ. ಈ ಕೇಸಿನಲ್ಲಿ ಕಾನೂನು ಬಾಹಿರವಾಗಿ ಸೆಲ್ಲಿಂಗ್ ಆರ್ಡರ್ ಕೊಡುವ ಪ್ರಯತ್ನ ಮಾಡಿದರು. ಇನ್ನೊಂದು ಕಡೆ ಫಾರೆಸ್ಟ್ ಇಲಾಖೆಗೆ ಸೇರಿದಂಥ ಜಾಗದಲ್ಲಿ ಬೆಣಚುಕಲ್ಲು ತೆಗೆಯುವುದಕ್ಕೆ ಕೇಂದ್ರ ಸರ್ಕಾರಕ್ಕೆ ಎರಡು ಸಾರಿ ರೆಕಮೆಂಡ್ ಮಾಡಿ, ಫೈನಲ್ ಸ್ಟೇಜ್‌ನಲ್ಲಿ ಡ್ರಾಪ್ ಮಾಡುವುದಕ್ಕೆ ಕಾರಣವೇನು? ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನನಗೆ ಈ ಸದನದಲ್ಲಿ ಪ್ರಿವಿಲೇಜ್ ಇದೆ.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷಿಣಿಯವರೆ, ಇದಕ್ಕಾಗಿಯೇ ಲೋಕಾಯುಕ್ತ ಇದೆ. ಅಲ್ಲಿ ಇವರು ಕೇಸು ಹಾಕಲಿ. ಸದನದಲ್ಲಿ ಆರೋಪ ಮಾಡುವುದಕ್ಕೆ ಮೊದಲು ೧೦ ಲಕ್ಷ ರೂಪಾಯಿ ಕೊಟ್ಟಿರುವುದನ್ನು ಹಿಡಿಸಲೂಬಹುದಾಗಿತ್ತು. ಏನು ಬೇಕಾದರೂ ಮಾತನಾಡಬಹುದೆಂದು ಹೇಳುವುದು ಸರಿಯಲ್ಲ. ಬಸವಲಿಂಗಪ್ಪನವರೇ, ನಿಮಗೆ ತಾಕತ್ತು ಇದ್ದರೆ, ಉತ್ತರ ಹೇಳಿ ಎಂದು ಹೇಳಿದರು. ವ್ಯಾಪಕವಾದ ಭ್ರಷ್ಟಾಚಾರದ ಬಗ್ಗೆ ಹೇಳುತ್ತಿದ್ದೀರಿ, ಅವರಲ್ಲಿ ನಿಮ್ಮದು ಸೇರಿಕೊಂಡೇ ಆಗಿರಬಹುದು. ಬೆಣಚುಕಲ್ಲು ತೆಗೆಯುವುದರಲ್ಲಿ ವ್ಯಾಪಕವಾದ ಭ್ರಷ್ಟಾಚಾರ ಆಗಿರಬಹುದು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಭ್ರಷ್ಟಾಚಾರದ ಪ್ರಕರಣಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಿದ್ದೇನೆ. ಅದನ್ನು ಸರಿಪಡಿಸಿ, ತಪ್ಪು ಏನಿದೆ, ಅದರಲ್ಲಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮಗೆ ನಾಚಿಕೆ ಆಗಬೇಕು ಈ ಮಾತನ್ನು ಹೇಳಬೇಕಾದರೆ. ನಿಮ್ಮಂತವರು ಶಾಸಕರಾಗಿ ಬಂದಿರುವುದರಿಂದಲೇ ಇಂಥ ಸ್ಥಿತಿ ಬಂದಿರುವುದು. ನಾನು ಹೇಳಿದ್ದನ್ನು ಮತ್ತೆ ಹೇಳುತ್ತೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಪ್ರಿವಿಲೇಜ್ ಇದೆ ಎಂದು ಬಾಯಿಗೆ ಬಂದದ್ದು ಬೊಗಳುವುದಲ್ಲ ಏನ ದಾಖಲೆ ಇದೆ ನಿಮ್ಮ ಹತ್ತಿರ

ಶ್ರೀ ಬಿ. ಎಸ್. ಯಡಿಯೂರಪ್ಪ.—ಸತ್ಯ ಹೇಳಿದರೆ ಉರಿ ಹತ್ತಿಕೊಳ್ಳುತ್ತೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಈ ಸದಸ್ಯರಿಗೆ ಏನಾದರೂ ಸಭೆಯ ನಿಯಮಾವಳಿಯಿಂದ ವಿನಾಯಿತಿ ಇದೆಯೋ ? ಯಾವಾಗ ಬೇಕಾದರೂ ಎದ್ದು ನಿಲ್ಲಬಹುದು, ಏನು ಬೇಕಾದರೂ ಹೇಳಬಹುದು. ಸದಸ್ಯರು ಯೀಲ್ಡ್ ಆಗಬೇಕಿಲ್ಲ, ಅಧ್ಯಕ್ಷರ ಅಪ್ಪಣೆ ಪಡೆಯಬೇಕಿಲ್ಲ ಎಂದು ಇದೆಯೋ ತಾವು ಇದೇರೀತಿ ಸದನ ನಡೆಸುವುದಾದರೆ ಹೇಗೆ ? ಮುಖ್ಯಮಂತ್ರಿಗಳು ಇಲ್ಲ, ಸಭಾನಾಯಕರು ಇಲ್ಲ. ಈ ರೀತಿ ಸದಸ್ಯರ ನಡವಳಿಕೆ ಸರಿ ಅಂತ ಕಂಡರೆ, ನಾವೂ ಹಾಗೆ ನಡೆದುಕೊಳ್ಳುತ್ತೇವೆ, ಈ ಪ್ರವೃತ್ತಿ ಸರಿಯಲ್ಲ ನಾನು ಪ್ರಾರಂಭದಿಂದ ನೋಡುತ್ತಿದ್ದೇನೆ. ಅಧ್ಯಕ್ಷರನ್ನು ಕೇಳದೆ ಎದ್ದು ಬಾಯಿಗೆ ಬಂದದ್ದು ಮಾತನಾಡುವುದು, ಇದನ್ನು ಎರಡೂ ಕಡೆಯವರು ತಿಳಿದುಕೊಳ್ಳಬೇಕು.

ಶ್ರೀ ಕರಿಯಣ್ಣ.—ಅಧ್ಯಕ್ಷರೆ......

ಛೇರ್ಮನ್.—ನೀವು ಕೂತುಕೊಳ್ಳಿರಿ ಕರಿಯಣ್ಣ. ಏನು ಮಾತನಾಡುತ್ತೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಸದನದ ನಿಯಮಾವಳಿಗಳನ್ನು ಕಲಿತುಕೊಳ್ಳಿ.

ಛೇರ್ಮನ್.—ಮಾನ್ಯ ಯಡಿಯೂರಪ್ಪನವರು ಚರ್ಚೆಯಲ್ಲಿ ಭಾಗವಹಿಸಿದಂಥ ಸಂದರ್ಭದಲ್ಲಿ ಈಗಾಗಲೇ ೪-೩೦ ಗಂಟೆಯಾಗಿದೆ. ಸದಸ್ಯರುಗಳೆಲ್ಲಾ ನೀರಸವಾಗಿದ್ದಾರೆ, ಮಧ್ಯೆ ಮಧ್ಯೆ ಬೇರೆ ಸದಸ್ಯರುಗಳು ಇಂಟರಪ್ಟ್ ಮಾಡುವುದರಿಂದ ಚುರುಕುತನ ಬರುತ್ತದೆಂದು ಎಲ್ಲರಿಗೂ ಅವಕಾಶ ಕೊಡಲಾಯಿತು. ಅದೇ ಒಂದು ಕಾರಣದಿಂದ ಈ ಪರಿಸ್ಥಿತಿ ಉದ್ಭವವಾಗಿದೆಯೆಂದು ನನಗನ್ನಿಸುತ್ತದೆ. ಸದಸ್ಯರುಗಳು ನಿಯಮಾವಳಿ ರೀತಿ ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆಯೇ ಹೊರತು, ಸದಸ್ಯರೊಬ್ಬರು ಮಾತನಾಡುವಾಗ ತೊಂದರೆ ಕೊಡಬಾರದೆಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ತುಂಬಾ ಜವಾಬ್ದಾರಿಯಿಂದ ಮಾತನಾಡಿದ್ದೇನೆ. ನಾನು ಮಾತನಾಡಿದ್ದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಬಿ, ಬಸವಲಿಂಗಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ಮಾತುಗಳು ಸಹಜವಾಗಿವೆ. ಈ ಮನೆಯ ನಡವಳಿಕೆಗಳ ಪ್ರಕಾರ ನಡೆದುಕೊಳ್ಳಬೇಕಾದುದು ಎಲ್ಲರ ಕರ್ತವ್ಯ. ಮಾನ್ಯ ಯಡಿಯೂರಪ್ಪನವರು ಕೋಪಕ್ಕೆ ಪರವಶರಾಗಿ ಸಿಟ್ಟಿಗೆ ಪರವಶರಾಗಿ ಸಿಟ್ಟಿನ ಕೈಗೊಂಬೆಯಾಗಿ ಮಾತನಾಡಿದ್ದು, ನನಗೆ ಸರಿ ಅಂತ ಕಾಣಲಿಲ್ಲ. ಶ್ರೀಮಾನ್ ಕರಿಯಣ್ಣನವರು ಹೊಸಬರಿದ್ದಾರೆ, ಅವರು ಏನು ಮಾತನಾಡಿದರೂ ರಿಯಾಯಿತಿ ಕೊಡಬಹುದು. ಆದರೆ ನಿಮಗೆ ಕೊಡುವುದಕ್ಕಾಗುವುದಿಲ್ಲ, ಎಲ್ಲರೂ ನಿಯಮಾವಳಿಗಳ ಪ್ರಕಾರ ನಡೆಯುವುದು ಒಳ್ಳೆಯದು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಸನ್ಮಾನ್ಯ ಯಡಿಯೂರಪ್ಪನವರ ಮಾತನ್ನು ನಾವು ಕೇಳಿದ್ದೇವೆ. ಅವರು ಒಂದು ಪಕ್ಷದ ನೇತಾರರಾಗಿದ್ದಾರೆ, ಅವರಿಗೆ ಹಲವಾರು ವರ್ಷಗಳ ಕಾಲ ಶಾಸಕರಾಗಿ ಅನುಭವ ಇದೆ. ನಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರಗಳನ್ನು ಶೀಲ್ಡ್ ಮಾಡಬೇಕು ಎನ್ನತಕ್ಕ ಧೋರಣೆ ಇಲ್ಲ, ಆ ಧೋರಣೆ ನಮ್ಮದು ಅಲ್ಲ. ಅವರು ಭಾಷಣವನ್ನು ಮಾಡುವಾಗ ಕೆಲವು ಅಪಾದನೆಗಳನ್ನು ಮಾಡಿದರು. ಏಕೆಂದರೆ, ನಮ್ಮ ವಿರೋಧಪಕ್ಷದ ನಾಯಕರು ಇಲ್ಲಿಯೇ ಇದ್ದಾರೆ, ನನ್ನದು ಒಂದೇ ಒಂದು ವಿನಂತಿ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ. ಅವರು ಈಗಲೇ ಉತ್ತರ ಕೊಡಬಾರದು. ಮಾನ್ಯ ಯಡಿಯೂರಪ್ಪನವರ ಭಾಷಣ ಮುಗಿದ ಮೇಲೆ ಉತ್ತರವನ್ನು ಕೊಡಲಿ. ಅವರು ಏನು ಹೇಳುತ್ತಾರೆ ಎನ್ನುವುದನ್ನು ಬರೆದುಕೊಳ್ಳಲಿ ಅನಂತರ ಉತ್ತರ ಕೊಡಲಿ, ಮಧ್ಯೆ ಒಗ್ಗರಣೆ ಹಾಕುವುದು ಬೇಡ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ನಾನು ಉತ್ತರ ಹೇಳುತ್ತಿಲ್ಲ, ನಿಯಮದ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಿಯಮಗಳನ್ನು ಪಾಲಿಸುವುದರಲ್ಲಿ ಮುಂದೆ ಕುಳಿತಿರುವವರು ಬಹಳ ಪ್ರಮುಖರಿದ್ದೀರಿ ಎಂದು ನನಗೆ ಗೊತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈಗ ಮಾನ್ಯ ಯಡಿಯೂರಪ್ಪನವರು ಯೀಲ್ಡ್ ಆಗಿದ್ದಾರೆ, ನನಗೆ ಮಾನ್ಯ ಅಧ್ಯಕ್ಷಿಣಿಯವರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಛೇರ್ಮನ್.— ವಾತಾವರಣ ತಿಳಿಯಾಗಿತ್ತು, ಈಗ ಮತ್ತೆ ಗೊಂದಲ ಪ್ರಾರಂಭ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವೊಂದು ಆಪಾದನೆಯನ್ನು ಮಾಡಿದರು. ಫಾರೆಸ್ಟ್ ಸೆಕ್ರೆಟರಿ ೧೦ ಲಕ್ಷ ರೂಪಾಯಿ ಹಣವನ್ನು ಕೊಡಲಿಲ್ಲ ಎನ್ನುವ ಕಾರಣಕ್ಕಾಗಿ ಈ ರೆಕಾರ್ಡ್‌ನ್ನು ವಜಾ ಮಾಡಿದ್ದಾರೆ ತತ್ಪರಿಣಾಮವಾಗಿ ರಾಜ್ಯದ ಉಚ್ಚತಮ ನ್ಯಾಯಾಲಯ ಇವೊತ್ತು ಸ್ಟೇ ಕೊಟ್ಟಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಸರ್ಕಾರದ ನಿಲುವು ಏನು ಎಂದು ನಾನು ಮೊದಲೇ ಹೇಳಿದ್ದೇನೆ. ಅವರು ನಿರ್ದಿಷ್ಟವಾಗಿ ಯಾರು, ಎಲ್ಲಿ, ಹೇಗೆ ಎಂದು ಸಭೆಯ ಮೂಲಕ ಒಂದು ವರದಿಯನ್ನು ಕೊಡುವುದಾದರೆ ಅಥವಾ ತಿಳಿಸುವುದಾದರೆ, ಬಹುಶಃ ನಾವಂತೂ ಆ ಸಂಬಂಧಪಟ್ಟ ಅಧಿಕಾರಿಯನ್ನು ಒಂದು ನಿಮಿಷ ಕೂಡ ತಡೆ ಮಾಡದೇ ತನಿಖೆಗೆ ಒಳಪಡಿಸತಕ್ಕಂಥಾದ್ದಕ್ಕೆ ಸರ್ಕಾರ ಬದ್ಧ ಇದೆ. ಅವರು ಮಾತನಾಡತಕ್ಕ ಸಂದರ್ಭದಲ್ಲಿ ಸುಮ್ಮನೆ ಊಹಾಪೋಹದ ಬಗ್ಗೆ ಈ ರೀತಿ ನಿರ್ದಿಷ್ಟವಲ್ಲದ ವಿವರವನ್ನು ಸಭೆಗೆ ಕೊಟ್ಟು ಸಭೆಯಲ್ಲಿ ಇಲ್ಲದೇ ಇರುವವರಿಗೆ ತೇಜೋವಧೆ ಮಾಡುವುದು ಆಗಬಾರದು ಎಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಸಚಿವರು ಹೇಳಿದ್ದನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ನಿಮ್ಮ ಸರ್ಕಾರ ಭ್ರಷ್ಟಾಚಾರ ಮಾಡಿರುವವರನ್ನು ಶೀಲ್ಡ್ ಮಾಡುವುದಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಈ ರೀತಿಯ ಕೆಲಸ ಪುನರಾವರ್ತನೆ ಆಗದಂತೆ ನೋಡಿಕೊಳ್ಳುತ್ತೀರಾ ಎನ್ನುವ ಸ್ವಲ್ಪ ವಿಶ್ವಾಸ ಇದ್ದುದರಿಂದಲೇ ಹೇಳುತ್ತಿದ್ದೇನೆ. ಒಂದೇ ಒಂದು ಇಲಾಖೆಯಲ್ಲಿ ಇರುವಂಥಾದ್ದು ಒಂದು ಸ್ಯಾಂಪಲ್ ಕೊಟ್ಟಿದ್ದೇನೆ. ಅದಕ್ಕೆ ಬೇಕಾದ ಮಾಹಿತಿ ಒದಗಿಸಿಕೊಟ್ಟಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಹೇಳುವುದು ಗೌರವ ಅಲ್ಲ ಎಂದು ಹೇಳುತ್ತಿಲ್ಲ. ಅದಕ್ಕೆ ಬೇಕಾದಂಥ ಮಾಹಿತಿಯನ್ನು ನಾನು ತಮಗೆ ಒದಗಿಸಿಕೊಡುತ್ತೇನೆ. ನಾನು ಹೇಳಿದಂತಹ ಮಾತಿನಲ್ಲಿ ನಾಲ್ಕೈದು ಆರೋಪಗಳು ಸತ್ಯ ಎಂದು ಮನಗಂಡ ಮೇಲೆ ತಾವು ನೋಡಿ. ಈ ಸದನದಲ್ಲಿ ಪದೇ ಪದೇ ನಿಂತುಕೊಂಡು ಯಾರ್‍ಯಾರು ಏನೇನು ಮಾಡಿದ್ದಾರೆಂದು ಪಟ್ಟಿಮಾಡಿ ಹೇಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ನಾನು ಏತಕ್ಕೆ ಒತ್ತುಕೊಟ್ಟು ಇದನ್ನು ಹೇಳಿದೆ ಅಂದರೆ, ನಿಮ್ಮ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ, ಬಜೆಟ್ ಭಾಷಣದಲ್ಲಿ. ವ್ಯಾಪಕವಾದ ಭ್ರಷ್ಟಾಚಾರ ತಾಂಡವವಾಡುತ್ತಿದೆ, ಒಂದು ಹಿಡಿತ ಕೈತಪ್ಪಿ ಹೋಗುತ್ತಿದೆ. ಅದಕ್ಕೆ ಸಮಿತಿ ಮಾಡಬೇಕು, ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂಬ ಕಳಕಳಿಯನ್ನು ವ್ಯಕ್ತಪಡಿಸಿದಿರಿ. ಅದಕ್ಕೆ ಮೊವು ಸಿಕ್ಕಬೇಕು ಎಂದು ಒಂದು ಸ್ಯಾಂಪಲ್ ಕೊಟ್ಟಿದ್ದೇನೆ. ಅದಕ್ಕೆ ಬೇಕಾದಂಥ ಉಳಿದ ಪುರಾವೆಗಳನ್ನು ಒದಗಿಸಿಕೊಡುತ್ತೇನೆ. ಸದನದಲ್ಲಿ ಬೇಕು ಅಂದರೆ ಇಲ್ಲಿ ಕೊಡುತ್ತೇನೆ, ಆಮೇಲೆ ಬಂದು ಕೊಡಿ ಅಂದರೆ ಆಮೇಲೆ ಕೊಡುತ್ತೇನೆ. ಇನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಘಟನೆ ನಡೆಯಿತು. ಪೋಲೀಸ್ ಇಲಾಖೆ ಯಾವರೀತಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳಾದ ಪುಟ್ಟಸ್ವಾಮಿಗೌಡರು ಇದರ ಕಡೆ ಗಮನವನ್ನು ಕೊಡಬೇಕು. ಚಿಕ್ಕಮಗಳೂರಿನ ಬಂದೀಖಾನೆಯಿಂದ ದಿನಾಂಕ ೨೦-೧೨-೧೯೮೯ರಂದು ಒಬ್ಬ ಕುಖ್ಯಾತ ರೌಡಿಯನ್ನು ಕರೆದುಕೊಂಡು ಬರುತ್ತಿದ್ದರು. ಅವನ ಹೆಸರು ಭಾಸ್ಕರ್‌ನಾಯರ್ ಎಂದು ಇವನು ಕೇರಳದ ಒಬ್ಬ ಕುಖ್ಯಾತ ರೌಡಿ. ಈತ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಬಸ್ ಸ್ಟ್ಯಾಂಡಿನಲ್ಲಿ ೧೦ ರೂಪಾಯಿ, ೧೦೦ ರೂಪಾಯಿ ಖೋಟಾ ನೋಟುಗಳನ್ನು ಹಂಚುತ್ತಿದ್ದಾಗ ಸಿಕ್ಕಿಬಿದ್ದು ಜೈಲಿಗೆ ಬಂದವನು. ಆ ಕುಖ್ಯಾತ ರೌಡಿಯನ್ನು ಆಸ್ಪತ್ರೆಗೆ ಟ್ರೀಟ್‌ಮೆಂಟಿಗೋಸ್ಕರ ದಿನಾಂಕ ೨೦-೧೨-೧೯೮೯ರಂದು ಕರೆದುಕೊಂಡು ಬರಬೇಕಾದರೆ ಅವನ ಕೈಗೆ ಹ್ಯಾಂಡ್‌ಕಫ್ಸ್ ಹಾಕಿಕೊಂಡು ಜೀಪಿನಲ್ಲಿ ಕರೆದುಕೊಂಡು ಬಂದರೋ ಏನೋ ಗೊತ್ತಿಲ್ಲ. ಆ ಸ್ಥಳದಲ್ಲಿ ಬರುತ್ತಾ ಇರಬೇಕಾದರೆ, ನಾಲ್ಕೈದು ಜನರು ಆ ಜೀಪನ್ನು ತಡೆದು ಇವನನ್ನು ಬಿಡಿಸಿಕೊಂಡು ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾರೆ ಅಂದರೆ ಏನು ಅರ್ಥ. ಇದುವರೆಗೂ ಅವನು ಪತ್ತೆ ಇಲ್ಲ. ಇದನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ, ಒಬ್ಬ ಕುಖ್ಯಾತ ರೌಡಿ ಎಂದು ಗೊತ್ತಾದಮೇಲೆ, ಆ ರೌಡಿಯನ್ನು ಪೋಲೀಸ್ ವ್ಯಾನ್‌ನಲ್ಲಿ ತರಬೇಕಾಗಿದ್ದು ಅವರ ಕರ್ತವ್ಯವಾಗಿತ್ತು. ಕಾರು ನಿಲ್ಲಿಸಿ, ಪೋಲೀಸರನ್ನು ತಡೆದು, ಆ ಖೈದಿಯನ್ನು ಕರೆದುಕೊಂಡು ಹೋಗುವ ಧೈರ್ಯವನ್ನು ಆ ಜನರು ಮಾಡಿದ್ದಾರೆ ಅಂದರೆ ಪೋಲೀಸ್ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆಂದು ನಾನು ಅನುಮಾನ ಪಡಬೇಕೊ, ಪೋಲೀಸ್ ಅಧಿಕಾರಿಗಳು ಬೇಜವಾಬ್ದಾರಿಯಿಂದ ನಡೆದುಕೊಂಡರು ಎಂದು

ಅನುಮಾನ ಪಡಬೇಕಾ, ಇದರಿಂದ ಪೋಲೀಸ್ ಇಲಾಖೆಗೆ ಗೌರವ ಬರುತ್ತದೆಯೇ ? ಕುಖ್ಯಾತ ರೌಡಿ ಎಲ್ಲಿದ್ದಾನೆ, ಅವನು ಸಿಕ್ಕಿದ್ದಾನೆಯೇ, ಅವನನ್ನು ಯಾವರೀತಿ ಕರೆದುಕೊಂಡು ಬಂದರು, ಅವನು ನೋಟುಗಳನ್ನು ಹಂಚುತ್ತಿದ್ದನ, ಇಲ್ಲ. ನಾನು ಹೇಳುವುದು ನಿಜವೋ, ಸುಳ್ಳೋ, ನಾನೇ ಏನಾದರೂ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೇನೆಯೇ, ದಯಮಾಡಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಇದರ ಬಗ್ಗೆ ಉತ್ತರ ಕೊಡಬೇಕು.

ಇಂತಹವರನ್ನು ರಕ್ಷಣೆ ಮಾಡ ಪಂಥಾದ್ದನ್ನು ಈ ಗ್ಯಾಂಗ್ ಬೆಳೆಯುತ್ತಾ ಇರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಇದನ್ನು ಕೊನೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕು. ಅವರು ಭ್ರಷ್ಟಾಚಾರ ಇಲ್ಲವೆಂದು ಹೇಳಿದರು. ಅದಕ್ಕೋಸ್ಕರ ಭ್ರಷ್ಟಾಚಾರದ ಪಟ್ಟಿಯನ್ನು ಕೊಟ್ಟು ನಾನು ಇಲ್ಲಿ ಹೇಳಬೇಕಾಗುತ್ತದೆ. ಇವತ್ತು ಶ್ರೀಗಂಧ ಲೂಟಿಯಾಗುತ್ತಿರುವುದನ್ನು ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಈ ಲೂಟಿಯನ್ನು ತಪ್ಪಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇನ್ನು ಕೆ.ಸಿ.ಸಿ.ಎಫ್.ನವರು ಸೈನ್ಸ್ ಎಕ್ವಿಪ್‌ಮೆಂಟ್ಸ್ ಅನ್ನು ಏನು ಸರಬರಾಜು ಮಾಡಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ ಅದನ್ನು ಪ್ರದರ್ಶನಕ್ಕೆ ಕೂಡ ಇಟ್ಟಿದರು. ಇದರ ಬಗ್ಗೆ ಚರ್ಚೆ ಕೂಡ ಆಗಿದೆ. ಶಿವಮೊಗ್ಗ ಜಿಲ್ಲೆಯ ಅನೇಕ ಹೈಸ್ಕೂಲ್‌ಗಳವರಿಗೆ ಕೂಡ ಕೊಟ್ಟಿದ್ದಾರೆ. ಇದು ಕೇಂದ್ರ ಸರ್ಕಾರದ ಒಂದು ಯೋಜನೆಯಾಗಿದ್ದು ಇದಕ್ಕೆ ೨೪ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡುವ ಉದ್ದೇಶವಿದ್ದು ಮೊದಲನೇ ಸ್ಟೇಜ್‌ನಲ್ಲಿ ೮ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ. ೨೬,೦೦೦ ರೂಪಾಯಿಗಳ ಸೈನ್ಸ್ ಎಕ್ವಿಪ್‌ಮೆಂಟ್ಸ್ ಮತ್ತು ೧೦ ಸಾವಿರ ರೂಪಾಯಿಗಳ ಪುಸ್ತಕಗಳನ್ನು ವಿತರಣೆ ಮಾಡುವಂತಹ ಒಂದು ಕಾರ್ಯ ನಡೆದಿದೆ. ಸೈನ್ಸ್ ಎಕ್ವಿಪ್‌ಮೆಂಟ್ಸ್ ಅನ್ನು ಏನು ನೀಡಿದ್ದಾರೆ. ಅದು ಒಂದೂ ಸರಿ ಇಲ್ಲ, ಅದರ ಬಗ್ಗೆ ಸಿ.ಓ.ಡಿ. ತನಿಖೆ ನಡೆಯುತ್ತಿದೆ ಆದರೆ ದಾಖಲೆಗಳನ್ನು ತಿದ್ದುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ ಅಲ್ಲಿ ದಾಖಲೆಗಳನ್ನು ತಿದ್ದದಾತೆ ತಕ್ಷಣ ಅಲ್ಲಿಗೆ ಅಡ್ಮಿನಿಸ್ಟ್ರೇಟರ್ ಅನ್ನು ನೇಮಕ ಮಾಡಬೇಕು. ಹೈಸ್ಕೂಲಿನಲ್ಲಿ ಓದುವಂತಹ ಮಕ್ಕಳಿಗೆಂದು ವಿಜ್ಞಾನಕ್ಕೆ ಸಂಬಂಧಪಟ್ಟ ಸೈನ್ಸ್ ಸಿರೀಸ್ ಅನ್ನು ಅಮೇರಿಕಾದಿಂದ ತರಿಸಿದ್ದಾರೆ ಇದನ್ನು ಏರ್‌ನಲ್ಲಿ ತೆಗೆದುಕೊಂಡು ಬಂದರೆ ಒಂದೊಂದು ಸೆಟ್‌ಗೆ ೨೮೦ ರೂಪಾಯಿ ಬಿದ್ದಿದೆ. ಖಾಸಗಿಯಾಗಿ ತರಿಸುವವರಿಗೆ ೬ ಪುಸ್ತಕಗಳ ಒಂದು ಸೆಟ್‌ಗೆ ೫೬೫–೫೭೫ ರೂಪಾಯಿ ಬೀಳುತ್ತದೆ. ಆದರೆ ಇವರು ಇದಕ್ಕೆ ೧೬೨೦ ರೂಪಾಯಿ ಎಂದು ಬೆಲೆ ಹಾಕಿದ್ದಾರೆ. ಇದು ಸರಿಯೇ ? ಇಷ್ಟು ಪುಸ್ತಕಗಳನ್ನು ತೆಗೆದುಕೊಂಡರೆ ೨೫ ರಿಂದ ೪೦ ಪರ್ಸೆಂಟ್‌ನಷ್ಟು ಡಿಸ್ಕೌಂಟ್ ಬರುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಸುಮಾರು ೮ ಕೋಟಿ ರೂಪಾಯಿಯ ಸೈನ್ಸ್ ಎಕ್ವಿಪ್‌ಮೆಂಟ್ ಪುಸ್ತಕಗಳನ್ನು ವಿತರಣೆ ಮಾಡುವಂತಹ ಸಮಯದಲ್ಲಿ ಲೆಕ್ಕದಲ್ಲಿ ಒಂದು ಪೈಸೆ ಡಿಸ್ಕೌಂಟ್ ಅನ್ನು ತೋರಿಸಿದ್ದ. ಈ ಪುಸ್ತಕಗಳನ್ನು ಅಮೇರಿಕಾದಿಂದ ತರಿಸುವಂತಹ ಅಗತ್ಯವಾದರೂ ಇತ್ತೇ, ಇದನ್ನು ಏಕೆ ತರಿಸಿದ್ದಾರೆಂದರೆ ಅದರಲ್ಲಿ ಪುಸ್ತಕದ ಬೆಲೆಯನ್ನು ಮುದ್ರಣ ಮಾಡಿಲ್ಲ, ಅಲ್ಲಿಂದ ತರಿಸಿಕೊಂಡು ಇವರ ಮನಬಂದಂತೆ ಬೆಲೆಯನ್ನು ಮುದ್ರಣ ಮಾಡಿಕೊಂಡು ಬೇರೆಯವರಿಗೆ ಮಾರಬಹುದು ಎಂಬ ಒಂದೇ ಒಂದು ಕಾರಣಕೋಸ್ಕರ ಇದನ್ನು ಅಲ್ಲಿಂದ ತರಿಸಿದ್ದಾರೆ. ಹೈಸ್ಕೂಲಿನ ಮಕ್ಕಳಿಗೆ ವಿಜ್ಞಾನವನ್ನು ಅಧ್ಯಯನ ಮಾಡಲು ಅನುಕೂಲವಾಗಲಿ ಎಂಬ ದೃಷ್ಟಿಯಿಂದ ತರಿಸಿಲ್ಲ, ಆ ದೃಷ್ಟಿಯಿಂದ ತರಿಸಿದ್ದೇವೆಂದು ಹೇಳಿಕೊಂಡು ಹಣವನ್ನು ಲೂಟಿ ಮಾಡುವಂತಹ ವ್ಯವಸ್ಥೆ ನಡೆಯುತ್ತದೆ. ರಾಷ್ಟ್ರಪತಿಯವರ ಆಡಳಿತದ ಕಾಲದಲ್ಲಿ ಅಂದರೆ ಸುಮಾರು ೫–೬ ತಿಂಗಳಿನ ಹಿಂದೆ ಇದು ಆಗಿದೆ, ಹೆಚ್ಚು ಸಮಯವೇನೂ ಆಗಿಲ್ಲ. ಇದರಲ್ಲಿ ಪ್ರಮುಖರ ಕೈವಾಡ ಇದೆ. ಕೆ.ಸಿ.ಸಿ.ಎಫ್‌ನಲ್ಲಿ ದೊಡ್ಡ ದೊಡ್ಡ ರಾಜಕಾರಿಣಿಗಳ ಕೈವಾಡ ಕೂಡ ಇದೆ. ಕಮಿಷನ್ ಹೊಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಮಕ್ಕಳ ವಿಜ್ಞಾನದ ಅಭಿವೃದ್ಧಿಗೋಸ್ಕರ ಕೊಟ್ಟವಂತಹ ಹಣವನ್ನು ದುರುಪಯೋಗ ಮಾಡಿಕೊಳ್ಳುವಂತಹ ಕೀಳು ಮಟ್ಟಕ್ಕೆ ಬಂದಿರುವಂತಹ ಕೆ.ಸಿ.ಸಿ.ಎಫ್. ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು. ಅಲ್ಲಿಗೆ ತಕ್ಷಣ ಅಡ್ಮಿನಿಸ್ಟ್ರೇಟರನ್ನು ಹಾಕಿ. ಈಗಾಗಲೇ ಅಲ್ಲಿ ಸಿ.ಓ.ಡಿ. ತನಿಖೆಗೆ ಕೊಟ್ಟಿದ್ದೀರಿ, ಆದರೆ ಅದರಿಂದ ಪ್ರಯೋಜನವಾಗುವುದಿಲ್ಲ. ರೆಕಾರ್ಡ್ ಅನ್ನು ತರಿಸಿ ಅದನ್ನು ಸೀಜ್ ಮಾಡಬೇಕಾಗುತ್ತದೆ. ರಿಕ್ವೆಸ್ಟ್ ಮಾಡಿಕೊಂಡು ಮೊದಲು ಕೊಟ್ಟವಂತಹ ಸೈನ್ಸ್ ಎಕ್ವಿಪ್‌ಮೆಂಟ್ಸ್ ಅನ್ನು ವಾಪಸ್ ಪಡೆದು ಹೊಸದನ್ನು ಕೊಡುವಂತಹ ಪ್ರಯತ್ನ ನಡೆಯುತ್ತದೆ. ಅಂದರೆ ಅಂದು ಮಾತ್ರ ಅದನ್ನು ಸರಿಪಡಿಸಿಕೊಳ್ಳಬಹುದೇ? ವ್ಯವಸ್ಥಿತವಾದ ವ್ಯಾಪಕವಾದಂತಹ ಭ್ರಷ್ಟಾಚಾರ ನಡೆಯುತ್ತಿದೆ, ಅದನ್ನು ಸರಿಪಡಿಸುವ ಹೆಜ್ಜೆಯನ್ನು ಸರಕಾರ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಇದನ್ನು ಪ್ರಸ್ತಾಪ ಮಾಡಿದೆನೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಬೇಕಾದರೆ ಇದನ್ನು ಪರೀಕ್ಷೆ ಮಾಡಿ. ನಿಮ್ಮ ನೀತಿ ಏನು, ಮುಂದಿನ ವರ್ಷದ ಕಾರ್ಯಕ್ರಮಗಳು ಏನು

ಎಂಬುದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲದೇ ಇರುವುದರಿಂದ ಹೊಸ ಕಾರ್ಯಕ್ರಮಗಳು ಅದರಲ್ಲಿ ಇಲ್ಲದೆ ಇದ್ದುದರಿಂದ ರಾಷ್ಟ್ರಪತಿಯವರ ಆಡಳಿತದ ಕಾಲದಲ್ಲಿ ಯಾವ ರೀತಿ ವ್ಯಾಪಕವಾದಂತಹ ಭ್ರಷ್ಟಾಚಾರ ನಡೆದು ಸರಕಾರಕ್ಕೆ ಬರಬೇಕಾದಂತಹ ಸಂಪನ್ಮೂಲಗಳ ಲೂಟಿಯಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಸರಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣವಿಲ್ಲದೆ ಇದ್ದು ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವಂತಹ ಈ ಸಂದರ್ಭದಲ್ಲಿ ಯಾವರೀತಿ ದುಡ್ಡು ಪೋಲಾಗುತ್ತಿದೆ ಇದನ್ನು ಬಿಗಿ ಮಾಡಬೇಕು. ಒಬ್ಬಿಬ್ಬರ ಸ್ಕ್ರೂವನ್ನು ಟೈಟ್ ಮಾಡಿದರೆ ಎಲ್ಲಾ ಸರಿ ಹೋಗುತ್ತಾರೆ. ಅಧಿಕಾರಿಗಳಲ್ಲಿ ಪ್ರಾಮಾಣಿಕರೂ ಇದ್ದಾರೆ, ಎಲ್ಲರೂ ಭ್ರಷ್ಟರೆಂದು ನಾನು ಹೇಳುವುದಿಲ್ಲ. ಯಾವ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಅಲ್ಲಿರುವಂತಹ ಅಧಿಕಾರಿಗಳೇ ಸರ್ಕಾರವನ್ನು ನಡೆಸುವಂತಹವರು. ನಿಮ್ಮ ಸರ್ಕಾರಕ್ಕೆ ನೈತಿಕ ಸ್ಥೈರ್ಯ ಬರಬೇಕೆಂದು ಇದ್ದರೆ, ಕೆಟ್ಟ ಪರಿಣಾಮ ಆಗಬಾರದೆಂದು ಇದ್ದರೆ ಸೂಕ್ತ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ ಈ ರೀತಿಯ ಭ್ರಷ್ಟಾಚಾರ ಮಾಡಿದಂತಹವರು ಕೆಲವರ ರಕ್ಷಣೆಯಲ್ಲಿ ಬದುಕುವಂತಹ ಪ್ರಯತ್ನವನ್ನು ಕೊನೆಗಾಣಿಸಬೇಕು. ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕಲ್ಲು ಒಡ್ಡು ಯೋಜನೆ ಬಂದರೆ ೧೬೨ ಎಕರೆ ಕಾಡು ಹೋಗುತ್ತದೆಂದು ಹೇಳಿ ಅಲ್ಲಿ ನೀರಾವರಿ ಯೋಜನೆ ಪ್ರಾರಂಭವಾಗುವುದನ್ನು ತಡೆಯುವಂತಹ ಅರಣ್ಯಾಧಿಕಾರಿ ಇದ್ದಾರೆ. ಈ ರೀತಿ ಸಾವಿರಾರು ಎಕರೆ ಭೂಮಿಯನ್ನು ಲೀಸ್ ಕೊಟ್ಟು ಹಣವನ್ನು ಲೂಟಿ ಮಾಡಿ ಅರಣ್ಯವನ್ನು ಸರ್ವನಾಶ ಮಾಡುವಂತಹ ಒಂದು ಪ್ರಯತ್ನವನ್ನು ವ್ಯವಸ್ಥಿತವಾಗಿ ಅಧಿಕಾರಿಗಳು ಮಾಡುತ್ತಿದ್ದಾರೆ. ಇದನ್ನು ಕೊನೆ ಮಾಡುವಂತಹ ಪ್ರಯತ್ನ ಮಾಡಬೇಕೆಂದು ತಮ್ಮ ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತಾ ಈ ರಾಜ್ಯಪಾಲರ ಭಾಷಣದಲ್ಲಿ ಏನೂ ಈ ರಾಜ್ಯದ ಜನಪರ ಕಾರ್ಯಕ್ರಮಗಳಲ್ಲಿ ಹೊಸ ಯೋಜನೆಗಳು ಏನೂ ಇಲ್ಲ. ರೈತನನ್ನು ಬಡವನನ್ನು ಹರಿಜನ ಗಿರಿಜನ ಬಂಧುಗಳನ್ನು ಮತ್ತು ನಿರುದ್ಯೋಗಿ ಯುವಕರನ್ನು ಮೇಲೆಬ್ಬಿಸುವಂತಹ ಯಾವುದೇ ಕಾರ್ಯಕ್ರಮ ಇಲ್ಲದೇ ಇರುವಂತಹ ಈ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡುತ್ತಾ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ,

ಪ್ರಕಟಣೆ

ಛೇರ್ಮನ್.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಪ್ರಕಟಣೆ ಬಂದಿದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಾ. ೨೯–೩–೯೦ ರಂದು ಅನುಮೋದಿಸಲಾಯಿತು ಎಂಬುದನ್ನು ತಿಳಿಸುತ್ತಿದ್ದೇನೆ.

"ಕರ್ನಾಟಕ ಧನ ವಿನಿಯೋಗ ವಿಧೇಯಕ–೧೯೯೦"

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಸಭಾಧ್ಯಕ್ಷಿಣಿಯವರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ನಾನು ಆಗಲೇ ಇಂಟರಪ್ಟ್ ಮಾಡಬೇಕೆಂದಿದ್ದೆ. ಏಕೆಂದರೆ, ಮಧ್ಯಾಹ್ನ ಇಲ್ಲಿ ಗಲಾಟೆ ನಡೆದಿದೆ.

ಛೇರ್ಮನ್.—ಈಗ ಬಂದರು ಮತ್ತು ಮೀನುಗಾರಿಕೆ ಹಾಗೂ ನಗರಾಭಿವೃದ್ಧಿ ಖಾತೆಯ ಸನ್ಮಾನ್ಯ ಸಚಿವರು ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಧವಳೇಶ್ವರದಲ್ಲಿ ತಾ. ೧೨–೩–೯೦ರಂದು ಸಂಭವಿಸಿದ ದೋಣಿ ದುರಂತಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಸದನಕ್ಕೆ ನೀಡುತ್ತಾರೆ.

ಮಂತ್ರಿಯವರಿಂದ ಹೇಳಿಕೆ

ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಧವಳೇಶ್ವರದಲ್ಲಿ ನಡೆದ ದೋಣಿ ದುರಂತದ ಬಗ್ಗೆ

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮಾನ್ಯ ಬಂದರು ಮತ್ತು ಮೀನುಗಾರಿಕೆ ಹಾಗೂ ನಗರಾಭಿವೃದ್ಧಿ ಖಾತೆಯ ಸಚಿವರು).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಧವಳೇಶ್ವರದಲ್ಲಿ ತಾ. ೧೨–೩–೯೦ರಂದು ಸಂಭವಿಸಿದ ದೋಣಿ ದುರಂತದ ಬಗ್ಗೆ ಈ